The question is :

"That Clauses 2, 3 and Schedule do stand part of the Bill."

The Motion was adopted

Clauses 2, 3 and the Schedule were added to the Bill.

Clause 1, Etc.

MADAM SPEAKER.—

I will now put Clause 1, of the Bill to the vote of the House.

The question is :

"That Clause 1, the long Title, the Preamble and the Enacting Formula of the Bill do stand part of the Bill."

The Motion was adopted

Clause 1, the long Title, the Preamble and the Enacting Formula were added to the Bill.

Motion to Pass

Sri M. Y. GHORPADE —

I beg to move.

"That the Mysore Appropriation (No. 4) Bill, 1973, be passed."

MADAM SPEAKER.—

I will put the Bill to the vote of the House.

The question is :

"That the Mysore Appropriation (No. 4) Bill, 1973, be passed."

The motion was adopted and the Bill was passed.

PRIVATE MEMBERS' RESOLUTIONS

(i) re : converting Bangalore-Honnavar 'State-Highway' as "National High-way"

ಶ್ರೀ ಎಚ್. ಎಸ್. ಸಿದ್ದಪ್ಪ (ಅರಸೀಕೆರೆ).—ಮಾನ್ಯ ಅಧ್ಯಕ್ಷರೆ, ಕಳೆದ ವಾರ ಖಾಸಗೀ ನಿರ್ಣಯದ ಮೇಲೆ ಮಾತನಾಡುತ್ತಾ ಬೆಂಗಳೂರು ಹಾಗೂ ಹೊನ್ನಾವರ ರಸ್ತೆಗಳನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮಾಡುವುದರ ಬಗ್ಗೆ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೇನೆ. ಮೊನ್ನೆ ನಮ್ಮ ರಾಜ್ಯದಲ್ಲಿ ಮಾನ್ಯ ಕೇಂದ್ರದ ಸಚಿವರೊಬ್ಬರು ಬಂದು ಮಂಗಳೂರಿನಲ್ಲಿ ಭಾಷಣ ಮಾಡುತ್ತಾ ಸುಮಾರು ೨೨ ಕೋಟಿ ರೂಪಾಯಿಗಳನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮಾಡುವುದಕ್ಕೆ ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ.

ನಾನು ಕಳೆದ ಸಾರಿ ಮಾತನಾಡುತ್ತಾ ಹೇಳಿದ್ದೇನೆ. ದುರದೃಷ್ಟದಿಂದ ಈ ಇಲಾಖೆಯ ಸಂಬಂಧಪಟ್ಟ ಸಚಿವರು ಇಲ್ಲಿ ಇಲ್ಲ, ಅವರು ಇದ್ದಿದ್ದರೆ ಅವರ ಮನಸ್ಸಿಗೆ ಪರಿಣಾಮವಾಗುವ ಹಾಗೆ, ಅವರು ರಾಷ್ಟ್ರೀಯ ಹೆದ್ದಾರಿಯನ್ನು ಮಾಡಬೇಕು ಎನ್ನುವ ಹಾಗೆ ಅವರ ಮನಸ್ಸನ್ನು ಒಲಿಸುವುದಕ್ಕೆ ಪ್ರಯತ್ನ ನಾಡುತ್ತಿದ್ದೆ ಎಂದು ಹೇಳಿದ್ದೇನೆ. ಇವೊತ್ತು ಮಾನ್ಯ ಮಂತ್ರಿಗಳಾದ ಶ್ರೀಮಾನ್ ಚನ್ನಬಸಪ್ಪನವರು ಈ ಸಭೆಯಲ್ಲಿ ಇದ್ದಾರೆ. ಆದ್ದರಿಂದ ಅವರು ನಾನು ಹೇಳುವುದನ್ನು ಸ್ವಲ್ಪ ಲಾಲಿಸಿ ಕೇಳಬೇಕು. ನಾವು ಏನು ಹೇಳಬೇಕೆಂದಿದ್ದೇವೋ ಅದನ್ನು ಹೇಳುವುದಕ್ಕೆ ಅವಕಾಶವನ್ನು ಕೊಡಬೇಕು. ಆ ಅವಕಾಶವನ್ನು ಕೊಡುವುದೇ ಬಹಳ ಕಷ್ಟ. ಕೊಟ್ಟಿದ್ದ ಅವಕಾಶದಲ್ಲಿ ನಾವು ಹೇಳುವುದನ್ನು ಮಾನ್ಯ ಮಂತ್ರಿಗಳು ಸರಿಯಾಗಿ ಲಾಲಿಸದಿದ್ದರೆ ನಮ್ಮ ಭಾಷಣಗಳಿಂದ ಏನೂ ಪ್ರಯೋಜನವಾಗುವುದಿಲ್ಲ. ನಾವು ಹೇಳುವುದೆಲ್ಲಾ ಅರಣ್ಯ ರೋದನವಾಗುತ್ತದೆ. ಆದ್ದರಿಂದ ನಾನು ಮಾನ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ ದಯವಾಡಿ ಗಮನಿಸಬೇಕು. ಬೆಂಗಳೂರಿನಿಂದ ಹೊನ್ನಾವರಕ್ಕೆ ಹೋಗತಕ್ಕಂಥ ರಸ್ತೆಯನ್ನು ತುಮಕೂರಿನ ವರೆಗೂ ಈಗಾಗಲೇ ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮಾಡಲಾಗಿದೆ. ಈಗ ತುಮಕೂರಿನಿಂದ ಮುಂದಕ್ಕೆ ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮಾಡಿದರೆ ಬಹುತೇಕ ರಾಜ್ಯದ ಸಂಪನ್ಮೂಲಗಳನ್ನು ನೇರವಾದ ದಾರಿಯಲ್ಲಿ ವಿತರಣೆ ಮಾಡುವುದಕ್ಕೆ, ಪ್ರತಿತರ ಉತ್ಪಾದನೆಯನ್ನು ಸರಿಯಾದ ಬೆಲೆಗೆ ಮಾರುವುದಕ್ಕೆ ತನ್ಮೂಲಕ ರಾಜ್ಯದ ಆರ್ಥಿಕ ತರಿಸ್ಥಿತಿಯನ್ನು ಹೆಚ್ಚಿಸುವುದಕ್ಕೆ ಸಹಾಯ ಮಾಡಿದಂತಾಗುತ್ತದೆ. ಇದನ್ನು ನಾನು ಯಾವುದೇ ಒಂದು ಕ್ಷೇತ್ರಕ್ಕೆ ಸೀಮಿತವಾಗಿ ಹೇಳುತ್ತಿಲ್ಲ. ರಾಜದಾನಿ ಬೆಂಗಳೂರಿನಿಂದ ನೇರವಾಗಿ ಮಹಾರಾಷ್ಟ್ರಕ್ಕೆ ಸೇರಿದ ಬೊಂಬಾಯಿಗೆ ಹೋಗತಕ್ಕಂಥ ಹೆದ್ದಾರಿಯ ಬಗ್ಗೆ ಹಾಗೂ ಈ ನಿರ್ಣಯಕ್ಕೆ ಸಂಬಂಧಪಟ್ಟ ಹಾಗೆ ಕಳೆದ ಶನಿವಾರ ಈ ಸಭೆಯಲ್ಲಿ ಏನು ಚರ್ಚೆ ನಡೆದಿದೆ ಆ ನಡವಳಿಕೆಗಳನ್ನು ಮಾನ್ಯ ಲೋಕೋಪಯೋಗಿ ಸಚಿವರು ದಯಮಾಡಿ ತರಿಸಿಕೊಂಡು ನೋಡಬೇಕು ಯಾವ ದೃಷ್ಟಿಯಿಂದ ನಾನು ಈ ವಿಚಾರವನ್ನು ಹೇಳುತ್ತಿದ್ದೇನೆ ಎನ್ನುವುದನ್ನು ಮಾನ್ಯ ಮಂತ್ರಿಗಳು ಮನವರಿಕೆ ಮಾಡಿಕೊಂಡು ಇದನ್ನು ಪರಿಶೀಲನೆ ಮಾಡಬೇಕು. ನಮ್ಮ ರಾಜ್ಯದ ರಾಷ್ಟ್ರೀಯ ಹೆದ್ದಾರಿಯನ್ನು ಮಾಡತಕ್ಕ ಯೋಜನೆಯಲ್ಲಿ ನಾನು ನನ್ನ ನಿರ್ಣಯದಲ್ಲಿ ತಂದಿರುವ ರಾಷ್ಟ್ರೀಯ

ಹೆದ್ದಾರಿಯನ್ನು ಮಾಡುವ ವಿಷಯ ಕೈಬಿಟ್ಟು ಹೋಗಿದೆ. ಅದನ್ನು ರಾಷ್ಟ್ರೀಯ ಹೆದ್ದಾರಿಯಾಗಿ ಮಾಡಬೇಕು ಎಂದು ನಾನು ಆ ದಿವಸ ಮನವಿ ಮಾಡಿದ್ದೇನೆ. ನಾನು ಈ ನಿರ್ಣಯವನ್ನು ಈ ಸಭೆಯಲ್ಲಿ ಮಾನ್ಯ ಕಂದಾಯ ಸಚಿವರಾದ ಶ್ರೀಮಾನ್ ಹುಚ್ಚಮಾಸ್ತಿಗೌಡರು ಈ ಸಭೆಯಲ್ಲಿದ್ದರು. ಆಗ ನಾನು ಹೇಳಿದ್ದೇನೆ ಮಾನ್ಯ ಲೋಕೋಪಯೋಗಿ ಶಾಖೆಯ ಸಚಿವರು ಈಗ ಈ ಸಭೆಯಲ್ಲಿ ಇದ್ದಿದ್ದರೆ ಈ ಬೆಂಗಳೂರಿನಿಂದ ಹೊನ್ನಾವರಕ್ಕೆ ಹೋಗುವ ರಸ್ತೆಯನ್ನು ಹೆದ್ದಾರಿಯನ್ನಾಗಿ ಮಾಡುವುದರ ಬಗ್ಗೆ ಅವರ ಮನಸ್ಸಿಗೆ ಚನ್ನಾಗಿ ಪರಿಣಾಮವಾಗುವ ಹಾಗೆ ಅವರ ಮನಸ್ಸನ್ನು ಒಲಿಸುತ್ತಿದ್ದೆ ಎಂದು ಆಗ ನಾನು ಹೇಳಿದ್ದೇನೆ. ಹಾಗಾದರೆ ಲೋಕೋಪಯೋಗಿ ಸಚಿವರೇ ಬಂದು ಉತ್ತರ ಹೇಳುತ್ತಾರೆಯೋ ಎಂದು ಮಾನ್ಯ ಮಂತ್ರಿಗಳಾದ ಶ್ರೀಮಾನ ಹುಚ್ಚಮಾಸ್ತಿಗೌಡರು ಕೋಪ ಮಾಡಿಕೊಂಡರು. ಈ ರಾಷ್ಟ್ರೀಯ ಹೆದ್ದಾರಿ ಏನಿದೆ ಇದು ಶ್ರೀಮಾನ ಹುಚ್ಚಮಾಸ್ತಿಗೌಡರ ಊರಿನಿಂದ ಬೆಂಗಳೂರಿಗೆ ಮತ್ತು ಬೊಂಬಾಯಿಗೆ ಬೆಲ್ಲವನ್ನು ಸಾಗಿಸುವುದಕ್ಕೆ ಒಳ್ಳೆಯ ದಾರಿ. ಆದ್ದರಿಂದ ಇದು ಬಹಳ ಪ್ರಾಮುಖ್ಯವಾದ ರಾಷ್ಟ್ರೀಯ ಹೆದ್ದಾರಿ. ನಮ್ಮ ಇಡೀ ಮೈಸೂರು ರಾಜ್ಯದ ರೈತರ ವ್ಯವಸಾಯ ಉತ್ಪನ್ನವನ್ನು ಕೈಗಾರಿಕಾ ಉತ್ಪನ್ನವನ್ನು ಕಡಿಮೆ ಖರ್ಚಿನಲ್ಲಿ ಇತರ ರಾಜ್ಯಗಳಿಗೆ ತಲುಪಿಸುವುದಕ್ಕೆ ಒಂದು ಹತ್ತಿರದ ರಸ್ತೆಯಾಗುತ್ತದೆ. ಜೊತೆಗೆ ಮಹಾರಾಷ್ಟ್ರ ಗುಜರಾತ ಮತ್ತು ವಿದೇಶಗಳಿಗೆ ಹೋಗ ತಕ್ಕಂಥಾ ಬಂದರುಗಳಿಗೂ ಇದು ನೇರವಾದ ಹೆದ್ದಾರಿ ಆಗುತ್ತದೆ. ಇದನ್ನು ಮಾನ್ಯ ಮಂತ್ರಿಗಳು ಮನವರಿಕೆ ಮಾಡಿಕೊಂಡು ಇದನ್ನು ಮಾಡಿಕೊಡಬೇಕು ಬೆಂಗಳೂರಿನಿಂದ ಸುಮಾರು ೫೦೦ ಲಾರಿಗಳಿಗೆ ಕಡಿಮೆ ಇಲ್ಲದೆ ಪ್ರತಿದಿವಸ ಈ ರಸ್ತೆಯಲ್ಲಿ ಹೋಗತಕ್ಕಂಥಾ ಅವಕಾಶ ಇದೆ. ಈಗಲೂ ಕೂಡ ಪ್ರತಿದಿವಸ ನಮ್ಮ ರಾಜ್ಯದಿಂದ ಈ ರಸ್ತೆಯಲ್ಲಿ ಬೊಂಬಾಯಿಗೆ ನೇರವಾಗಿ ತುಮಕೂರು, ತಿಪಟೂರು, ಅರಸಿಕೆರೆ, ಕಡೂರು, ಬೀರೂರು, ತರೀಕೆರೆ, ಭದ್ರಾವತಿ ಹಾಗೂ ಶಿವಮೊಗ್ಗ ಮಾರ್ಗವಾಗಿ ನೂರಾರು ಲಾರಿಗಳು ಹೋಗುತ್ತವೆ. ಇಷ್ಟೊಂದು ಲಾರಿಗಳು ಹೋಗುವಾಗ ಎಷ್ಟೋ ಅಪಘಾತಗಳು ಆಗುತ್ತವೆ. ಆದ್ದರಿಂದ ಈ ಬೆಂಗಳೂರು—ಹೊನ್ನಾವರ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮಾಡಿದರೆ ಆಗ ರಾಜ್ಯದ ಆರ್ಥಿಕ ಹೊಣೆಗಾರಿಕೆ ಇದರ ಬಗ್ಗೆ ಸ್ವಲ್ಪ ಕಡಿಮೆಯಾಗುತ್ತದೆ. ಮುಂದೆ ಕೇಂದ್ರ ಸರ್ಕಾರದವರು ಇದಕ್ಕೆ ಹಣವನ್ನು ತೊಡಗಿಸುತ್ತಾರೆ. ಈ ದೃಷ್ಟಿಯಿಂದ ಇದನ್ನು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಜನತೆಯ ದೃಷ್ಟಿಯಿಂದ, ರಾಜ್ಯದ ದೃಷ್ಟಿಯಿಂದ ಇದನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮಾಡಬೇಕೆಂದು ನಾನು ಮಾನ್ಯ ಅಧ್ಯಕ್ಷರ ಮುಖಾಂತರ ಸರ್ಕಾರಕ್ಕೆ ಕಳಕಳಿಯಿಂದ ಮನವಿಯನ್ನು ಸಲ್ಲಿಸಿ ನಾನು ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

†ಶ್ರೀ ಟಿ. ಎಂ. ಮಂಜುನಾಥ (ತಿಪಟೂರು).— ಮಾನ್ಯ ಅಧ್ಯಕ್ಷರೇ ನಮ್ಮ ಮಾನ್ಯ ಸ್ನೇಹಿತರಾದ ಶ್ರೀಮಾನ್ ಸಿದ್ದಪ್ಪನವರು ಈ ಸಭೆಯ ಮುಂದೆ ತಂದಿರತಕ್ಕ

ನಿರ್ಣಯಕ್ಕೆ ನನ್ನ ಬೆಂಬಲವನ್ನು ವ್ಯಕ್ತಪಡಿಸುತ್ತಾ ಈ ಬೆಂಗಳೂರು— ಹೊನ್ನಾವರ ರಸ್ತೆಯನ್ನು ಏತಕ್ಕೋಸ್ಕರ ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮಾಡಬೇಕು ಎನ್ನುವುದಕ್ಕೆ ನಾನು ಕೆಲವು ಕಾರಣಗಳನ್ನು ತಮ್ಮ ಮುಂದೆ ಇಡುತ್ತೇನೆ. ಒಹುಶಃ ಈಗಿನ ಒಂದು ಕಾಲದಲ್ಲಿ ತ್ವರಿತವಾಗಿ ಜನತೆಗೆ ಸಲಕರಣೆಗಳನ್ನು ಒದಗಿಸುವ ಸ್ಥಿತಿಯಲ್ಲಿ ನಮ್ಮ ರಾಜ್ಯ ಇರಬೇಕಾದರೆ ಕೆಲವು ಅಂಕಿ ಅಂಶಗಳನ್ನು ತೆಗೆದುಕೊಳ್ಳಬೇಕು. ತಿಪಟೂರು ಮತ್ತು ಅರಸೀಕೆರೆಯಿಂದ ಯಾವ ಯಾವ ವರ್ಷಗಳಲ್ಲಿ ರೈಲ್ವೆ ಟ್ರಾನ್ಸ್ ಪೋರ್ಟಿನಿಂದ ಎಷ್ಟು ಸಾಮಗ್ರಿಗಳು ಹೊರಗಡೆಗೆ ಗುಜರಾತ, ಮಹಾರಾಷ್ಟ್ರ, ರಾಜಸ್ಥಾನ ಮುಂತಾದ ಪ್ರದೇಶಗಳಿಗೆ ಹೋಗುತ್ತಿತ್ತು, ಈಗ ರಸ್ತೆಗಳ ಮುಖಾಂತರ ಎಷ್ಟು ಸಾಮಗ್ರಿಗಳು ಹೋಗುತ್ತಿವೆ ಎನ್ನುವಂತಹ ಅಂಕಿ ಅಂಶಗಳನ್ನು ತಾವು ಪಡೆದರೆ ತಮಗೆ ಆಗ ಇದು ವೇದ್ಯವಾಗುತ್ತದೆ. ದೇಶದ ಸಂಪತ್ತನ್ನು ಹೆಚ್ಚಿಗೆ ಮಾಡುವುದಕ್ಕೆ ಮತ್ತು ರೈತರು ಬೆಳೆದಂತಹ ಪದಾರ್ಥಗಳನ್ನು ಬಳಕೆದಾರರಿಗೆ ಬೇಕಾದಂತಹ ಇತರ ಪದಾರ್ಥಗಳನ್ನು ಅತಿ ಶೀಘ್ರವಾಗಿ ಅವರಿಗೆ ಮುಟ್ಟಿಸ ಬೇಕಾಗಿದ್ದರೆ ಈ ಒಂದು ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯಾಗಿ ಮಾಡುವುದರಿಂದ ಆ ಉದ್ದೇಶ ಸಫಲವಾಗುತ್ತದೆ ಎನ್ನುವ ವಿಚಾರ ತಮಗೆಲ್ಲರಿಗೂ ಗೊತ್ತಿರುವ ವಿಚಾರ ಈ ವಿಚಾರದಲ್ಲಿ ಸರ್ಕಾರದವರು ಅಂಕಿ ಅಂಶಗಳನ್ನು ಸಂಗ್ರಹಣೆ ಮಾಡಬೇಕು ಈ ಒಂದು ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮಾಡುವುದಕ್ಕೆ ಸರ್ಕಾರದವರು ಬಹಳ ಪ್ರಾಮುಖ್ಯತೆಯನ್ನು ಕೊಡಬೇಕು. ಬೆಂಗಳೂರಿನಿಂದ, ತುಮಕೂರು, ತಿಪಟೂರು, ಅರಸೀಕೆರೆ, ಕಡೂರು, ಬೀರೂರು, ತರೀಕೆರೆ, ಭದ್ರಾವತಿ ಹಾಗೂ ಶಿವಮೊಗ್ಗ ಮಾರ್ಗವಾಗಿ ಹೊನ್ನಾವರಕ್ಕೆ ಹೋಗುವ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಪರಿವರ್ತನೆ ಮಾಡಬೇಕು ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ನಾನು ಚಿಕ್ಕವಯಸ್ಸಿನವನಾಗಿದ್ದಾಗ ನಮ್ಮಲ್ಲಿರತಕ್ಕ ಪದಾರ್ಥಗಳೆಲ್ಲವೂ ರೈಲ್ವೆ ಗೂಡ್ಸ್ ಮುಖಾಂತರವೇ ಹೋಗುತ್ತಿತ್ತು ಈಗ ೧೦೦ ಕ್ಕೆ ೫೦ ಪ್ರದಾರ್ಥಗಳು ಲಾರಿ ಟ್ರಾನ್ಸ್‌ಪೋರ್ಟಿನಲ್ಲಿ ಹೋಗುತ್ತಿದೆ. ಎಲ್ಲಾ ಕಡೆಗಳಲ್ಲಿಯೂ ಲಾರಿಗಳಲ್ಲಿ ಸಾಮಾನುಗಳನ್ನು ಸಾಗಿಸುವುದಕ್ಕೆ ಟ್ರಾನ್‌ಪೋರ್ಟ್ ಏಜೆನ್ಸಿಗಳೂ ಮತ್ತು ದೊಡ್ಡ ದೊಡ್ಡ ಸಂಸ್ಥೆಗಳು ಸ್ಥಾಪಿತವಾಗಿವೆ. ಅವರಿಗೆ ವೇಗವಾಗಿ ಹೋಗತಕ್ಕಂಥಾ ಟ್ರಾನ್ಸ್‌ಪೋರ್ಟಿಗೆ ಬೇಕಾದಂತಹ ರಸ್ತೆಗಳು ಅವಶ್ಯಕತೆ ಇದೆ. ಆದ್ದರಿಂದ ಆ ರಸ್ತೆಗಳ ಮಾರ್ಪಾಟು ಆಗಬೇಕು. ಈ ಎಲ್ಲಾ ಕಾರಣಗಳಿಂದ ಈ ಬೆಂಗಳೂರು— ಹೊನ್ನಾವರ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಂಡು ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಚ್. ಎಂ. ಚನ್ನಬಸಪ್ಪ— (ಲೋಕೋಪಯೋಗಿ ಹಾಗೂ ವಿದ್ಯುಚ್ಛಕ್ತಿ ಶಾಖೆಗಳ ಮಂತ್ರಿಗಳು). ಮಾನ್ಯ ಅಧ್ಯಕ್ಷರೇ, ಈ ನಿರ್ಣಯಕ್ಕೆ ಹೆಚ್ಚು ಭಾಷಣ ಮಾಡಬೇಕಾದ್ದು ಅನಾವಶ್ಯಕ ಎಂದು ನನ್ನ ಅಭಿಪ್ರಾಯ. ಬೆಂಗಳೂರಿನಿಂದ

ಹೊನ್ನಾವರಕ್ಕೆ ಹೋಗತಕ್ಕಂಥಾ ಮಾರ್ಗ ಏನಿದೆ ಈ ಮಾರ್ಗವನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮಾಡಬೇಕು ಎಂದು ಒಂದು ನಿರ್ಣಯವನ್ನು ಈ ಸಭೆಯಲ್ಲಿ ಮಾನ್ಯ ಸದಸ್ಯರು ತಂದಿದ್ದಾರೆ. ಈ ನಿರ್ಣಯ ವಾಸ್ತವಿಕವಾಗಿ ಅಭಿನಂದಾರ್ಹ ವಾದದ್ದು. ಇದರಲ್ಲಿ ನಮಗೆ ನಿಮಗೆ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಇದು ಈಗಾಗಲೆ ಬೆಂಗಳೂರಿನಿಂದ ತುಮಕೂರುವರೆಗೆ ರಾಷ್ಟ್ರೀಯ ಹೆದ್ದಾರಿಯಾಗಿದೆ. ಅಲ್ಲಿಂದ ತಿಪಟೂರು ಮಾರ್ಗವಾಗಿ ಅರಸೀಕೆರೆ, ಕಡೂರು, ಬೀರೂರು, ತರೀಕೆರೆ, ಭದ್ರಾವತಿ ಹಾಗೂ ಶಿವಮೊಗ್ಗ ಮಾರ್ಗವಾಗಿ ಹೊನ್ನಾವರಕ್ಕೆ ಒಟ್ಟು ಸುಮಾರು ೩೨೦ ಕಿಲೋಮೀಟರ್ ಆಗುತ್ತದೆ. ಈ ರಸ್ತೆ ಬಹಳ ಮುಖ್ಯವಾದದ್ದು. ಶಿವಮೊಗ್ಗ ದೊಡ್ಡ ಪಟ್ಟಣ, ಭದ್ರಾವತಿಯಲ್ಲಿ ದೊಡ್ಡ ಕೈಗಾರಿಕೆ ಇದೆ. ಹೊನ್ನಾವರದಲ್ಲಿ ಒಂದು ಮುಖ್ಯವಾದ ಬಂದರು ಇದೆ. ಆದ್ದರಿಂದ ಬೆಂಗಳೂರಿನಿಂದ ಹೊನ್ನಾವರಕ್ಕೆ ಈ ತಿಪಟೂರು, ಅರಸೀಕೆರೆ, ಕಡೂರು, ಬೀರೂರು, ಭದ್ರಾವತಿ, ಶಿವಮೊಗ್ಗಾ ಮಾರ್ಗವಾಗಿ ಒಂದು ನೇರವಾದ ಸಂಪರ್ಕವನ್ನು ಕಲ್ಪಿಸುವುದರಿಂದ ಬೆಂಗಳೂರಿನಿಂದ ನೇರವಾಗಿ ಹೊನ್ನಾವರಕ್ಕೆ ಪದಾರ್ಥಗಳನ್ನು ರವಾನೆ ಮಾಡುವುದಕ್ಕೂ ಮತ್ತು ಇತರ ಎಲ್ಲಾ ಭಾಗಗಳಿಂದ ಹೊನ್ನಾವರಕ್ಕೆ ಪದಾರ್ಥಗಳನ್ನು ರವಾನೆ ಮಾಡುವುದಕ್ಕೆ ಎಲ್ಲಾ ಭಾಗಗಳಿಗೂ ಅನುಕೂಲವಾಗುತ್ತದೆ ಹಾಗೂ ಹೊನ್ನಾವರ ಬಂದರಿಂದ ಪದಾರ್ಥಗಳನ್ನು ಪರದೇಶಗಳಿಗೂ ರವಾನೆ ಮಾಡುವುದಕ್ಕೂ ಅನುಕೂಲವಾಗುತ್ತದೆ ಎನ್ನುವುದರಲ್ಲಿ ನಮಗೂ ನಿಮಗೂ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಈಗ ನಮ್ಮಲ್ಲಿ ೧೯೨೦ ಕಿಲೋಮೀಟರ್ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯಾಗಿ ಪರಿವರ್ತನೆ ಮಾಡಿದೆ. ಈ ಮಾನ್ಯ ಸಭೆಗೆ ನಾನು ತಿಳಿಸುವುದಾದರೆ ಈಗಾಗಲೇ ೩೧೦೩ ಕಿಲೋಮೀಟರ್ ಉದ್ದದ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮಾಡಬೇಕು ಎಂದು ರಾಜ್ಯ ಸರ್ಕಾರದವರು ಕೇಂದ್ರ ಸರಕಾರಕ್ಕೆ ಸಿಫಾರಸ್ಸು ಮಾಡಿದ್ದಾರೆ. ಅದರಲ್ಲಿ ೩೨೦ ಕಿಲೋಮೀಟರ್ ಇರತಕ್ಕಂಥ ತುಮಕೂರು, ಅರಸೀಕೆರೆ, ಶಿವಮೊಗ್ಗ, ಸಾಗರ ಮತ್ತು ಹೊನ್ನಾವರ ಈ ಒಂದು ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮಾಡಬೇಕೆಂದು ಈಗಾಗಲೇ ಕೇಂದ್ರಸರಕಾರಕ್ಕೆ ಶಿಫಾರಸ್ ಮಾಡಿದ್ದೇವೆ ಆದ್ದರಿಂದ ಈ ಬಗ್ಗೆ ಸರ್ಕಾರ ಅಸಕ್ತಿ ವಹಿಸಿಲ್ಲ ಎಂದು ತಾವು ಯಾರೂ ಭಾವನೆ ಮಾಡಬಾರದು. ತಾವು ಈ ನಿರ್ಣಯ ತರುವುದಕ್ಕೂ ಮೊದಲೇ ನಾವು ಈ ಬಗ್ಗೆ ಕೇಂದ್ರಕ್ಕೆ ಶಿಫಾರಸ್ ಮಾಡಿದ್ದೇವೆ. ಇದರ ಬಗ್ಗೆ ಕೇಂದ್ರ ಸರ್ಕಾರದವರು ಒಂದು ನೀತಿಯನ್ನು ಹಾಕಿಕೊಂಡಿದ್ದಾರೆ. ಅದರಂತೆ ಮುಂದಿನ ಐನೇ ಪಂಚವಾರ್ಷಿಕ ಯೋಜನೆಯಲ್ಲಿ ಎಷ್ಟು ರಸ್ತೆಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಮಾಡಬೇಕು ಎಂಬ ಬಗ್ಗೆ ಒಂದು ನಿರ್ಣಯವನ್ನು ಇಟ್ಟುಕೊಂಡಿದ್ದಾರೆ. ಅವರ ಒಂದು ನೀತಿಗೆ ಒಳಪಟ್ಟು ನಾವು ಕಳುಹಿಸಿರುವ ೯ ರಸ್ತೆಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಮಾಡಬೇಕೆಂದು ಒತ್ತಾಯ ತಂದಿದ್ದೇವೆ. ಮೊನ್ನೆ ಸಹ ನಾನು

ಇದಕ್ಕೆ ಸಂಬಂಧಪಟ್ಟ ಮಂತ್ರಿಗಳಾದ ಶ್ರೀ ರಾಜಬಹದ್ದೂರ್ ಅವರನ್ನು ಭೇಟಿ ಯಾಗಿದ್ದ ಕಾಲದಲ್ಲಿ ನನ್ನ ಅಭಿಪ್ರಾಯವನ್ನೂ ಸಹ ಅವರಿಗೆ ಮನಗಾಣಿಸಿದ್ದೇನೆ. ಇದರ ಜೊತೆಗೆ ನಾವು ಮಾಡಿರುವ ಎಲ್ಲ ಶಿಫಾರಸ್ಸಿಗೂ ಸಹ ಮನ್ನಣೆ ದೊರಕುವಂತೆ ಸಾಧ್ಯವಾದಷ್ಟು ಪ್ರಯತ್ನ ಮಾಡುತ್ತೇವೆ. ಇಷ್ಟು ಭರವಸೆಯನ್ನು ಮಾತ್ರ ಈಗ ನಾನು ಕೊಡಬಲ್ಲೆ. ಈ ಒಂದು ಭರವಸೆಯ ದೃಷ್ಟಿಯಿಂದ ತಾವು ಈ ನಿರ್ಣಯವನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

†ಶ್ರೀ ಎಚ್. ಎನ್. ಸಿದ್ದಪ್ಪ.— ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರ ಉತ್ತರ ಬಹಳ ವಿಚಿತ್ರವಾಗಿ ಕಾಣುತ್ತದೆ. ಏಕೆಂದರೆ, ಮಾನ್ಯ ಸಚಿವರು ಹೇಳಿದರು; ನಾವು ತಂದಿರುವ ನಿರ್ಣಯ ವಾಸ್ತವಿಕವಾಗಿ ಅಭಿನಂದನಾರ್ಹವಾದುದಾಗಿದೆ; ಆ ಬಗ್ಗೆ ನಮಗೂ ನಿಮಗೂ ಯಾವ ಭಿನ್ನಾಭಿಪ್ರಾಯವೂ ಇಲ್ಲ ಎಂದು ಹೇಳಿ, ಕೊನೆಗೆ ನಿರ್ಣಯವನ್ನು ವಾಪಸ್ ತೆಗೆದುಕೊಳ್ಳಿ ಎಂದು ಹೇಳಿದರು. ಈ ರೀತಿಯಲ್ಲಿ ಅಸೆಂಬ್ಲಿ ಕಾರ್ಯಕಲಾಪಗಳು ನಡೆಯುತ್ತದೆಂದು ನನಗೆ ಗೊತ್ತಿರಲಿಲ್ಲ. ಏಕೆಂದರೆ ನಾನು ಇದೇ ಮೊದಲ ಸಲ ಈ ಸಭೆಗೆ ಬಂದಿರುವುದು.

ಅಧ್ಯಕ್ಷರು — ಕೇಂದ್ರಸರ್ಕಾರಕ್ಕೆ ಶಿಫಾರಸ್ ಮಾಡಿದ್ದೇವೆಂದು ಹೇಳಿರುವುದರಿಂದ ತಾವು ಇನ್ನೂ ಮಾತನಾಡುವುದು ಏನಿದೆ?

ಶ್ರೀ ಎಚ್. ಎನ್. ಸಿದ್ದಪ್ಪ.— ನಾನು ಹೇಳುವುದನ್ನು ತಾವು ಸ್ವಲ್ಪ ಕೇಳಬೇಕು. ಮಗು ಅಳುತ್ತಿರುವಾಗ ಅದಕ್ಕೆ ಹಾಲು ಕೊಟ್ಟರೆ ಸಮ್ಮನಾಗುತ್ತದೆ. ಆದರೆ ಹಾಲು ಕೊಡದೆ ಹಾಗೇ ಸುಮ್ಮನಿರು ಎಂದರೆ ಹೇಗೆ ಸುಮ್ಮನಾಗುತ್ತದೆ? ಈಗ ಮಾನ್ಯ ಸಚಿವರು ಹೇಳುತ್ತಿರುವುದೂ ಅದೇ ರೀತಿಯಾಗಿದೆ. ಈ ವಿಷಯದಲ್ಲಿ ಮಾನ್ಯ ಸಚಿವರ ಆಸೆ ಏನಿದೆ, ಮತ್ತು ಏನು ಕ್ರಮ ತೆಗೆದುಕೊಂಡಿದ್ದಾರೆ, ಅದನ್ನೆಲ್ಲಾ ನಾನು ಒಪ್ಪಿಕೊಳ್ಳುತ್ತೇನೆ. ನಾನು ಹೋದ ಶನಿವಾರ ಕೂಡ ಇದರ ಅವಶ್ಯಕತೆ ಎಷ್ಟಿದೆ ಎಂಬುದನ್ನು ಹೇಳಿದ್ದೆ. ಮಾನ್ಯ ಸಚಿವರೂ ಸಹ ಒಪ್ಪಿಕೊಂಡರು. ಈಗಲೂ ಸಹ ಒಪ್ಪಿಕೊಂಡರು ಆದರೆ ನಿರ್ಣಯವನ್ನು ಮಾತ್ರ ವಾಪಸ್ ತೆಗೆದುಕೊಳ್ಳಿ ಎಂದು ಏತಕ್ಕೆ ಹೇಳಬೇಕು? ಈ ನಿರ್ಣಯವನ್ನು ವಿರೋಧಿಸುವವರು ಈ ಸಭೆಯಲ್ಲಿ ಯಾರೂ ಇಲ್ಲ. ಆದಕಾರಣ ಈ ನಿರ್ಣಯವನ್ನು ಸರ್ವಾನುಮತದಿಂದ ಪಾಸ್ ಮಾಡಿ ಕೇಂದ್ರಸರ್ಕಾರಕ್ಕೆ ಏತಕ್ಕೆ ಕಳಿಸಿಕೊಡಬಾರದು ಎಂದು ಕೇಳುತ್ತೇನೆ.

ಶ್ರೀ ಎಚ್. ಎಂ. ಚೆನ್ನಬಸಪ್ಪ — ಈಗಾಗಲೇ ಶಿಫಾರಸ್ ಮಾಡಿದ್ದೇವೆಂದು ಹೇಳಿದ್ದೇನೆ.

ಶ್ರೀ ಎಚ್. ಎನ್. ಸಿದ್ದಪ್ಪ — ತಾವು ನನ್ನ ತಾತನಂತೆ ಇದ್ದೀರಿ. ನಾನು ಹೇಳುವುದನ್ನು ಸ್ವಲ್ಪ ಕೇಳಬೇಕು. ಈ ನಿರ್ಣಯದ ಬಗ್ಗೆ ಏನಾದರು ಅಭ್ಯಂತರ ಇದ್ದರೆ ಹೇಳಲಿ, ನಾನು ವಾಪಸ್ ತೆಗೆದುಕೊಳ್ಳುತ್ತೇನೆ. ಆದರೆ ಇದರ ಬಗ್ಗೆ ಸರ್ಕಾರದವರದೂ ಸಹ ಯಾವ ಭಿನ್ನಾಭಿಪ್ರಾಯವಿಲ್ಲ. ಆದಕಾರಣ ಸರ್ವಾನು

ಮತದಿಂದ ಪಾಸ್ ಮಾಡೋಣ. ಇವರಿಂದ ಕೇಂದ್ರ ಸರ್ಕಾರದವರನ್ನು ಒತ್ತಾಯ ಮಾಡಿ ಕೇಳುವುದಕ್ಕೆ ನಿಮಗೂ ಸಹ ಒಂದು ರೀತಿಯ ಶಕ್ತಿ ಬರುತ್ತದೆ. It gives you strength to fight with the Centre. ಆದಕಾರಣ ಇದಕ್ಕೆ ಮೊದಲ ಆದ್ಯತೆ ಕೊಡಿ ಎಂದು ಅಧ್ಯಕ್ಷರ ಮೂಲಕ ತಮ್ಮನ್ನು ಕೈಮುಗಿದು ಕೇಳಿಕೊಳ್ಳುತ್ತೇನೆ. ತಾವು ಆಗುವುದಿಲ್ಲ ಎಂದು ಹೇಳಬೇಡಿ. ಇದನ್ನು ಸರ್ವಾನುಮತದಿಂದ ಪಾಸ್ ಮಾಡಿ ಕೇಂದ್ರ ಸರ್ಕಾರಕ್ಕೆ ಕಳಿಸಿಕೊಡೋಣ.

Sri H. M. CHANNABASAPPA.— If there is any material benefit that is going to be gained by adopting this resolution I have no objection. But I have already stated that we have taken action in the matter and no purpose would be served by putting this resolution to vote or the hon. Member pressing for the resolution.

ಶ್ರೀ ಎಚ್. ಎಸ್. ಸಿದ್ದಪ್ಪ.— ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಇದಕ್ಕೆ ಈ ಸಾಲಿನಲ್ಲಿಯೇ ಮೊದಲ ಆದ್ಯತೆ ಕೊಟ್ಟು ಸೇರಿಸುತ್ತೇವೆಂದು ಭರವಸೆ ಕೊಟ್ಟರೆ ವಾಪಸ್ ತೆಗೆದುಕೊಳ್ಳುತ್ತೇನೆ.

ಶ್ರೀ ಎಚ್. ಎಂ. ಚೆನ್ನಬಸಪ್ಪ — ಕೇಂದ್ರ ಸರ್ಕಾರಕ್ಕೆ ಶಿಫಾರಸ್ ಮಾಡಿದ್ದೇನೆಂದು ಹೇಳಿದಮೇಲೆ ತಿರುಗಿ ಹೇಳುವುದು ಏನಿದೆ; ಇದರ ಬಗ್ಗೆ ಕೇಂದ್ರದಲ್ಲಿ ಸಂಬಂಧಪಟ್ಟ ಮಂತ್ರಿಗಳಿಗೆ ಬರೆದಿರುವುದು ಅಷ್ಟೇ ಅಲ್ಲ, ಅವರ ಜೊತೆಯಲ್ಲಿ ಮಾತನಾಡಿ ಆದಷ್ಟೂ ಜಾಗ್ರತೆ ಇದಕ್ಕೆ ಪ್ರೈಯಾರಿಟಿ ಕೊಟ್ಟು ಕೆಲಸ ಮಾಡಬೇಕೆಂದು ಹೇಳಿದ್ದೇನೆ. ಅದ್ದರಿಂದ ಇದನ್ನು ಇಷ್ಟಕ್ಕೇ ಬಿಟ್ಟು, ನನ್ನಲ್ಲಿ ತಾವು ಭರವಸೆ ಇಡಿ.

ಶ್ರೀ ಎಚ್. ಎಸ್. ಸಿದ್ದಪ್ಪ.— ನಿರ್ಣಯವನ್ನು ವಾಪಸ್ ಪಡೆಯಲು ಸಭೆಯ ಅನುಮತಿ ಬೇಡುತ್ತೇನೆ.

MADAM SPEAKER.— Is it the pleasure of the House that leave be granted to the hon. Member to withdraw the resolution?

HON. MEMBERS.— Yes.

The resolution was, by leave, withdrawn.

MADAM SPEAKER.— Next resolution is by hon. Member Sri Jayaprakash Narayan.

(ii) re: Construction of a Scs. and Sts. Financial Corporation in the state.

†ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ (ಸಿಸಿಗ) ಮಾನ್ಯ ಅಧ್ಯಕ್ಷರೇ,

ಈ ಕೆಳಕಂಡ ನಿರ್ಣಯವನ್ನು ಸಭೆಯ ಮುಂದೆ ಮಂಡಿಸುತ್ತೇನೆ.—

"ರಾಜ್ಯದಲ್ಲಿನ ಅನುಸೂಚಿತ ಜಾತಿ ಹಾಗೂ ಅನುಸೂಚಿತ ಆದಿಮ ಜಾತಿಗಳವರ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸುವ ಮಾರ್ಗೋಪಾಯಗಳನ್ನು ಸೂಚಿಸಲು ಹಾಗೂ ಉದ್ದೇಶಿತ ಪಂಚವಾರ್ಷಿಕ ಯೋಜನೆಯಲ್ಲಿ ಅನುಸೂಚಿತ ಜಾತಿ ಹಾಗೂ ಅನುಸೂಚಿತ ಆದಿಮ ಜಾತಿಗಳವರ ಸಲುವಾಗಿ ಇರತಕ್ಕ ಯೋಜನೆಗಳನ್ನು ಕಾರ್ಯಗತಗೊಳಿಸುವ ಬಗ್ಗೆ ಸಹಾಯ ನೀಡಲು ಅನುಸೂಚಿತ ಜಾತಿ ಹಾಗೂ ಅನುಸೂಚಿತ ಆದಿಮ ಜಾತಿಗಳವರ ವಿತ್ತೀಯ ಸಂಸ್ಥೆಯೊಂದನ್ನು ರಚಿಸಬೇಕು."

ಅಧ್ಯಕ್ಷರು.— ಈ ಕೆಳಕಂಡ ನಿರ್ಣಯ ಮಂಡಿಸಲ್ಪಟ್ಟಿದೆ.

"ರಾಜ್ಯದಲ್ಲಿನ ಅನುಸೂಚಿತ ಜಾತಿ ಹಾಗೂ ಅನುಸೂಚಿತ ಆದಿಮ ಜಾತಿಗಳವರ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸುವ ಮಾರ್ಗೋಪಾಯಗಳನ್ನು ಸೂಚಿಸಲು ಹಾಗೂ ಉದ್ದೇಶಿತ ಪಂಚವಾರ್ಷಿಕ ಯೋಜನೆಯಲ್ಲಿ ಅನುಸೂಚಿತ ಜಾತಿ ಹಾಗೂ ಅನುಸೂಚಿತ ಆದಿಮ ಜಾತಿಗಳವರ ಸಲುವಾಗಿ ಇರತಕ್ಕ ಯೋಜನೆಗಳನ್ನು ಕಾರ್ಯಗತಗೊಳಿಸುವ ಬಗ್ಗೆ ಸಹಾಯ ನೀಡಲು ಅನುಸೂಚಿತ ಜಾತಿ ಹಾಗೂ ಅನುಸೂಚಿತ ಆದಿಮ ಜಾತಿಗಳವರ ವಿತ್ತೀಯ ಸಂಸ್ಥೆಯೊಂದನ್ನು ರಚಿಸಬೇಕು."

†ಶ್ರೀ ಎಂ. ಎಚ್. ಜಯಪ್ರಕಾಶನಾರಾಯಣ.— ಮಾನ್ಯ ಅಧ್ಯಕ್ಷರೇ, ಈ ಮನೆಯ ಮುಂದೆ ಇಂತಹ ಒಂದು ನಿರ್ಣಯವನ್ನು ಮಂಡಿಸಿ, ಅದನ್ನು ಚರ್ಚೆ ಮಾಡುವ ಅವಕಾಶವನ್ನು ತಾವು ಕಲ್ಪನೆ ಮಾಡಿಕೊಟ್ಟಿರುವುದಕ್ಕಾಗಿ ತಮಗೂ ಮತ್ತು ಮಾನ್ಯ ಸದಸ್ಯರಿಗೂ ವಂದಿಸಿ, ಈ ರೀತಿಯ ಕಾರ್ಪೊರೇಷನ್ನನ್ನು ರಚನೆ ಮಾಡುವ ಅವಶ್ಯಕತೆ ಏನಿದೆ ಎಂಬ ಬಗ್ಗೆ ಕೆಲವು ಮುಖ್ಯ ಅಂಶಗಳನ್ನು ಈ ಸಭೆಯ ಮುಂದೆ ಮಂಡಿಸಲು ಪ್ರಯತ್ನ ಮಾಡುತ್ತೇನೆ. ಈ ರೀತಿಯ ಕಾರ್ಪೊರೇಷನ ಒಂದನ್ನು ರಚಿಸುವುದರಿಂದ ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಜನಾಂಗದವರ ಈಗಿನ ಆರ್ಥಿಕ ಸ್ಥಿತಿ, ಮತ್ತು ಅವರ ಸಮಾಜಿಕ ಸ್ಥಿತಿ ಎಷ್ಟರಮಟ್ಟಿಗೆ ಸುಧಾರಿಸುತ್ತದೆ ಎಂಬ ಬಗ್ಗೆ ಕೆಲವು ಅಂಶಗಳನ್ನು ಮೊದಲು ಸರ್ಕಾರದ ಗಮನಕ್ಕೆ ತರುತ್ತೇನೆ. ಇಂದು ನಮ್ಮ ದೇಶದ ಐವರು ಭಾರತೀಯರಲ್ಲಿ ಒಬ್ಬರು ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಜನಾಂಗದವರು ಇದ್ದಾರೆ. ಇವರನ್ನು ಹರಿಜನರು ಎಂಬ ಮತ್ತೊಂದು ಹೆಸರಿನಲ್ಲಿ ಕರೆಯಲಾಗುತ್ತಿದೆ. ಇನ್ನೂ ಮುಂದೆ ಹೋದರೆ ಇವರನ್ನು ಅಸ್ಪೃಶ್ಯರು ಎಂದು ಇನ್ನೂ ಕೀಳಾಗಿ ಕರೆಯಲಾಗುತ್ತಿದೆ. ಈ ಒಂದು ಅಧಮ ಜನಾಂಗದವರು ನಮ್ಮ ರಾಜ್ಯದಲ್ಲಿ ಹಾಗೂ ರಾಷ್ಟ್ರದಲ್ಲಿ ಇಂದು ಬಹಳ ಅಧೋಗತಿಯಲ್ಲಿದ್ದಾರೆ. ಇವರ ಒಂದು ಸಾಮಾಜಿಕ ಸ್ಥಿತಿ ಹಾಗೂ ಆರ್ಥಿಕ ಸ್ಥಿತಿ ತುಂಬ ಕೀಳುಮಟ್ಟದಲ್ಲಿದೆ. ಇವರು ಮಾನವೀಯತೆಯನ್ನೇ ಕಳೆದುಕೊಂಡಿರುವವರಾಗಿದ್ದಾರೆ. ನಾವು ಸೋಸಿ-

ಯಲಿಜಂ, ಸೆಕ್ಯುಲರಿಜಂ, ಡೆಮಾಕ್ರೆಸಿಯ ಮೂಲ ತತ್ವಪನ್ನು ಮುಂದೆ ಇಟ್ಟು ಕೊಂಡು ಈ ರಾಷ್ಟ್ರದಲ್ಲಿ ಒಂದು ಹೊಸ ಸಮಾಜವನ್ನು ರಚನೆ ಮಾಡಬೇಕೆಂದಿರುವಾಗ, ನೂರಕ್ಕೆ ೧೫ರಷ್ಟು ಇರುವ ಈ ಜನಾಂಗದವರು ಎಳಿಗೆಗಾಗಿ ಒಂದು ಸಂಸ್ಥೆಯನ್ನು ರಚನೆ ಮಾಡುವುದು ಅವಶ್ಯಕವಾಗಿದೆ ಏಕೆಂದರೆ ಪರಿಶಿಷ್ಟ ವರ್ಗದವರು ಪರಿಶಿಷ್ಟ ಜನಾಂಗದವರು ಮತ್ತು ಹಿಂದುಳಿದ ವರ್ಗದವರು ಈ ದೇಶದಲ್ಲಿ ಬಹಳ ಹಿಂದೆ ಉಳಿದಿದ್ದಾರೆ. ಇವರ ಒಂದು ಸಮಾಜಿಕ ಸ್ಥಿತಿ ಉತ್ತಮಗೊಳ್ಳಬೇಕಾದರೆ ಇವರ ಒಂದು ವಿದ್ಯಾಭ್ಯಾಸ ಹೆಚ್ಚಾಗಬೇಕಾದರೆ ಮುಖ್ಯವಾಗಿ ಇವರಿಗೆ ಆರ್ಥಿಕ ಬೆಂಬಲ ಬೇಕಾಗುತ್ತದೆ. ಕಳೆದ ೨೫ ವರ್ಷಗಳಲ್ಲಿ ಈ ರಾಜ್ಯದಲ್ಲಿ ಅನೇಕ ಪಂಚವಾರ್ಷಿಕ ಯೋಜನೆಗಳನ್ನು ಕೈಕೊಂಡು ಆ ಮೂಲಕ ಈ ವರ್ಗದ ಜನರಿಗೆ ನಾನಾ ರೀತಿಯಲ್ಲಿ ಸಹಾಯ ಮತ್ತು ಉತ್ತೇಜನ ಕೊಟ್ಟಿದ್ದರೂ ಸಹ ಅದರ ಒಂದು ಫಲ ಇವರಿಗೆ ಸರಿಯಾಗಿ ದೊರೆತಿಲ್ಲ. ಇದರಿಂದ ಇವರ ಪರಿಸ್ಥಿತಿ ಉತ್ತಮವಾಗಲಿಲ್ಲ. ಕಳೆದ ೨೫ ವರ್ಷಗಳ ಅಂಕಿಅಂಶಗಳನ್ನು ತೆಗೆದುಕೊಂಡು ನೋಡಿದರೆ ಇವರ ಪರಿಸ್ಥಿತಿ ಸ್ವಲ್ಪ ಸುಧಾರಿಸಿದೆ ಎಂದು ಒಪ್ಪಿಕೊಳ್ಳುವುದಾದರೂ ಸಹ, ಇವರು ಇತರೇ ಜನಾಂಗಗಳವರ ಮಟ್ಟಕ್ಕೆ ಬರಬೇಕಾದರೆ ಇನ್ನೂ ನೂರಾರು ವರ್ಷಗಳ ಕಾಲ ಬೇಕಾಗುತ್ತದೆ. ಆದ್ದರಿಂದ ಸರಕಾರದವರು ಇವರ ಸಮಾಜಿಕ ಉನ್ನತಿಗೆ ಹಾಗೂ ಆರ್ಥಿಕ ಪ್ರಗತಿಗೆ ಹೆಚ್ಚು ಗಮನ ಕೊಡಬೇಕಾಗಿದೆ. ಏಕೆಂದರೆ ಇಂದೂ ಸಹ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಹರಿಜನ ಮತ್ತು ಗಿರಿಜನರು ಗುಲಾಮಗಿರಿಯಲ್ಲಿದ್ದಾರೆ.

10-30 A. M.

ಇಲ್ಲಿ ಜೀತದ ಪದ್ಧತಿ ಜಾರಿಯಲ್ಲಿದೆ, ಇದನ್ನು ರದ್ದುಮಾಡಿ ಇಂತಹ ಒಂದು ಆರ್ಥಿಕ ಕಾರ್ಪೊರೇಷನನ್ನು ರಚನೆ ಮಾಡಿದರೆ ಇವರಿಗೆ ಅನೇಕ ರೀತಿಯ ಸಹಾಯ ಸೌಲಭ್ಯಗಳನ್ನು ಕಲ್ಪಿಸುವುದಕ್ಕೆ ಅವಕಾಶವಾಗುತ್ತದೆ. ಜೀತಾ ಸಿಸ್ಟಂ ಎನ್ನುವುದು ಮಾನವನಲ್ಲಿರತಕ್ಕ ಆತ್ಮಗೌರವವನ್ನು ಹಾಳು ಮಾಡತಕ್ಕದ್ದು ಇಂತಹ ಆತ್ಮ ಗೌರವವನ್ನು ಹಾಳು ಮಾಡತಕ್ಕ ಜೀತದ ಪದ್ಧತಿಯನ್ನು ರಾಜ್ಯ ಸರಕಾರದವರು ನಿರ್ಮೂಲ ಮಾಡಲು ಈಗಲಾದರೂ ಆಲೋಚನೆ ಮಾಡಿ ಇಂತಹ ಒಂದು ಆರ್ಥಿಕ ಕಾರ್ಪೊರೇಷನನ್ನು ನಮ್ಮ ರಾಜ್ಯದಲ್ಲೂ ಮಾಡಬೇಕೆಂದು ಸಲಹೆ ಮಾಡುತ್ತೇನೆ. ನಮ್ಮ ಭಾರತದಲ್ಲಿ ಪಂಜಾಬಿನಲ್ಲಿ ಹಾಗೂ ಕೇರಳ ರಾಜ್ಯದಲ್ಲಿ ಇಂತಹ ಒಂದು ಆರ್ಥಿಕ ಕಾರ್ಪೊರೇಷನ್‌ಗಳನ್ನು ಮಾಡಿದ್ದಾರೆ, ಆ ರಾಜ್ಯದಲ್ಲಿರುವ ಪರಿಶಿಷ್ಟ ಜನಾಂಗದವರಿಗಾಗಿ ಅನೇಕ ಉತ್ತಮವಾದ ಯೋಜನೆಗಳನ್ನು ಮಾಡಿದ್ದಾರೆ. ನಮ್ಮ ಮಾನ್ಯ ಸಮಾಜ ಕಲ್ಯಾಣ ಖಾತೆಯ ಮಂತ್ರಿಗಳು ಆ ರಾಜ್ಯಗಳಿಗೆ ಭೇಟಿ ಕೊಡಬೇಕು. ನಮ್ಮ ಮಂತ್ರಿಗಳಿಗೂ ಇಂತಹ ಹಿಂದುಳಿದ ಜನಾಂಗದವರ ಪರಿಸ್ಥಿತಿಯ ಅರಿವು ಇದೆ ಮತ್ತು ಈ ಸಮಾಜದ ಜನರ ಸ್ಥಿತಿಗತಿಗಳನ್ನು ಅಧ್ಯಯನ ಮಾಡಿದಂತಹವರು. ಇಂತಹ ಅನುಭವವನ್ನು ಪಡೆದಿರುವ ನಮ್ಮ ಮಂತ್ರಿಗಳು ಹೊರ ರಾಷ್ಟ್ರಗಳಿಗೆ ಹೋಗಿ ಅಲ್ಲಿನ ಬಡ ಜನರ ಜೀವನ ಯಾವ ರೀತಿ ಇದೆ ಎನ್ನುವು

ದನ್ನು ಅಧ್ಯಯನ ಮಾಡಿಕೊಂಡು ಬಂದು ನಮ್ಮ ರಾಜ್ಯದ ಬಡಜನತೆಗೂ ಸಹಾಯ ಮಾಡಬೇಕೆಂದು ನಾನು ಅವರಲ್ಲಿ ಸಲಹೆ ಮಾಡುತ್ತೇನೆ. ಈ ಬಗ್ಗೆ ಒಂದು ಸ್ಟಡೀ ಟೀಮನ್ನು ರಾಜ್ಯ ಸರಕಾರ ಕಳುಹಿಸಬೇಕಾಗಿತ್ತು. ಈಗಲಾದರೂ ಕೂಡಲೇ ಇಂತಹ ಒಂದು ಸ್ಟಡೀ ಟೀಮನ್ನು ಕಳುಹಿಸುವ ಯೋಜನೆ ಮಾಡಬೇಕು. ನಮ್ಮ ಸಮಾಜ ಕಲ್ಯಾಣ ಖಾತೆಯ ಮಂತ್ರಿಗಳು ಪಂಜಾಬಿಗೆ ಹಾಗೂ ಕೇರಳ ರಾಜ್ಯಗಳಿಗೆ ಹೋಗಿ ಅಲ್ಲಿ ನಡೆದಿರತಕ್ಕ ಯೋಜನೆಗಳನ್ನು ಪರಿಶೀಲನೆ ಮಾಡಿ ಆ ರಾಜ್ಯದಲ್ಲಿ ಎಷ್ಟರಮಟ್ಟಿಗೆ ಅಲ್ಲಿನ ಜನರ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸಿದ್ದಾರೆ, ಅಲ್ಲಿರುವ ಹಿಂದುಳಿದ ಜನಾಂಗದವರ ಸಮಾಜದ ನ್ಯೂನತೆಗಳೇನಿವೆ ಹಾಗೂ ಹದಗೆಟ್ಟು ಹೋಗಿರುವ ಆ ಬಡಜನರಿಗೆ ಯಾವ ಯಾವ ರೀತಿಯಾದ ಯೋಜನೆಗಳನ್ನು ಮಾಡಿ ಅದರ ಮೂಲಕ ಹಣವನ್ನು ಒದಗಿಸಿದ್ದಾರೆ ಇವುಗಳನ್ನು ಅಧ್ಯಯನ ಮಾಡಿಕೊಂಡು ಬಂದು ನಮ್ಮ ರಾಜ್ಯದಲ್ಲೂ ಕೂಡ ಇಂತಹ ಒಂದು ಕಾರ್ಪೊರೇಷನನ್ನು ಮಾಡಬೇಕೆಂದು ಸಲಹೆ ಮಾಡುತ್ತೇನೆ. ನಮ್ಮ ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡುವುದು ನಮ್ಮ ರಾಜ್ಯದಲ್ಲಿರುವ ಹಿಂದುಳಿದ ಜನರ ಸ್ಥಿತಿ ಹಳ್ಳಿಗಳಲ್ಲಿ ಯಾವ ರೀತಿ ಇದೆ ಅದನ್ನು ನೋಡಿಕೊಂಡು ಅವರಿಗೆ ಸಹಾಯ ಒದಗಿಸಿಕೊಡಬೇಕೆಂದು ಅವರಲ್ಲಿ ಪ್ರಾರ್ಥನೆ ಮಾಡುತ್ತೇನೆ. ಹಳ್ಳಿಯಲ್ಲಿರುವ ಬಡಜನಕ್ಕೆ ಅನ್ನ ಸಿಗುವುದಿಲ್ಲ, ಬಟ್ಟೆ ಸಿಗುವುದಿಲ್ಲ, ವಸತಿ ಇಲ್ಲ ಹಿಂದುಳಿದ ಜನರು ಇತರರ ಮೇಲೇಯೇ ಅವಲಂಬಿಸಿ ಜೀವನ ಮಾಡಬೇಕಾಗಿದೆ. ಪರಾವಲಂಬನೆ ಇಲ್ಲದೆ ಇವರು ಜೀವನ ಮಾಡಲು ಅಸಾಧ್ಯ. ಇವರ ಮಕ್ಕಳಿಗೆ ವಿದ್ಯಾಭ್ಯಾಸ ಕೊಡುತ್ತಿಲ್ಲ, ಇವರಲ್ಲಿ ಮಾನವೀಯತೆಯ ಲಕ್ಷಣವೇ ಇಲ್ಲ, ಇಂತಹ ಹಿಂದುಳಿದಿರುವ ಜನಕ್ಕೆ ನಮ್ಮ ಸಮಾಜದಲ್ಲಿ ಸರಿಯಾದ ನ್ಯಾಯ ಒದಗಿಸಿಕೊಡಬೇಕು. ಯಾವ ಒಂದು ತತ್ವದ ಮೇಲೆ ನಮ್ಮ ರಾಷ್ಟ್ರದ ಮಹಾ ಚುನಾವಣೆಯಲ್ಲಿ ನಾವು ದೇಶದ ಜನತೆಗೆ ಅಭಯವನ್ನು ಕೊಟ್ಟು ಆರಿಸಿ ಬಂದಿದ್ದೇವೋ ಅದನ್ನು ಪರಿಪಾಲನೆ ಮಾಡಬೇಕಾದರೆ ನಮ್ಮ ಸರಕಾರ ಖಂಡಿತ ಇಂತಹ ಒಂದು ಕಾರ್ಪೊರೇಷನ್ನನ್ನು ಮಾಡಬೇಕು. ನಾವು ಒಂದು ವರದಿಯಲ್ಲಿ ಎಂದರೆ ಇಂಟರ್‌ನ್ಯಾಷನಲ್ ಲೇಬರ್ ಆರ್ಗನೈಸೇಷನ್‌ನವರು ಹೊರಡಿಸಿರುವ ಒಂದು ವರದಿಯಲ್ಲಿ ನಮ್ಮ ಮೈಸೂರು ರಾಜ್ಯದಲ್ಲಿ ಜೀತಾ ಸಿಸ್ಟಂ ಎನ್ನುವುದು ಜಾರಿಯಲ್ಲಿದೆ ಎನ್ನುವ ಒಂದು ಅಂಶ ಒಂದಿದೆ. ಮೈಸೂರು ರಾಜ್ಯದಲ್ಲಿ ಬಹಳ ಹೆಚ್ಚಾಗಿ ಜೀತಾ ಸಿಸ್ಟಂ ಬೇರೂರಿದೆ ಎನ್ನುವ ಅಂಶವನ್ನು ಅದರಲ್ಲಿ ರೆಫರು ಮಾಡಿದ್ದಾರೆ. ಇದೊಂದು ಅತ್ಯಾಶ್ಚರ್ಯಕರವಾದ ಅಂಶ ಎಂತಲೂ ಹೇಳಿದ್ದಾರೆ. ಇಂತಹ ಜೀತದ ಪದ್ಧತಿಯನ್ನು ತೆಗೆದು ಇವನ್ನು ನಿವಾರಣೆ ಮಾಡುವುದಕ್ಕೋಸ್ಕರ ಇವರಿಗೆ ಆರ್ಥಿಕ ಬೆಂಬಲವನ್ನು ಒದಗಿಸಿ ಅವರು ಅವರ ಸ್ವಂತ ಕಾಲಿನ ಮೇಲೆ ನಿಂತು ಜೀವನ ಮಾಡಲು ಸಹಾಯ ಮಾಡಿಕೊಡಬೇಕು. ನಮ್ಮ ರಾಜ್ಯದಲ್ಲಿ ಸುಮಾರು ಐದನೇ ಒಂದು ಭಾಗದಷ್ಟು ಜನರು ಹಿಂದುಳಿದ ವರ್ಗದವರೇ ಆಗಿದ್ದಾರೆ ಎಂದರೆ ಸುಮಾರು ೫೦ ಲಕ್ಷ ಜನರು ಇದ್ದಾರೆ, ಇಂತಹ ಹಿಂದುಳಿದಿರುವ ಜನರ ಕಲ್ಯಾಣ

ಕ್ಕಾಗಿ ನಮ್ಮ ಮಾನ್ಯ ಮಂತ್ರಿಗಳು ಕೂಡಲೇ ಒಂದು ಆರ್ಥಿಕ ಕಾರ್ಪೊರೇಷನ್ ಮಾಡಬೇಕು. ಆ ರೀತಿ ನಮ್ಮ ಮಂತ್ರಿಗಳು ಮಾಡುತ್ತಾರೆ ಎನ್ನುವ ನಂಬಿಕೆ ನನಗೆ ಇದೆ.

ಇವ್ಹೊತ್ತು ನಮ್ಮ ರಾಜ್ಯದಲ್ಲಿ ಆಡಳಿತ ಕಾಂಗ್ರೆಸ್ಸು ಅಧಿಕಾರದಲ್ಲಿದೆ, ಇದೇ ರೀತಿ ಜನರು ಆಡಳಿತ ಕಾಂಗ್ರೆಸ್ಸಿಗೆ ಹೆಚ್ಚು ಬೆಂಬಲ ಕೊಟ್ಟು ಇಂದು ಅನೇಕ ರಾಜ್ಯಗಳಲ್ಲಿ ಆಡಳಿತ ಕಾಂಗ್ರೆಸ್ಸಿನ ಜನರೇ ಹೆಚ್ಚು ರಾಜ್ಯಗಳಲ್ಲಿ ಆಡಳಿತ ನಡೆಸುತ್ತಿದ್ದಾರೆ. ಇಂತಹ ಆಡಳಿತ ಕಾಂಗ್ರೆಸ್ಸಿಗೆ ಹಿಂದುಳಿದ ಜನರಿಂದಲೇ ಹೆಚ್ಚು ಬೆಂಬಲ ದೊರಕಿರುವುದು, ನಮ್ಮ ರಾಜ್ಯದಲ್ಲಿ ಕೂಡ ಇಂತಹ ಹಿಂದುಳಿದ ಜನಾಂಗದವರ ಬೆಂಬಲದಿಂದಲೇ ಇಂದು ಆಡಳಿತ ನಡೆಸುತ್ತಿರುವುದು. ಆದುದರಿಂದ ನಮ್ಮ ರಾಜ್ಯದ ಸರಕಾರದವರು ಇವರಿಗೆ ಅನುಕೂಲಗಳನ್ನು ಮಾಡಿ ಕೊಡದೇ ಹೋದರೆ ಮುಂದೇನಾಗುತ್ತದೆ ಎನ್ನುವುದನ್ನು ಅರಿತುಕೊಳ್ಳಬೇಕು. ಇಂತಹ ಹಿಂದುಳಿದ ಸಮಾಜದ ಜನಕ್ಕೆ ಸರಕಾರ ಎಲ್ಲ ಅನುಕೂಲಗಳನ್ನೂ ಒದಗಿಸಿಕೊಡಬೇಕೆಂದು ಸಲಹೆ ಮಾಡುತ್ತೇನೆ. ಇಂತಹ ಜನರಿಗೆ ಆಗಿರುವ ಅನ್ಯಾಯಗಳನ್ನು ಸರಿಪಡಿಸ ಬೇಕು, ಇಂದು ಅಸ್ಪೃಶ್ಯತಾ ನಿವಾರಣೆ ಮಾಡುತ್ತೇವೆ ಎಂದು ಕಾನೂನು ಮಾಡಿದ್ದರೂ ಅದರ ಪ್ರಕಾರ ಇನ್ನೂ ರಾಜ್ಯದಲ್ಲಿ ಅಸ್ಪೃಶ್ಯತಾ ನಿವಾರಣೆ ಮಾಡಲಾಗಲಿಲ್ಲ, ಇದರ ಬಗ್ಗೆ ಹೆಚ್ಚು ಆಸಕ್ತಿ ವಹಿಸುತ್ತಿಲ್ಲ ಇಂತಹ ಜನರ ಬೆಂಬಲದಿಂದಲೇ ನಾವು ಆರಿಸಿ ಬಂದಿರುವುದರಿಂದ ಇವರಿಗೆ ಸರಕಾರ ಅನುಕೂಲಗಳನ್ನು ಒದಗಿಸಿ ಕೊಡಲು ಇಂತಹ ಒಂದು ವ್ಯವಸ್ಥೆ ಮಾಡಬೇಕೆಂದು ಇಲ್ಲಿ ನಿರ್ಣಯ ತಂದಿರುವುದು. ಇಂದು ನಮ್ಮ ರಾಜ್ಯದಲ್ಲಿ ಆಡಳಿತ ಕಾಂಗ್ರೆಸ್ಸಿನವರೇ ಆಡಳಿತ ಮಾಡುತ್ತಿರುವುದು ಇಂತಹ ಹಿಂದುಳಿದ ರಾಜ್ಯದ ಜನರ ಬೆಂಬಲದಿಂದಲೇ ಎನ್ನುವುದನ್ನು ನಾವೂ ಯೋಚನೆ ಮಾಡಬೇಕು, ಇದರಿಂದ ಇಂತಹ ಹಿಂದುಳಿದ ಜನಾಂಗದವರಿಗೆ ಎಲ್ಲ ವಿಧವಾದ ಅನುಕೂಲಗಳನ್ನೂ ಕೊಡಲು ತಕ್ಕ ವ್ಯವಸ್ಥೆ ಮಾಡಬೇಕು.

ಮತ್ತೆ ಈ ಕಾರ್ಪೊರೇಷನ್ ಮಾಡುವಾಗ ಒಂದು ಅಂಶವನ್ನು ಇಲ್ಲಿ ಹೇಳ ಬೇಕಾಗಿದೆ. ಕೇರಳ ಹಾಗೂ ಪಂಜಾಬು ರಾಜ್ಯದಲ್ಲಿ ಮಾಡಿರುವ ಕಾರ್ಪೊರೇಷನ್ ಗಳಿಗಾಗಿ ಷೇರು ಹೋಲ್ಡರುಗಳನ್ನು ಮಾಡಿ ಅವರ ಮೂಲಕ ಷೇರು ಬಂಡವಾಳ ಕ್ಕಾಗಿ ಹಣವನ್ನು ಒದಗಿಸಿಕೊಡುತ್ತಿದ್ದಾರೆ. ಯಾವ ರೀತಿ ಅಲ್ಲಿ ಒದಗಿಸಿದ್ದಾರೆ ಅದರ ರೀತಿನೀತಿಗಳೇನು ಎನ್ನುವುದನ್ನು ಪರಿಶೀಲನೆ ಮಾಡಬೇಕು, ಇಂದು ಹರಿಜನರೇ ಇಲ್ಲದ ಯಾವ ಊರೂ ಇಲ್ಲ, ಇವರಿಂದ ಷೇರುಗಳನ್ನು ವಸೂಲು ಮಾಡಲು ಯಾವ ಕಾನೂನು ಇಲ್ಲ, ಬಹುತೇಕ ಹರಿಜನರೆಲ್ಲಾ ಶ್ರಮಜೀವಿಗಳಾಗಿ ಕೂಲಿ ನಾಲಿ ಮಾಡುವಂತಹ ಜನರೇ ಹೆಚ್ಚು, ಇಂತಹ ಹಿಂದುಳಿದ ಜನರ ಮಕ್ಕಳಿಗೆ ಸರಿಯಾದ ವಿದ್ಯಾಭ್ಯಾಸ ಹಾಗೂ ತರಬೇತಿ ಕೊಡುತ್ತಿಲ್ಲ. ಎಲ್ಲ ಕೆಲಸಗಳನ್ನೂ ಇವರು ಮಾಡುತ್ತಾರೆ ಬಟ್ಟೆ ಒಗೆಯುತ್ತಾರೆ, ಮಡಕೆ ಮಾಡುತ್ತಾರೆ, ಶಿಲ್ಪ ಕೆಲಸ ಗಳನ್ನು ಮಾಡುತ್ತಾರೆ, ಷೇವಿಂಗು ಕೆಲಸ ಮಾಡುತ್ತಾರೆ, ಇವರು ಮಾಡದೇ ಇರು

ಮತಹ ಕೆಲಸಗಳೇ ಇಲ್ಲ, ಇಂತಹ ಹಿಂದುಳಿದ ಜನಾಂಗಕ್ಕೆ ಷೇರು ಬಂಡವಾಳವನ್ನು ಕೊಡಲು ಸರಕಾರ ಒಂದು ಕಾರ್ಪೊರೇಷನ್ ಮಾಡಿ ಇದಕ್ಕಾಗಿ ಒಂದು ನಿರ್ದಿಷ್ಟವಾದ ಹಣವನ್ನು ಅದರ ಮೂಲಕ ಒದಗಿಸಿಕೊಡಬೇಕು. ಇದಕ್ಕಾಗಿ ಈ ಸಂಸ್ಥೆ ಮಾಡಬೇಕೆಂದು ಹೇಳುತ್ತಿರುವುದು, ಈಗ ನಮ್ಮಲ್ಲಿ ಎನ್. ಇ. ಎಸ್. ಯೋಜನೆಗಳು ಹಾಗೂ ಇನ್ನಿತರ ಡೆವಲಪ್‌ಮೆಂಟು ಯೋಜನೆಗಳಿಗಾಗಿ ಇಂತಿಷ್ಟು ಪರ್ಸೆಂಟು ಹಣ ಸರಕಾರ ಕೊಡಬೇಕೆಂದು ಮಾಡಿದ್ದಾರೆ. ಅದರಂತೆ ಇಲ್ಲೂಕೂಡ ಸರಕಾರ ಹಣದ ಸಹಾಯ ಕೊಡಲಿ. ಈಗ ಸಣ್ಣ ಕೈಗಾರಿಕೆಗಳಿಗಾಗಿ ಸರಕಾರ ಬುಲ್‌ಡೋಜರುಗಳನ್ನು ಕೊಳ್ಳಲು, ಸ್ಪೇರು ಪಾರ್ಟುಗಳನ್ನು ಕೊಳ್ಳಲು ಕೆಲವು ಕಡೆ ಶೇಕಡಾ ಎಂಭತ್ತು ಕೆಲವು ಕಡೆ ಶೇಕಡ ಐಂಭತ್ತು ಸರಕಾರ ಸಹಾಯ ಕೊಡಬೇಕು ಎನ್ನುವ ತತ್ವವನ್ನು ಒಪ್ಪಿಕೊಂಡಿದೆ. ಆದರೆ ಇಂತಹ ಹಿಂದುಳಿದ ಬಡಜನಕ್ಕೆ ಷೇರು ಬಂಡವಾಳ ಕೊಡಲು ಶಕ್ತಿ ಇಲ್ಲ. ಇತರ ಸಂಸ್ಥೆಗಳಿಗೆ ಎಂದರೆ ಬೀಜಗಳ ಕಾರ್ಪೊರೇಷನ್‌ಗೆ ಹಾಗೂ ಇನ್ನಿತರ ಕಾರ್ಪೊರೇಷನ್‌ಗಳಿಗೆ ಎಂದರೆ ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ನಿಗೆ ಸರಕಾರವೇ ಹಣ ಸಹಾಯ ಕೊಟ್ಟು ಹೆಚ್ಚು ಷೇರು ಬಂಡವಾಳ ಹೂಡಲು ಅನುಕೂಲ ಮಾಡಿಲ್ಲವೆ? ಅದೇ ರೀತಿ ಇವರ ಆರ್ಥಿಕ ಕಾರ್ಪೊರೇಷನ್‌ಗೂ ಹಣ ಸಹಾಯ ಕೊಟ್ಟು ನಮ್ಮ ರಾಜ್ಯದ ಸಮಾಜ ಕಲ್ಯಾಣ ಇಲಾಖೆಯವರು ಸಹಾಯ ಮಾಡಬೇಕು, ಮತ್ತು ಇಂದು ಈ ಬಡ ಜನಕ್ಕೆ ಸಮಾಜ ಕಲ್ಯಾಣ ಇಲಾಖೆಯಿಂದ ಹಾಗೂ ಇತರ ಇಲಾಖೆಗಳಿಂದ ಕೊಡುವ ಹಣ ನೇರವಾಗಿ ಅವರಿಗೆ ತಲಪದೆ ಮಧ್ಯವರ್ತಿಯಲ್ಲಿರುವ ಜನ ಲೂಟಿ ಮಾಡುತ್ತಿದ್ದಾರೆ, ಇದಕ್ಕಾಗಿ ಇದು ಪ್ರತ್ಯೇಕವಾದ ಏಜೆನ್ಸಿ ಬೇಕಾದರೂ ಮಾಡಿ ಅವರಿಗೆ ನೇರವಾಗಿ ಹಣ ಸಹಾಯ ದೊರಕುವ ವ್ಯವಸ್ಥೆ ಮಾಡಬೇಕು. ಈಚೆಗೆ ಹೌಸಿಂಗು ಕಾರ್ಪೊರೇಷನ್ನಿಗೆ ಎಲ್. ಡಿ. ಸಿ. ಮೂಲಕ ಸುಮಾರು ಮೂರುನರೆ ಕೋಟಿಯಷ್ಟು ಸಾಲ ಪಡೆದು ಮನೆಗಳನ್ನು ಕಟ್ಟಲು ಹಣ ಕೊಡುತ್ತಿದ್ದರು. ಈಚೆಗೆ ಇದನ್ನು ನಿಲ್ಲಿಸಲಾಗಿದೆ.

ಮನೆಗಳನ್ನು ಕಟ್ಟಲು ಅನೇಕ ಕೋ-ಆಪರೇಟೀವ್ ಇನ್ಸ್ಟಿಟ್ಯೂಷನ್‌ಗಳು ಒಂದು ಕಾರ್ಪೊರೇಷನ್ ಮಾಡಿ ಅದರ ಮೂಲಕ ಹಣವನ್ನು ಒದಗಿಸಲು ಅವಕಾಶವಿದೆ. ಇವರಿಗೆ ಡಿಬೆಂಚರು ಸಾಲ ಎತ್ತಲು ಸರಕಾರ ಜಾಮೀನು ಇದ್ದು ಸಹಾಯ ಮಾಡಿದೆ ಈ ರೀತಿ ಹೌಸಿಂಗು ಬೋರ್ಡು, ಎಲೆಕ್ಟ್ರಿಸಿಟಿ ಬೋರ್ಡು ಇವುಗಳೆಲ್ಲಾ ಸಾರ್ವಜನಿಕರಿಂದ ಸಾಲವಾಗಿ ಹಣ ಪಡೆಯುತ್ತಿವೆ, ಇಂದು ಅಗ್ರೋ ಇಂಡಸ್ಟ್ರೀಸ್ ಸಂಸ್ಥೆಗೂ ಸರಕಾರ ಹೆಚ್ಚು ಷೇರುಗಳನ್ನು ತೆಗೆದುಕೊಂಡು ಸಹಾಯ ಮಾಡಿದೆ. ಇದರಲ್ಲಿ ಹೆಚ್ಚು ಹಣವನ್ನು ಒದಗಿಸಿದೆ, ಇದೇ ರೀತಿ ನಮ್ಮ ಹಿಂದುಳಿದ ಈ ಜನಾಂಗದ ಮಕ್ಕಳ ವಿದ್ಯಾಭ್ಯಾಸಕ್ಕೆ ಹಾಗೂ ಇನ್ನಿತರ ಸೌಕರ್ಯಗಳನ್ನು ಕೊಡಲು ಒಂದು ಆರ್ಥಿಕ ಕಾರ್ಪೊರೇಷನ್ ಮಾಡುವುದು ಬಹಳ ಅವಶ್ಯಕವಾಗಿದೆ. ಇದರ ಮೂಲಕ ಇಂದು ಈ ಬಡ ಜನಾಂಗದ ಮಕ್ಕಳಿಗೆ ಟೈಪರೈಟಿಂಗ್ ಹಾಗೂ ಷಾರ್ಟ್ ಹ್ಯಾಂಡ್ ಶಿಕ್ಷಣದಲ್ಲಿ ತರಬೇತಿ ಕೊಡುವುದು ಅಗತ್ಯವಾಗಿದೆ. ಇಂದು ಈ

ಜನಾಂಗದವರಿಗೆ ಸರಕಾರ ತರಬೇತಿ ಕೊಟ್ಟು ಟೈಪಿಸ್ಟುಗಳಿಗೆ ಹಾಗೂ ಷಾರ್ಟ ಹ್ಯಾಂಡ್ ವಿದ್ಯೆಗಳನ್ನು ಕಲಿಸಲು ವ್ಯವಸ್ಥೆ ಮಾಡಬೇಕು. ನಾನು ಗೆಜೆಟ್ಟಿನಲ್ಲಿ ಒಂದು ಪ್ರಕಟಣೆ ನೋಡಿದಾಗ ಅದರಲ್ಲಿ ಹಿಂದುಳಿದ ವರ್ಗದವರು ಒಬ್ಬರೂ ಇರಲಿಲ್ಲ. ಇದನ್ನು ನೋಡಿದರೆ ಸರಕಾರ ಈ ಜನತೆಗೆ ತರಬೇತಿ ಪಡೆಯಲು ಸಾಕಷ್ಟು ಅವಕಾಶ ಗಳನ್ನು ಮಾಡಿಲ್ಲ. ಇದರಿಂದ ಇಂದು ರಾಜ್ಯದಲ್ಲಿ ಷೆಡ್ಯೂಲು ಕ್ಯಾಸ್ಟಿನವರು ಸ್ಟೆನೋ ಗಳು ಆಗಲಿ ಟೈಪಿಸ್ಟುಗಳಾಗಲೀ ಇಲ್ಲ. ಇದುವರೆಗೆ ಯಾವ ಯೋಜನೆಯೂ ಇಲ್ಲ.

ಶ್ರೀ ಟಿ. ಆರ್ ಶಾಮಣ್ಣ —ಷೆಡ್ಯೂಲು ಕ್ಯಾಸ್ಟು ಹಾಗೂ ಟ್ರೈಬ್ಸ್ ಪಂಗಡ ಗಳವರ ಮಕ್ಕಳಿಗೆ ಟೈಪರೈಟಿಂಗ್ ಹಾಗೂ ಷಾರ್ಟ ಹ್ಯಾಂಡ್ ತರಬೇತಿ ಪಡೆಯಲು ಮುಂದೆ ಬಂದರೆ ಹರಿಜನ ವಿದ್ಯಾರ್ಥಿಗಳಿಗೆ ಸರಕಾರವೇ ವರ್ಷಕ್ಕೆ ಸುಮಾರು ೨೫೦ ರೂಪಾಯಿಗಳಷ್ಟು ಸಹಾಯ ಕೊಡುತ್ತಿದ್ದಾರೆ. ಆದರೆ ತರಬೇತಿ ಪಡೆಯಲು ಹುಡುಗರು ಯಾರೂ ಬರುತ್ತಿಲ್ಲ.

ಶ್ರೀ ಎಂ. ಹೆಚ್. ಜಯಪ್ರಕಾಶನಾರಾಯಣ —ಇಂದು ಹಿಂದುಳಿದ ವರ್ಗದ ಜನರಿಗೆ ಹೊಟೇಲುಗಳನ್ನು ತೆರೆಯಲು ತರಬೇತಿ ಇಲ್ಲ. ಟ್ಯಾಕ್ಸಿಗಳ ಡ್ರೈವರಾಗಿರಲು ತರಬೇತಿ ಸಿಗುತ್ತಿಲ್ಲ. ಇತರ ವಿಧವಾದ ಟ್ರೇನಿಂಗು ಕೂಡ ಕೊಡತ್ತಿಲ್ಲ. ಪ್ರಿಂಟಿಂಗು ಪ್ರೆಸ್ಸುಗಳ ತರಬೇತಿ ಕೊಡಬಹುದು, ಇವುಗಳನ್ನೆಲಾ ಮಾಡಲು ಇವರಿಗಾಗಿ ಪ್ರತ್ಯೇಕವಾಗಿ ಹಣ ಕೊಡುವ ಸಂಸ್ಥೆ ಇರಬೇಕು, ಇದರ ಬಗ್ಗೆ ಸರಕಾರ ಏಕೆ ಇನ್ನೂ ಯೋಚನೆ ಮಾಡಲಿಲ್ಲ ? ಇಂತಹ ಕೆಲಸಗಳನ್ನು ಮಾಡಲು ನಮ್ಮ ರಾಜ್ಯ ದಲ್ಲೂ ಇಂತಹ ಒಂದು ಆರ್ಥಿಕ ಕಾರ್ಪೊರೇಷನ್ ಮಾಡುವುದು ಅವಶ್ಯಕತೆ ಇದೆ.

ಮೈಸೂರು ಸರಕಾರ ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಜನಾಂಗಕ್ಕೆ ಎಲ್ಲ ವಿಧವಾದ ಫೀಯನ್ನೂ ಮಾಫಿ ಮಾಡಿರುವ ಆಜ್ಞೆಯನ್ನು ಜಾರಿಗೆ ತಂದಿದ್ದಾರೆ. ಕೇಂದ್ರ ಸರಕಾರದವರು ಸ್ಕಾಲರ್‌ಶಿಪ್‌ಗಳನ್ನು ಸಹ ಕೊಡುತ್ತಿದ್ದಾರೆ. ಸರ್ಕಾರಿ ಕಾಲೇಜು ಗಳು, ಖಾಸಗೀ ಕಾಲೇಜುಗಳು ಎಲ್ಲ ಕಡೆಯೂ ಪ್ರತಿವರ್ಷ ಸುಮಾರು ಲಕ್ಷೋಪಲಕ್ಷ ಹಣವನ್ನು ಅವರು ಕ್ಲೇವ್ ಮಾಡಿ ತೆಗೆದುಕೊಳ್ಳುತ್ತಿದ್ದಾರೆ. ಸೋಷಿಯಲ್ ವೆಲ್‌ಫೇರ್ ಸ್ಕೀಂ, ಡೆವಲಪಮೆಂಟ್ ಸ್ಕೀಂ, ಪಬ್ಲಿಕ್ ಅಂಡರಟೇಕಿಂಗ್ಸ್, ತಾಲ್ಲೂಕು ಬೋರ್ಡುಗಳು ಹೀಗೆ ಎಲ್ಲಿಯೇ ಆಗಲೀ ಪರಿಶಿಷ್ಟ ಜನಾಂಗ ಮತ್ತು ಪರಿಶಿಷ್ಟ ವರ್ಗಕ್ಕೆ ೧೮ ಪರ್ಸೆಂಟ್ ಹಣ ಮೀಸಲಿಡಬೇಕೆಂದಿದೆ. ಒಂದು ವೇಳೆ ಹೀಗೆ ಮಾಸಲಾಗಿಟ್ಟ ಹಣ ಖರ್ಚಾಗದೆ ಹೋದರೆ ಅಂಥ ಹಣವನ್ನು ನಾನು ಈಗ ಸೂಚನೆ ಮಾಡಿರುವ ಕಾರ್ಪೊರೇಷನ್ನಿಗೆ ವರ್ಗ ಮಾಡಿ ಅದನ್ನು ಪರಿಶಿಷ್ಟ ಜನಾಂಗ ಮತ್ತು ಪರಿಶಿಷ್ಟ ವರ್ಗದ ಜನರ ಕಲ್ಯಾಣಕ್ಕಾಗಿ ಉಪಯೋಗಿಸತಕ್ಕ ರೀತಿಯಲ್ಲಿ ಅವಕಾಶ ಮಾಡಬೇಕು.

ಈಚೆಗೆ ಕೋ-ಆಪರೇಟಿವ್ ಸೊಸೈಟಿಗಳ ಕಾನೂನು ಮಾಡುವಾಗ ಒಂದು ಹೊಸ ನಿಬಂಧನೆಯನ್ನು ಅದರಲ್ಲಿ ಸೇರಿಸಿದ್ದೇವೆ. ಅದರ ಪ್ರಕಾರ ಇಂಡಸ್ಟ್ರಿಯಲ್ ಕನಸರ್ನ್‌ನಲ್ಲಿ ಸರಕಾರದವರು ಷೇರುಗಳನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವಿದೆ. ಆ ರೀತಿಯಾಗಿ ಸರ್ಕಾರದವರು ಇದರಲ್ಲಿಯೂ ಹೆಚ್ಚು ಷೇರುಗಳನ್ನು ಪಡೆಯುವ ಅವಕಾಶಗಳನ್ನು ಕಲ್ಪಿಸಿಕೊಡಬೇಕು. ಪರಿಶಿಷ್ಟ ಜನಾಂಗ ಮತ್ತು ಪರಿಶಿಷ್ಟ ವರ್ಗದ ಜನರು ಹೊರದೇಶಗಳಿಗೆ ಹೋಗಿ ಅಧ್ಯಯನ ಮಾಡುವುದಕ್ಕೂ ವಿಶೇಷವಾದ ವ್ಯವಸ್ಥೆಯನ್ನು ಮಾಡಬೇಕು. ಉತ್ತಮ ದರ್ಜೆಯಲ್ಲಿ ಅಂಕಿಗಳನ್ನು ಪಡೆಯತಕ್ಕ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟಂತೆ ವಿಶೇಷವಾದ ಯೋಜನೆಯನ್ನು ಮಾಡಿ ಅವರು ವಿದೇಶಗಳಿಗೆ ಹೋಗಿ ಅಧ್ಯಯನ ಮಾಡಿಕೊಂಡು ಹೆಚ್ಚಿನ ವ್ಯಾಸಂಗವನ್ನು ಮಾಡಿ ಜ್ಞಾನ ಸಂಪಾದಿಸಿ ಒಳ್ಳೆಯ ಸ್ಥಾನಮಾನಗಳನ್ನು ಪಡೆಯುವುದಕ್ಕೆ ಮತ್ತು ಉತ್ತಮ ದರ್ಜೆಯ ಹುದ್ದೆಗಳನ್ನು ಪಡೆಯುವುದಕ್ಕೆ ಅವಕಾಶ ಮಾಡಬೇಕು.

ನೂರಾರು ಕಾರ್ಪೊರೇಷನ್‌ಗಳು, ಬೋರ್ಡುಗಳು ಮತ್ತು ಸಮಿತಿಗಳನ್ನು ಮಾಡಿದ್ದರೂ, ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಜನಾಂಗದವರಿಗೆ ಅವಕಾಶಗಳನ್ನು ಕೊಡಲು ಬೇಕಾದ ಅರ್ಹತೆಯನ್ನು ಹೊಂದಿರತಕ್ಕ ಅಭ್ಯರ್ಥಿಗಳು ದೊರಕುವುದಿಲ್ಲ ವೆಂದು ಹೇಳುತ್ತ ಅನೇಕ ಯೋಜನೆಗಳಲ್ಲಿ ಪ್ರಾತಿನಿಧ್ಯವಿಲ್ಲದ ಹಾಗೆ ಮಾಡಿದ್ದಾರೆ. ಈ ಜನರಿಗೆ ಎಲ್ಲ ವಿಧವಾದ ಪ್ರಾತಿನಿಧ್ಯವನ್ನೂ ಒದಗಿಸುವುದಕ್ಕೊಸ್ಕರ, ಸಾಮಾಜಿಕ ನ್ಯಾಯವನ್ನು ಒದಗಿಸಿಕೊಡುವುದಕ್ಕೋಸ್ಕರ, ಜಾತಿಪದ್ಧತಿಯನ್ನು ನಿರ್ಮೂಲ ಮಾಡುವದಕ್ಕೋಸ್ಕರ ಅವರ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸು ವುದಕ್ಕೋಸ್ಕರ ದುಡಿಯುವವರಿಗೆ ಕೆಲಸವನ್ನು ಕೊಡುವುದಕ್ಕೋಸ್ಕರ ಮತ್ತು ದುಡಿಮೆಯಿಂದ ಗೌರವವನ್ನು ಪಡೆದು ಆತ್ಮ ಗೌರವವನ್ನು ಸಂಪಾದನೆ ಮಾಡುವುದ-ಕ್ಕೋಸ್ಕರ ಇಂಥ ಒಂದು ಕಾರ್ಪೊರೇಷನ್ ರಚನೆ ಮಾಡುವುದು ಅವಶ್ಯಕ. ರಾಜ್ಯ ಸರ್ಕಾರ ಇದನ್ನು ಪರಿಶೀಲನೆ ಮಾಡಬೇಕು. ಕೇರಳ ಮತ್ತು ಪಂಜಾಬ್ ರಾಜ್ಯ ಗಳಲ್ಲಿ ಯಾವ ರೀತಿ ಇಂಥ ಒಂದು ಕಾರ್ಪೊರೇಷನ್ ಮಾಡಿದ್ದಾರೆಯೋ ಅದೇ ರೀತಿ-ಯಲ್ಲಿ ಒಂದು ಕಾರ್ಪೊರೇಷನನ್ನು ಇಲ್ಲೂ ಸರಕಾರ ತಕ್ಷಣ ಪ್ರಾರಂಭ ಮಾಡಬೇಕು. ಮತ್ತು ಅಲ್ಲಿ ಕಾರ್ಪೊರೇಷನ್ ಮಾಡುತ್ತಿರುವ ಕೆಲಸವನ್ನು ಅಧ್ಯಯನ ಮಾಡಿ ಕೊಂಡು ಬರುವುದಕ್ಕಾಗಿ ಒಂದು ಅಧ್ಯಯನ ತಂಡವನ್ನು ರಾಜ್ಯ ಸರ್ಕಾರದಿಂದ ಕಳುಹಿಸಿಕೊಡಬೇಕು. ಮಾನ್ಯ ಮಂತ್ರಿಗಳು ಮೊದಲೇ ಈ ವಿಚಾರವನ್ನು ಮನಸ್ಸಿಗೆ ತೆಗೆದುಕೊಂಡು, ಒಂದು ನಿರ್ಣಯ ಮಾಡಿಸಿ ಇಂಥ ಕಾರ್ಪೊರೇಷನ್ ಈ ವರ್ಷ ದಲ್ಲಿಯೇ ಅಸ್ತಿತ್ವಕ್ಕೆ ಬಂದು ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಜನಾಂಗದವರ ಸಾಮಾಜಿಕ, ನೈತಿಕ, ಆರ್ಥಿಕ ಪ್ರಗತಿ ಸರ್ವತೋಮುಖವಾಗಿ ಆಗಲು ಅನುಕೂಲ ಮಾಡಿಕೊಡಬೇಕೆಂದೂ, ಈ ಮನೆಯ ಎಲ್ಲ ಸದಸ್ಯರೂ ಈ ನಿರ್ಣಯಕ್ಕೆ ಬೆಂಬಲ ಕೊಡಬೇಕೆಂದೂ ಮನವಿ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜೆ. ಎಲ್. ಕಬಾಡಿ (ಬಳ್ಳೊಳ್ಳಿ) —ಮಾನ್ಯ ಅಧ್ಯಕ್ಷರೇ, ಈ ಹೊತ್ತು

ಶ್ರೀ ಜಯಪ್ರಕಾಶ ನಾರಾಯಣ ಅವರು ತಂದಿರತಕ್ಕ ಸೂಚನೆಯನ್ನು ನಾನು ಬೆಂಬಲಿಸಿ ಮಾತನಾಡಿದರೂ ಈ ಹೊತ್ತು ಎಷ್ಟು ಕರುಚಿಕೊಂಡು ಮಾತನಾಡಿದರೂ ಅದರಿಂದ ಪ್ರಯೋಜನವೇನೂ ಆಗುವುದಿಲ್ಲವೆನ್ನುವುದು ಮಾತ್ರ ನನಗೆ ಮನವರಿಕೆಯಾಗಿದೆ. ಏಕೆಂದರೆ "ಗರೀಬಿ ಹಟಾವೋ" ಎಂಬ ಘೋಷಣೆಯೊಂದಿಗೆ ಅಧಿಕಾರಕ್ಕೆ ಬಂದ ಈ ಸರಕಾರ ಬರಿ ಘೋಷಣೆ ಕೂಗಿದರೆ ಏನು ಬಂತು ? ಆ ಸರ್ಕಾರ ಎಷ್ಟೋ ಯೋಜನೆಗಳನ್ನು ಪ್ರಾರಂಭ ಮಾಡಿದರೂ ಕಾರ್ಯರೂಪಕ್ಕೆ ತರುವುದಕ್ಕೆ ಇದಕ್ಕೆ ಮನಸ್ಸಿಲ್ಲ ಎಂದು ಸ್ಪಷ್ಟವಾಗಿ ಹೇಳಬಹುದು. ಒಂದೇ ಒಂದು ಉದಾಹರಣೆಯನ್ನು ಕೊಡುವುದಾದರೆ ತಾಲ್ಲೂಕು ಬೋರ್ಡುಗಳ ಹಣದಲ್ಲಿ ೧೮ ಪರ್ಸೆಂಟ್‌ನಷ್ಟು ಹರಿಜನರಿಗಾಗಿ ಖರ್ಚು ಮಾಡಬೇಕೆಂದೂ ಅವರ ಉದ್ಧಾರಕ್ಕಾಗಿ ಹಣವನ್ನು ವಿನಿಯೋಗ ಮಾಡಬೇಕೆಂದೂ ಹೇಳಿದೆ. ಇದು ಇಲ್ಲಿಯವರೆಗೆ ಎಷ್ಟರಮಟ್ಟಿಗೆ ಆಗಿದೆ ಎನ್ನುವುದನ್ನು ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ವಿವರಗಳನ್ನು ತರಿಸಿ ನೋಡಿದರೆ ಗೊತ್ತಾಗುತ್ತದೆ. ಎರಡು ಪರ್ಸೆಂಟ್ ಕೂಡ ಹರಿಜನರ ಉದ್ಧಾರಕ್ಕಾಗಿ ಖರ್ಚಾಗಿಲ್ಲವೆಂದು ನಾನು ಹೇಳಬಲ್ಲೆ. ಆ ಹಣವನ್ನು ಯಾವರೀತಿ ವಿನಿಯೋಗಿಸಬೇಕೆಂಬ ಬಗ್ಗೆ ಸರ್ಕಾರದಿಂದ ಸರಿಯಾದ ತಿಳುವಳಿಕೆ ತಾಲ್ಲೂಕು ಬೋರ್ಡುಗಳಿಗೆ ಹೋಗಿಲ್ಲ. ರಸ್ತೆ ಸಲುವಾಗಿ ಹಣವಿದೆ ಅದರಲ್ಲಿ ೧೮ ಪರ್ಸೆಂಟ್ ಹರಿಜನರಿಗೆ ಖರ್ಚು ಮಾಡಬೇಕೆಂದರೆ ಯಾವ ರೀತಿ ಖರ್ಚು ಮಾಡುವದು; ಯಾವುದೊ ಒಂದು ಸ್ಕೀಂ ಇದ್ದರೆ ಅದರಲ್ಲಿ ೧೮ ಪರ್ಸೆಂಟ್ ಹರಿಜನರಿಗೆ ಹೇಗೆ ಖರ್ಚು ಮಾಡುವುದು ಎನ್ನುವ ವಿಚಾರ ಬರುತ್ತದೆ. ಸೆಕ್ರೆಟೇರಿಯಟ್‌ನಿಂದ ಈ ಬಗ್ಗೆ ಯಾವ ಆದೇಶವೂ ಕೆಳಗಿನ ಅಧಿಕಾರಿಗಳಿಗೆ ಹೋಗಿಲ್ಲ. ಈ ರೀತಿ ಯೋಜನೆಗಳನ್ನು ವ್ಯವಸ್ಥಿತವಾಗಿ ಕಾರ್ಯರೂಪಕ್ಕೆ ತರದೇ ಇರುವ ಈ ಸರ್ಕಾರ ಮಾನ್ಯ ಸದಸ್ಯರು ಸೂಚಿಸಿರುವಂತೆ ಒಂದು ಕಾರ್ಪೋರೇಷನ್‌ನ್ನು ಯಾವರೀತಿ ಪ್ರಾರಂಭ ಮಾಡಬಹುದು. ಅದರ ಪ್ರಗತಿ ಎಷ್ಟರಮಟ್ಟಿಗೆ ಆದೀತು ಎನ್ನುವುದಕ್ಕೆ ಹೇಳುತ್ತಿದ್ದೇನೆ. ಈ ಸರ್ಕಾರದಿಂದ ಇದು ಖಂಡಿತವಾಗಿ ಆಗುವುದಿಲ್ಲ ಎಂದು ನಾನು ಹೇಳುತ್ತೇನೆ. ಏಕೆಂದರೆ "ಆರ್ಥಿಕ ಮುಗ್ಗಟ್ಟು" ಎಂದು ಇಂದು ಎಲ್ಲದಕ್ಕೂ ಕಾರಣ ತೋರಿಸುತ್ತಿದ್ದಾರೆ. ಆದ್ದರಿಂದ ಮಾನ್ಯ ಸಮಾಜಕಲ್ಯಾಣ ಶಾಖೆಯ ಮಂತ್ರಿಗಳು ಒಪ್ಪಿಕೊಂಡರೂ ಹಣಕಾಸಿನ ಮಂತ್ರಿಗಳು ಈ ಯೋಜನೆಗೆ ಹಣ ಕೊಡಲು ಒಪ್ಪಲಾರರು ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಮಾನ್ಯ ಸದಸ್ಯರು ಹೇಳುವುದು ಸರಿಯಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ.—ಸರ್ಕಾರದ ಮನೋಭಾವವೇನಿದೆ, ಹಣಕಾಸಿನ ಮಂತ್ರಿಗಳ ಮನೋಭಾವವೇನಿದೆ ಎಂದು ಊಹೆ ಮಾಡಿ ಹೇಳಬಾರದು.

ಶ್ರೀ ಜೆ. ಎಲ್. ಕಬಾಡಿ.— ಸ್ವರಾಜ್ಯ ಬರುವುದಕ್ಕೆ ಪೂರ್ವದಲ್ಲಿ ಮಹಾತ್ಮ ಗಾಂಧೀಜಿ ಕಾಕಾ ಕಾಲೇಲ್ಕರ್ ಮುಂತಾದ ಮಹಾನುಭಾವರು ಹರಿಜನರಿಗಾಗಿ

ದುಡಿದರು. ಈ ಹೊತ್ತು ಅಂಥವರು ಯಾರೂ ಇಲ್ಲ ಎಂದೇ ಹೇಳಬಹುದು. ಹರಿಜನರಾಗಿ ಹುಟ್ಟಿ ನಾವು ಹೊಟ್ಟಿನೋವಿನಿಂದ ನರಳುತ್ತಿರುವ ಕಾರಣ ಬಹಳ ಮಾತನಾಡುತ್ತಿದ್ದೇವೆ, ನಮಗೆ ಇರುವಂತ ನೋವಿನ ಬಗ್ಗೆ ಮಾತನಾಡುತ್ತಿದ್ದೇವೆ. ಆದರೆ ಅದನ್ನು ನಿವಾರಿಸುವುದಕ್ಕೆ ಆ ಯಾವ ಹಿಂದಿನ ಮಹಾನುಭಾವರೂ ಈಗ ಅಧಿಕಾರದಲ್ಲಿರುವುದಿಲ್ಲ ಎಂದು ಮಾತ್ರ ಸ್ಪಷ್ಟವಾಗಿ ಹೇಳುತ್ತೇನೆ. ಹಣಕಾಸನ್ನು ಸಹ ಮಾನ್ಯ ಸಮಾಜ ಕಲ್ಯಾಣ ಶಾಖೆಯ ಮಂತ್ರಿಗಳಿಗೆ ಕೊಟ್ಟರೆ ಆಗ ಅವರು ಇಂಥದನ್ನು ಕಾರ್ಯರೂಪಕ್ಕೆ ತರಬಹುದೇನೋ ಏನೋ ಎನ್ನುವ ಅಭಿಮಾನ ನನಗಿದೆ. ಹರಿಜನರಿಗಾಗಿ ಪ್ರಗತಿದಾಯಕವಾದ ಕೆಲಸವನ್ನು ಮಾಡುತ್ತೇವೆನ್ನುವ ಬರೀ ಬಾಯಿ ಮಾತನ್ನು ಇಂದು ಯಾರು ನಂಬುತ್ತಾರೆ? ನಂಬುತ್ತಾರೆಂದು ಭಾವಿಸುವುದು ಮಾತ್ರ ತಪ್ಪು. ಆದರಿಂದ ಈ ಜನರ ಉದ್ಧಾರವಾಗುವುದಿಲ್ಲ. ಇಂಥ ಒಂದು ಕಾರ್ಪೊರೇಷನ್ ಮಾಡಬೇಕೆಂಬ ಮನೋಭಾವ ಸರ್ಕಾರಕ್ಕೆ ಇದ್ದುದೇ ಆದರೆ ಹರಿಜನರ ಪ್ರಗತಿಗಾಗಿ ಯೋಜನೆಗಳನ್ನು ಮಾಡುತ್ತೇವೆನ್ನುವ ಮನೋಭಾವ ಸರ್ಕಾರಕ್ಕೆ ಇದ್ದುದೇ ಆದರೆ ಅದು ಒಳ್ಳೆಯದೇ ಆದರೆ ಈ ಹೊತ್ತು ಇರತಕ್ಕ ಪರಿಸ್ಥಿತಿಯನ್ನು ನೋಡಿದರೆ ಅವರು ಎಷ್ಟರ ಮಟ್ಟಿಗೆ ಇದನ್ನು ಮಾಡುತ್ತಾರೆನ್ನುವ ಶಂಕೆ ನನಗಿದೆ. "ಲೆದರ್ ಬೋರ್ಡ್" ಎಂದು ಮಾಡಿದರು. ಆದರ ಪರಿಸ್ಥಿತಿ ಈ ಹೊತ್ತು ಏನಾಗಿದೆ?. ಅದು ಸತ್ತಿದೆ; ಜೀವಂತವಾಗಿಲ್ಲ. ಅದಕ್ಕಿದ್ದ 'ಚೇರ್‌ಮನ್' ಅವರನ್ನು ಪಬ್ಲಿಕ್ ಸರ್ವಿಸ್ ಕಮಿಷನ್ ಸದಸ್ಯರನ್ನಾಗಿ ಮಾಡಿದರು. ತೆರವಾದ ಸ್ಥಾನಕ್ಕೆ ಇದುವರೆಗೂ ಯಾರನ್ನೂ ಚೇರ್‌ಮನ್ ಆಗಿ ನೇಮಕ ಮಾಡಿಲ್ಲ, ಆರು ತಿಂಗಳಾದರೂ ಮಾಡಿಲ್ಲ. ಏಕೆ ಹೀಗಾಗುತ್ತಿದೆ ? ಹರಿಜನರಿಗಾಗಿ, ಬಡವರಿಗಾಗಿ, ಬಡತನವನ್ನು ಹೋಗಲಾಡಿಸುವುದಕ್ಕೆ ಆಲೋಚನೆ ಮಾಡುತ್ತೇವೆ, ಆದರೆ ಅದಕ್ಕೆ ತಕ್ಕ ಕ್ರಮಗಳನ್ನು ತೆಗೆದುಕೊಳ್ಳುವುದಿಲ್ಲ. ಕ್ರಮ ಕೈಗೊಳ್ಳುತ್ತೇವೆಂದು ಹೇಳುವಂಥ ಈ ಸರ್ಕಾರ ಹರಿಜನರ ಬೆಂಬಲದಿಂದ ಬಂದಿರುವಂಥ ಈ ಸರ್ಕಾರ ಈ ರೀತಿ ಮಾಡುವುದಾದರೆ ಅದು ನಿಜವಾಗಿಯೂ ನಾಚಿಕೆಗೇಡಿನ ಪ್ರಸಂಗವೆಂದು ಹೇಳಬಹುದು. ಹರಿಜನರಿಂದ ವೋಟು ತೆಗೆದುಕೊಂಡು, ಅಧಿಕಾರಕ್ಕೆ ಬಂದ ನಂತರ ಅವರನ್ನು ಕಡೆಗಣಿಸಿದ್ದಾರೆ. ಮಾನ್ಯ ಮಂತ್ರಿಗಳು ಈ ವಿಚಾರವನ್ನು ಬಹಳ ಎಚ್ಚರಿಕೆಯಿಂದ ಪರಿಶೀಲನೆ ಮಾಡಬೇಕು. ಇಂಥ ಒಂದು ಕಾರ್ಪೊರೇಷನ್ ಮಾಡುವುದು ಅವಶ್ಯವಿದೆ ಎಂದು ಹೇಳುವುದರಲ್ಲಿ ಬಹಳ ಸತ್ಯವಿದೆ ಎಂದು ನಾನು ಮಾನ್ಯ ಸಚಿವರಲ್ಲಿ ವಿನಂತಿಮಾಡಿಕೊಳ್ಳುತ್ತೇನೆ. ಲೆದರ್ ಬೋರ್ಡಿನಲ್ಲಿ ಸಹಿತ ಲೆದರ್‌ಕಾರ್ಪೊರೇಷನ್ ಮಾಡಬೇಕೆಂದು ನಿರ್ಣಯ ತೆಗೆದುಕೊಂಡರೂ ಸಹಿತ ಅಲ್ಲಿ ಚೇರಮನ್ ಇಲ್ಲವೆಂದರೆ ನಾವು ಮಾಡಬೇಕಾದ ಕೆಲಸವೇನು ? ಇದನ್ನು ನೋಡಿದರೆ ಹರಿಜನರ ಬಗ್ಗೆ ಸರ್ಕಾರಕ್ಕೆ ಎಷ್ಟು ಕಳಕಳಿಯಿದೆ ಎನ್ನುವುದನ್ನು ಕೇಳಬೇಕಾಗುತ್ತದೆ. ಆರ್ಥಿಕವಾಗಿ ಹರಿಜನರನ್ನು ಮುಂದೆ ವಯ್ಯಬೇಕು ಎಂದು ಹೇಳುತ್ತಾರೆ. ಸಾಮಾಜಿಕ ನ್ಯಾಯ ಸರ್ಕಾರದಿಂದ ಸಿಗುತ್ತದೆಯೇ ಎಂದು ವಿಚಾರ ಮಾಡಿದರೆ, ಸಾಮಾಜಿಕ ನ್ಯಾಯ ಈ ಜನರಿಗೆ ದೊರೆತಿಲ್ಲ

ಎಂಬುದು ಸ್ಪಷ್ಟ. ಹರಿಜನರ ಮನೆಗಳನ್ನು ಸುಡುವುದನ್ನು ನೋಡಿದರೆ, ಅವರನ್ನು ಯಾವ ರೀತಿಯಿಂದ ಉಪಯೋಗಿಸಿಕೊಳ್ಳುತ್ತಿದ್ದಾರೆ ಎಂದು ನೋಡಿದರೆ ಕೇವಲ ಕೆಳಮಟ್ಟದಲ್ಲಿ ತುಳಿದಿಟ್ಟು ಅವರನ್ನು ಬಗ್ಗು ಬಡಿದರೆ ನಾವು ಮೇಲೆ ಬರುತ್ತೇವೆ ಎಂಬ ಮನೋಭಾವನೆ ಕೆಲ ಸವರ್ಣೀಯರಲ್ಲಿ ಇರುವದು ಗೊತ್ತಾಗುತ್ತದೆ. ಆ ಮನೋಭಾವನೆ ಹೋಗಬೇಕಾದರೆ ಯಾವದೇ ರೀತಿಯಲ್ಲಿ ದ್ವೇಷಭಾವನೆಯೂ ಬೆಳೆಯದ ಹಾಗೆ ನಾವು ಮೊದಲು ಅದನ್ನು ಕಾರ್ಯ ರೂಪದಲ್ಲಿ ತರಬೇಕು. "ಹರಿಜನರು" ಎಂದರೆ ಸರ್ಕಾರದ ಮೊಮ್ಮಕ್ಕಳು, ಅವರಿಗೆ ಎಲ್ಲಾ ಸೌಲಭ್ಯಗಳೂ ಏನ್ನುವ ಮನೋಭಾವನೆ ಇರುವಂಥ ಅಧಿಕಾರಿಗಳು ಇರುವಾಗ ಹರಿಜನರು ಉದ್ಧಾರವಾಗುವುದು ಹೇಗೆ ? ಈ ಮನೋಭಾವನೆ ಹೋಗಬೇಕಾದರೆ ಯಾವರೀತಿಯಿಂದ ಕ್ರಮ ತೆಗೆದುಕೊಳ್ಳಬೇಕು ಎನ್ನುವುದಕ್ಕೆ ಏನಾದರೂ ಕಾನೂನು ತನ್ನಿ. ಕಾನೂನು ತಂದರೆ ಏನಾದರೂ ಮಾಡುವುದಕ್ಕೆ ಆಗುತ್ತದೆ ಎಂದು ಸ್ಪಷ್ಟವಾಗಿ ಹೇಳುತ್ತೇನೆ.

ಜಯಪ್ರಕಾಶ್ ನಾರಾಯಣ್ ಅವರು ತಂದಿರತಕ್ಕ ಸೂಚನೆ ಯೋಗ್ಯ ಇದೆ. ಅದನ್ನು ಬೆಂಬಲಿಸಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷರೇ ಜಯಪ್ರಕಾಶ್ ನಾರಾಯಣ್‌ರವರು ತಂದಿರತಕ್ಕ ಖಾಸಗೀ ನಿರ್ಣಯವನ್ನು ಸಂಪೂರ್ಣವಾಗಿ ಬೆಂಬಲಿಸುತ್ತೇನೆ. ಅವರ ನಿರ್ಣಯವನ್ನು ಓಟಿಗೆ ಹಾಕತಕ್ಕ ಕಾಲದಲ್ಲಿ ಅವರು ಅದನ್ನು ವಾಪಸ್ಸು ಪಡೆಯಬಹುದು ಎನ್ನುವ ಅಭೈರ್ಯವಿದೆ. ಆದರೆ ಅದನ್ನು ವಾಪಸ್ಸು ಪಡೆಯುವುದಿಲ್ಲ ಎನ್ನುವ ಹುಂಬ ಧೈರ್ಯ ಇಟ್ಟುಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೇ, ಇವತ್ತಿನವರೆಗೆ ೨೫ ವರ್ಷಗಳಿಂದ ಹರಿಜನರ ಬಗ್ಗೆ ಬೇಕಾದಷ್ಟು ಕಾರ್ಯಕ್ರಮಗಳು ನಡೆದಿದ್ದರೂ, ವಿಚಾರವಂತರೂ, ಪ್ರಾಜ್ಞವಂತರು ವಿಮರ್ಶೆಮಾಡಿದರೆ, ನಾವು ಸಾಧನೆ ಮಾಡಿದ್ದನ್ನು ಲೆಕ್ಕ ಹಾಕಿದರೆ ಸಾಧನೆ ಮಾಡಿದ್ದನ್ನು ತೋರಿಸುವುದಕ್ಕೆ ಏನೂ ಉಳಿದಿಲ್ಲ. ಜಮೀನು ಕೊಟ್ಟರೆ ಅವರ ಹತ್ತಿರ ಜಮೀನು ಉಳಿಯುವುದಕ್ಕೆ ಬಿಟ್ಟಿಲ್ಲ, ಎತ್ತು ಕೊಟ್ಟರೆ ಅದನ್ನು ಉಳಿಯುವುದಕ್ಕೆ ಬಿಟ್ಟಿಲ್ಲ. ಅವರಿಗೆ ಯಾವುದೇ ವ್ಯವಸ್ಥೆ ಮಾಡಿದರೂ ಸಹ ಅವರ ಹತ್ತಿರ ಏನೂ ಉಳಿಯುವುದಕ್ಕೆ ಆಗಿಲ್ಲ. ಸಮಾಜಿಕವಾಗಿರತಕ್ಕಂಥ ಕೆಲವು ತೊಂದರೆಗಳಿದ್ದವು, ಅವನ್ನು ಸಂಪೂರ್ಣವಾಗಿ ನಿವಾರಣೆ ಮಾಡುವುದಕ್ಕೆ ಆಗಿಲ್ಲ, ನನಗಾದರೂ ಅನ್ನಿಸುತ್ತದೆ. ಮೊದಲು ಅವರನ್ನು ವಿದ್ಯಾವಂತರನ್ನಾಗಿ ಮಾಡುವ ದೊಡ್ಡ ಕೆಲಸವಿದೆ. ಅವರನ್ನು ವಿದ್ಯಾವಂತರನ್ನಾಗಿ ಮಾಡಿ ಪದವೀಧರರನ್ನಾಗಿ ಮಾಡಿಬಿಟ್ಟರೆ ಅವರು ಎಲ್ಲಾ ಕೆಲಸಗಳನ್ನು ಅವರೇ ಮಾಡಿಕೊಳ್ಳುತ್ತಾರೆ. ಮೊದಲು ವಿದ್ಯಾವಂತರನ್ನಾಗಿ ಮಾಡುವ ಕೆಲಸ ಬಹಳ ಬೇಗ ಮಾಡಬೇಕು. ಕಳೆದ ೩೦ ವರ್ಷಗಳಿಂದ ವಿದ್ಯಾರ್ಥಿನಿಲಯಗಳನ್ನೂ ಸ್ಥಾಪನೆ ಮಾಡಿದ್ದಾರೆ, ಸ್ಥಾಪನೆ ಮಾಡಿರುವ ವಿದ್ಯಾರ್ಥಿನಿಲಯಗಳ ರೂಪರೇಷೆ ಒಂದೇ ತರಹವಾಗಿದೆ. ಮಾನ್ಯ ಘೋರ್ಪಡೆಯವರು ತಮ್ಮ ಊರಿನಲ್ಲಿ ಒಂದು ರೆಸಿಡೆನ್ಸಿಯಲ್ ಹಾಸ್ಟಲ್ ಮಾಡಿದ್ದಾರೆ. ಅವರು ನಡೆಸತಕ್ಕ ವಿದ್ಯಾರ್ಥಿ

ನಿಲಯ ಹೇಗೆ ಇದೆ, ಅಲ್ಲಿ ಎಷ್ಟು ಜನರಿಗೆ ವಿದ್ಯಾಭ್ಯಾಸ ಸಿಗುತ್ತದೆ, ಎಷ್ಟು ಸೌಕರ್ಯ ಸಿಗುತ್ತದೆ. ಅಲ್ಲಿನ ಮಕ್ಕಳು ಹೇಗೆ ಇದ್ದಾರೆ ಎಂಬುದನ್ನು ನೋಡಿಕೊಂಡು ಬನ್ನಿ. ನೀವು ಹರಿಜನ ಮಂತ್ರಿಗಳಾಗಿ ನೀವು ನಡೆಸತಕ್ಕ ವಿದ್ಯಾನಿಲಯಗಳು ಇವೆ. ತಿಂಗಳಿಗೆ ೩೦ ರೂಪಾಯಿ ಕೊಟ್ಟರೆ ಹೇಗೆ ಸ್ವಾಮಿ, ಅವರು ಹೊಟ್ಟೆ ಹೊರೆದುಕೊಳ್ಳುವುದು? ಅದನ್ನು ಅಜೀಜ್ ಸೇಠ್‌ರವರೇ ಹೇಳಬೇಕು. ಹಳೇ ಸರ್ಕಾರ ಕೊಡತಕ್ಕ ರೀತಿಯಲ್ಲಿ ಕೊಡುತ್ತಾ ಬಂದರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಹರಿಜನರ ಮಕ್ಕಳ ಸಂಸ್ಕೃತಿ ಏನು ಅವರನ್ನು ಮೇಲಕ್ಕೆತ್ತಬೇಕಾದರೆ ಏನು ಮಾಡಬೇಕು ಎಂದು ಯೋಚನೆ ಮಾಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ಅವರಿಗೆ ಕೊಡುವ ಹಣವನ್ನು ಜಾಸ್ತಿ ಮಾಡಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಜಾಸ್ತಿ ಮಾಡಿದ್ದನ್ನು ಇನ್ನೂ ಕೊಟ್ಟಿಲ್ಲ. ಬಡ್ಜೆಟ್ಟಿನಲ್ಲಿ ಅನೌನ್ಸ್ ಮಾಡಿದ್ದೀರಿ ಅಷ್ಟೇ, ಇವತ್ತಿನವರೆಗೆ ಆ ದುಡ್ಡು ಅಲಾಟ್‌ಮೆಂಟ್ ಆಗಿಲ್ಲ. ಹರಿಜನ ಮಕ್ಕಳಿಗೆ ಆಶ್ರಮ ಶಾಲೆ ಇರಬಹುದು. ಕಾಲೇಜು ವಿದ್ಯಾಭ್ಯಾಸ ಮಾಡುವವರಿಗೆ ವಿದ್ಯಾರ್ಥಿನಿಲಯ ಇರಬಹುದು. ಅದನ್ನು ಉತ್ತಮ ದರ್ಜೆ ವಿದ್ಯಾರ್ಥಿನಿಲಯ ಮಾಡಬೇಕು. ಅವರು ಎಂತಹ ಸಮಾಜದಿಂದ ಬಂದಿದ್ದಾರೆ ಎನ್ನುವುದನ್ನು ನೋಡಬೇಕು. ಅವರ ತಂದೆತಾಯಿಗಳು ಓದುಬರಹ ಗೊತ್ತಿದ್ದವರು ಅನಾಗರೀಕರು, ದಡ್ಡರು. ಅವರು ಮಗನಿಗೆ ಫೀಜ್ ಖರ್ಚು ಮಾಡಿ ವಿದ್ಯೆ ಕಲಿಸುವ ಸ್ಥಿತಿಯಲ್ಲಿಲ್ಲ. ಅಂತಹ ಹರಿಜನರು ಇಲ್ಲಿಗೆ ಬಂದರೆ ಇಲ್ಲಿ ಅರ್ಧಂಬರ್ಧ ತಿಂದು ಕೊಂಡು ಸಾಯುವುದಕ್ಕಿಂತ ಊರಲ್ಲಿ ಇರುವುದೇ ಲೇಸು ಎನ್ನುವ ಭಾವನೆ ಬರುತ್ತಿದೆ. ಹರಿಜನರ ಸ್ಥಿತಿ ಎಲ್ಲರಿಗೂ ಗೊತ್ತಿದ್ದ ಮೇಲೆ ಅವರ ಕಷ್ಟವನ್ನು ತಿಳಿದುಕೊಂಡ ಮೇಲೆ ತಕ್ಕ ವ್ಯವಸ್ಥೆ ಮಾಡದೇ ಹೋದರೆ, ವಿದ್ಯಾಭ್ಯಾಸ ಕಲಿಸುವ ಪ್ರಶ್ನೆಯೇ ಇಲ್ಲ. ಆದುದರಿಂದ ನಿರ್ದಿಷ್ಟಪಡಿಸಿದ ಕಾರ್ಯಕ್ರಮವನ್ನು ಕಾರ್ಯಗತ ಮಾಡುವ ಜವಾಬ ದಾರಿಯನ್ನು ಸಂಸ್ಥೆಗೆ ವಹಿಸಬೇಕು. ಯಾವ ಹರಿಜನ ಮುಖಂಡನಿಗೆ ಇವತ್ತು ಸಮಾಜಕಲ್ಯಾಣ ಜವಾಬದಾರಿಯನ್ನು ಕೊಟ್ಟಾಗ್ಯೂ ಕೂಡ ಅದು ವ್ಯವಸ್ಥಿತ ರೀತಿ ಯಲ್ಲಿ ನಡೆಯದೇ ಇರುವುದರಿಂದ ಸ್ವಾಯತ್ತತೆಯನ್ನು ಹೊಂದಿರತಕ್ಕ ಕಾರ್ಪೊರೇಶನ್ ನಿರ್ಮಾಣ ಮಾಡುವುದು ಹರಿಜನ ಕಲ್ಯಾಣಕ್ಕೋಸ್ಕರ ಅಗತ್ಯ ಎಂದು ಕಾಣುತ್ತದೆ. ನೀವು ಅಧಿಕಾರಕ್ಕೆ ಬಂದು ೧ ವರ್ಷ ೫ ತಿಂಗಳು ಆಯಿತು. ಹಾಸ್ಟಲ್ಲಿನ ರೂಪರೇಷೆಗಳನ್ನು ಯಾವ ರೀತಿಯಲ್ಲಿಯೂ ಬದಲಾವಣೆ ಮಾಡಿಲ್ಲ, ಮಾಡುವುದಕ್ಕೆ ಪ್ರಯತ್ನ ಕೂಡ ಪಟ್ಟಿಲ್ಲ. ಆ ದೃಷ್ಟಿಯಿಂದ ಹರಿಜನ ಮಕ್ಕಳನ್ನು ವಿದ್ಯಾವಂತ ರನ್ನಾಗಿ ಮಾಡತಕ್ಕ ಕೆಲಸ ಮೊದಲು ಮಾಡಬೇಕು. ಆ ಕೆಲಸ ಮಾಡಬೇಕಾದರೆ ವಿದ್ಯಾರ್ಥಿನಿಲಯಗಳನ್ನು ಕಟ್ಟಬೇಕು. ಆ ವಿದ್ಯಾರ್ಥಿನಿಲಯಗಳು ಘೋಷ್ಯಡೆಯವರು ಕಟ್ಟಿಸಿದ ರೆಸಿಡೆನ್ಸಿಯಲ್ ಹಾಸ್ಟಲಿನ ಥರಾದರಿ ಇರಬೇಕು. ಮುಂದಿನ ಒಂದು ವರ್ಷದಲ್ಲಿ ಅಂಥ ಹಾಸ್ಟೆಲ್ಲುಗಳನ್ನು ಎಷ್ಟು ಮಾಡುತ್ತೀರಿ ಎಂದು ನೋಡೋಣ.

ಪ್ರಭಾಕರ್‌ರವರು ಮತ್ತು ಜಯಪ್ರಕಾಶ್ ನಾರಾಯಣ್ ಫೋರ್ಡ್‌ಡೆಯವರ ರೆಸಿಡೆನ್ಸಿಯಲ್ ಸ್ಕೂಲನ್ನು ಹೋಗಿ ನೋಡಿಕೊಂಡು ಬರಲಿ. ಹರಿಜನ ಮುಖಂಡರು ಎಲ್ಲಾ ಹೋಗಿ ಆ ವಿದ್ಯಾನಿಲಯವನ್ನು ನೋಡಿಕೊಂಡು ಬರಬೇಕು. ಅದನ್ನು ರಾಜ್ಯಾದ್ಯಂತ ಜಾರಿಗೆ ತಂದರೆ ಮಕ್ಕಳ ಸ್ಥಿತಿ ಮುಂದೆ ಬರುವುದಕ್ಕೆ ಸಾಧ್ಯ ಎಂಬುದನ್ನು ತಿಳಿದುಕೊಳ್ಳಬೇಕು. ಎಸ್. ಎಸ್. ಎಲ್. ಸಿ. ಓದುವ ಹರಿಜನ ಗಿರಿಜನರ ಮಕ್ಕಳು ಎಷ್ಟು ಜನ ಫೇಲ್ ಆಗುತ್ತಾರೆ, ಕಾಲೇಜ್ ಲೆವಲ್‌ನಲ್ಲಿ ಎಷ್ಟು ಜನ ಫೇಲ್ ಆಗುತ್ತಾರೆ ಎಂಬುದನ್ನು ನೋಡಿ ಹುಡುಗರ ಬುದ್ಧಿ ಚಾತುರ್ಯ ಬೆಳೆಯುತ್ತಾ ಇಲ್ಲ. ಅವರಿಗೆ ಯಾವ ಸವಲತ್ತೂ ಇಲ್ಲ. ಆದುದರಿಂದ ೧೦ ವರ್ಷಗಳಲ್ಲಿ ಎಲ್ಲಾ ಹರಿಜನ ಮಕ್ಕಳಿಗೂ ಕಾಲೇಜ್ ವಿದ್ಯಾಭ್ಯಾಸ ಮಾಡಿಸುತ್ತೇನೆ ಎನ್ನುವ ನಿರ್ದಿಷ್ಟ ಕಾರ್ಯಕ್ರಮ ಹಾಕಿಕೊಂಡು ಪ್ರಯತ್ನ ಮಾಡಿದರೆ ಅವರಿಗೆ ಯಾತಕ್ಕೆ ವಿದ್ಯಾಭ್ಯಾಸ ಆಗುವುದಿಲ್ಲ ಎಂದು ನೋಡೋಣ.

ಶ್ರೀ ಎ. ಶರಣಪ್ಪ.—ಹರಿಜನರ ಹಾಸ್ಟಲ್‌ನಲ್ಲಿ ೫೦ ಪೈಸೆಗೆ ಊಟ ಕೊಡುವ ಕಾಲಕ್ಕೆ ಅವರು ಏನು ಉದ್ಧಾರವಾಗುತ್ತಾರೆ?

ಶ್ರೀ ಕಾಗೋಡು ತಿಮ್ಮಪ್ಪ.—ಅಧ್ಯಕ್ಷರೇ, ಒಂದೆರಡು ಹಾಸ್ಟಲ್‌ಗಳಿಗೆ ಹೋಗಿ ನೋಡಿದರೆ ನಿಮಗೇ ಗೊತ್ತಾಗುತ್ತವೆ. ನಿಮ್ಮ ಮಕ್ಕಳನ್ನು ಖಂಡಿತವಾಗಿ ಅಲ್ಲಿಗೆ ಕಳುಹಿಸುವುದಕ್ಕೆ ಆಗುವುದಿಲ್ಲ. ಅನಿವಾರ್ಯವಾಗಿ ತಂದೆತಾಯಿಗಳು ಮಕ್ಕಳನ್ನು ಅಲ್ಲಿ ಸೇರಿಸುತ್ತಾರೆ. ಅದನ್ನು ದಯವಿಟ್ಟು ಮಾನ್ಯ ಮಂತ್ರಿಗಳು ತಿಳಿದುಕೊಳ್ಳಬೇಕು. ಫೋರ್ಡ್‌ಡೆಯವರನ್ನು ಹಣ ಕೊಡುವುದಕ್ಕೆ ಹೇಳಿ. ಹಣ ಕೊಡದಿದ್ದರೆ ಬಿಡುವುದಿಲ್ಲ ಎಂದು ಸವಾಲು ಹಾಕಿ ಬಸವಲಿಂಗಪ್ಪನವರು ದೇವರ ಪಟದ ಬಗ್ಗೆ ಚಿಂತನ ಮಾಡುವುದನ್ನು ಬಿಟ್ಟು ಜನಾಂಗ ಉದ್ಧಾರ ಮಾಡುವ ಕಡೆ ಲಕ್ಷ ಹಾಕಬೇಕು.

ನಮ್ಮ ರಾಜ್ಯದಲ್ಲಿ ಪುನರ್‌ವಸತಿ ಕೆಲಸ ಮಾಡಿಲ್ಲ. ಆ ಕೆಲಸ ಯಾತಕ್ಕೆ ಮಾಡಬಾರದು? ಭೂಮಿ ಇಲ್ಲದೇ ಇರುವ ಕೂಲಿಗಾರರಿಗೆ ಕೇವಲ ಒಂದೆರಡು ಎಕರೆ ಭೂಮಿ ಕೊಡುವುದರಿಂದ ಸಮಸ್ಯೆ ಬಗೆಹರಿಯುವುದಿಲ್ಲ. ಎತ್ತು ಬೇಕಾಗುತ್ತವೆ, ಗೊಬ್ಬರ ಬೇಕಾಗುತ್ತದೆ. ಒಂದು ವರ್ಷ ಸಾಗುವಳಿ ಮಾಡುವುದಕ್ಕೆ ಖರ್ಚು ಬೇಕಾಗುತ್ತದೆ. ಕೈಲಿ ಹಣವಿಲ್ಲದೆ ಸಾಗುವಳಿ ಮಾಡುತ್ತಾ ಕೂತರೆ ಹೊಟ್ಟೆ ಹೊರೆಯುವದಕ್ಕೆ ಆಗುತ್ತದೆಯೇ? ಸಾಗುವಳಿ ಮಾಡುವುದನ್ನು ಬಿಟ್ಟು ಕೂಲಿ ಮಾಡುವುದಕ್ಕೆ ಹೋದರೆ ಸಾಗುವಳಿ ನಿಲ್ಲುತ್ತದೆ. ಕೂಲಿ ಮಾಡದೆ ಸಾಗುವಳಿ ಮಾಡಿದರೆ ಹೊಟ್ಟೆ ಹೊರೆಯುವುದಕ್ಕೆ ಆಗುವುದಿಲ್ಲ. ಆಗ ಜಮೀನು ಪಾಳು ಬೀಳುತ್ತದೆ. ೪-೫ ವರ್ಷ ಹಾಗೇ ಪಾಳು ಬಿಟ್ಟರೆ ಅದನ್ನು ಬೇರೆಯವರು ಲಪಟಾಯಿಸಿಕೊಂಡು ಹೋಗುತ್ತಾರೆ. ಒಂದು ವರ್ಷದಲ್ಲಿ ೧೦ ಹರಿಜನ ಕುಟುಂಬಕ್ಕೆ ಪುನರ್ ವಸತಿ ಮಾಡುವ ಯೋಚನೆ ಮಾಡಿ ಅವರಿಗೆ ಭೂಮಿ ಕೊಟ್ಟು ಭೂಮಿ ಸಾಗುವಳಿಗೆ ಹಚ್ಚಿಸಿ, ಪುನರ್ ವಸತಿಗೂ ಅವಕಾಶ ಮಾಡಿಕೊಟ್ಟು ಎಲಾ ಅನುಕೂಲತೆಗಳನ್ನು

ಒದಗಿಸಿ ಕೊಡಿ. ಭೂಮಿ ಸಿಗದೇ ಇರುವ ಕಡೆಗಳಲ್ಲಿ ಯಾವುದಾದರೂ ಸಣ್ಣ ಪುಟ್ಟ ಕಾರಖಾನೆ ವಗೈರೆ ಮಾಡಿ ಅವರನ್ನು ಅಲ್ಲಿ ದುಡಿಯುವುದಕ್ಕೆ ಹಚ್ಚಿ; ಆದೂ ಸಿಗದಿದ್ದರೆ ಅನೇಕ ಕಡೆಗಳಲ್ಲಿ ಕೂಲಿ ಸಿಗುವಂತಾದರೂ ಮಾಡಿ. ಬೇಸಾಯ ಕೂಲಿಗಾರರಿಗೆ ಮಿನಿಮಂ ವೇಜಸ್ ಕೊಡುತ್ತಾ ಇಲ್ಲ ಬೇಸಾಯ ಕೂಲಿಗಾರರಲ್ಲಿ ಹರಿಜನರು ಜಾಸ್ತಿ ಇದ್ದಾರೆ. ತಮ್ಮ ಅಂಕಿಅಂಶಗಳ ಪ್ರಕಾರ ಬೇಸಾಯ ಕೂಲಿಗಾರರಿಗೆ ವರ್ಷದಲ್ಲಿ ೨ ತಿಂಗಳು ಕೂಲಿ ಸಿಗುತ್ತದೆ. ಈ ಎರಡು ತಿಂಗಳಲ್ಲಿ ಬರತಕ್ಕ ಸಂಪಾದನೆಯಿಂದ ೧೨ ತಿಂಗಳು ಜೀವನವನ್ನು ಅವರು ಹೇಗೆ ನಡೆಸಬೇಕು? ಹರಿಜನರಿಗೆ ತಿಂಗಳಿಗೆ ಕನಿಷ್ಟ ೧೫೦ ರೂಪಾಯಿ ಸಂಪಾದನೆ ಮಾಡುವುದಕ್ಕೆ ವ್ಯವಸ್ಥೆಮಾಡಿ. ಒಬ್ಬರು ಫ್ಯಾಕ್ಟರಿಯಲ್ಲಿ ಕೆಲಸಕ್ಕೆ ಇದ್ದರೆ ಅಥವಾ ಸರ್ಕಾರಿ ನೌಕರಿಯಲ್ಲಿದ್ದರೆ ಅತನಿಗೆ ಒಂದನೇ ತಾರೀಖು ಬಂದರೆ ೧೫೦ ರೂಪಾಯಿ ಸಂಬಳ, ಭಾನುವಾರ ರಜಾ, ಪ್ರಾವಿಡೆಂಟ್ ಫಂಡ್, ಗ್ರಾಚ್ಯುಯಿಟಿ ಇವೆಲ್ಲಾ ಸಿಗುತ್ತವೆ. ಇವೆಲ್ಲಾ ಹರಿಜನರಿಗೂ ಕೂಡ ಸಿಗುವಂತೆ ಮಾಡಿ.

11-00 A. M.

ಶ್ರೀ ಎಚ್. ಎನ್. ಸಿದ್ದಪ್ಪ.— ಇನ್‌ಕ್ರೀಸ್ಡ್ ಡಿ. ಎ. ಸಿಗುವಂತಿರಬೇಕು.

ಶ್ರೀ ಕಾಗೋಡು ತಿಮ್ಮಪ್ಪ.—ಇನ್‌ಕ್ರೀಸ್ಡ್ ಡಿ.ಎ. ಕೊಡಬೇಕು. ಹರಿಜನರು ಅಕ್ಕಿ ಕೊಳ್ಳಬೇಕು, ಭತ್ತ ಕೊಳ್ಳಬೇಕು. ಎಲ್ಲವನ್ನೂ ಕೊಂಡೇ ತಿನ್ನಬೇಕು. ಬೆಲೆ ಏರಿದಹಾಗೆ ಹರಿಜನರಿಗೆ ಸಂಬಳ ಸಾರಿಗೆ, ಕೂಲಿ ಜಾಸ್ತಿ ಮಾಡುತ್ತಾ ಹೋದರೆ ಸ್ವಾಭಾವಿಕವಾಗಿ ಅವರಿಗೆ ತಮ್ಮ ಜೀವನದಲ್ಲಿ ತೃಪ್ತಿ ಇರುತ್ತದೆ. ಈ ದೃಷ್ಟಿಯಿಂದ ನೀವು ಪುನರ್ವಸತಿ ಕಾರ್ಯಕ್ರಮವನ್ನು ನಿರೂಪಿಸಬೇಕು. ಅವರು ಕೂಲಿ ಮಾಡುವುದಾದರೆ ಒಂದನೇ ತಾರೀಖಿಗೆ ಸರಿಯಾಗಿ ೧೫೦ ರೂಪಾಯ ಅವರ ಕೈಗೆ ಬರುವಂತೆ ಮಾಡಿ. ಜೊತೆಗೆ ಪ್ರಾವಿಡೆಂಡ್ ಫಂಡ್, ಗ್ರಾಚ್ಯುಯಿಟಿ ಇವೆಲ್ಲಾ ಸಿಗುವಂತೆ ಮಾಡಿ. ಒಂದೇಸಾರಿ ಎಲ್ಲವನ್ನೂ ಮಾಡುವುದಕ್ಕೆ ಆಗದೇ ಇದ್ದರೆ, ವರ್ಷಕ್ಕೆ ಪ್ರತಿ ತಾಲ್ಲೂಕಿನಲ್ಲಿ ೫೦ ಕುಟುಂಬಗಳಿಗೆ ಪುನರ್ವಸತಿ ಕಾರ್ಯಕ್ರಮವನ್ನು ಹಾಕಿಕೊಂಡು ಒಂದು ಯೋಜನೆಯನ್ನು ತನ್ನಿ. ಇದಕ್ಕೆ ಎಷ್ಟು ಹಣ ಖರ್ಚಾದರೂ ಚಿಂತೆ ಇಲ್ಲ. ಪ್ರಚಾರ ಮಾಡುವ ಕಾರ್ಯಕ್ರಮಗಳನ್ನು ದಯವಿಟ್ಟು ಕೈಬಿಡಿ. ಮನೆ ಕೊಡುವ ಯೋಜನೆಯನ್ನು ಹೇಳಿದ್ದೀರಿ. ಅದನ್ನು ನಾನು ಸ್ವಾಗತಿಸುತ್ತೇನೆ. ಭೂಮಿ ಕೊಡುವುದರ ಜೊತೆಗೆ ಬೀಜ, ಗೊಬ್ಬರ, ವಗೈರೆ ಒದಗಿಸಿಕೊಟ್ಟರೆ, ಆಗ ಆತ ಸ್ವಯಂ ದುಡಿದು ಉತ್ಪಾದನೆ ಮಾಡಿ, ಜೀವನ ಮಾಡುವುದಕ್ಕೆ ಅತ್ಯಂತ ಉಪಯುಕ್ತವಾಗುತ್ತಿತ್ತು. ವರ್ಷದಲ್ಲಿ ೧೨ ತಿಂಗಳಿಗೆ ಆಗುವಷ್ಟು ಆಹಾರ ಬೆಳೆದುಕೊಂಡು ಸೆಲ್ಫ್‌ಸಫಿಷಿಯಂಟ್ ಆಗಿಬಿಟ್ಟರೆ, ನೀವು ಕೊಡುವ ೫೦೦೦ ರೂಪಾಯಿ ಮನೆಯನ್ನು ಅವನೇ ೪ ವರ್ಷದಲ್ಲಿ ಕಟ್ಟಿಕೊಳ್ಳುತ್ತಾನೆ. ಹರಿಜನರಿಗೆ ಹೊಟ್ಟೆತುಂಬ ಅನ್ನ ಸಿಗಬೇಕು, ಅವರ ಮಕ್ಕಳು ಮರಿಗಳಿಗೆ ಅನ್ನ ಸಿಗಬೇಕು. ಅವರನ್ನು ದುಡಿಮೆಯಲ್ಲಿ ತೊಡಗಿಸಬೇಕು. ಈಗ

ಬರುವ ಉತ್ಪಾದನೆಯಿಂದ ಹೇಗೆ ಮನೆ ಕಟ್ಟಿಕೊಳ್ಳುವುದಕ್ಕೆ ಸಾಧ್ಯ? ಆ ರೀತಿ ಒಂದು ಪುನರ್ವಸತಿ ಕಾರ್ಯಕ್ರಮವನ್ನು ಕೈಗೊಳ್ಳಬೇಕು. ನಮ್ಮ ರಾಜ್ಯಕ್ಕೆ ಟಿಬೆಟಿಯನ್ನರು ಬಂದರು. ಅವರಿಗೆ ಏನೇನು ಸೌಕರ್ಯ ಮಾಡಿ ಕೊಟ್ಟರು ಅಂದರೆ, ಜಮೀನು ಕೊಟ್ಟರು, ಬುಲ್ಡೋಜರ ಕೊಟ್ಟರು; ಟ್ರಾಕ್ಟರ್ ಕೊಟ್ಟರು, ನೇಗಿಲು, ಗೊಬ್ಬರ ಎಲ್ಲಾ ಕೊಟ್ಟರು. ಆದರೆ ಇಲ್ಲಿರತಕ್ಕ ಹರಿಜನರು ಸಾವಿರಾರು ವರ್ಷಗಳಿಂದ ಸಾಯುತ್ತಿದ್ದಾರೆ. ಇವರಿಗೆ ಎಲ್ಲಾದರೂ ಒಂದು ಕಾಲೋನಿ ಮಾಡಿ ಪುನರ್ವಸತಿ ವ್ಯವಸ್ಥೆ ಮಾಡಲಿಲ್ಲ. ಹೊರಗಿನವರು ನಮ್ಮ ರಾಜ್ಯಕ್ಕೆ, ರಾಷ್ಟ್ರಕ್ಕೆ ಬಂದಾಗ ಎಷ್ಟು ಆಸೆ ಆಕಾಂಕ್ಷೆಯಿಂದ ವಿಶ್ವಾಸ ಮನೋಭಾವದಿಂದ, ಸೌಹಾರ್ದ ಮನೋಭಾವದಿಂದ ಪುನರ್ವಸತಿ ಸೌಕರ್ಯ ಮಾಡಿ ಕೊಟ್ಟರೋ ಅದೇ ರೀತಿ ರಾಜ್ಯದಲ್ಲಿ ಹುಟ್ಟಿ ಬೆಳೆದು ಸಾಯತಕ್ಕ ಹರಿಜನ-ಗಿರಿಜನರಿಗೆ ಪುನರ್ವಸತಿ ಯೋಜನೆ ಇವತ್ತಿನ ವರೆಗೂ ಮಾಡಲಿಲ್ಲ ಎಂದರೆ ನಾವು ನಾಚಿಕೆ ಪಡತಕ್ಕ ವಿಷಯ. ತಾಲ್ಲೂಕು ಬೋರ್ಡಿಗೆ ಕೊಡುತ್ತಾ ಇರತಕ್ಕ ಹಣ ಸರಿಯಾಗಿ ಖರ್ಚಾಗುತ್ತಾ ಇಲ್ಲ. ಕೆಲವರು ವೈಯುಕ್ತಿಕವಾಗಿ ಸಹಾಯ ಕೊಡಬಾರದು ಎಂದು ಹೇಳುವುದು, ಹೇಗೆ ಆಗುತ್ತದೆ. ಭಾವಿ ತೋಡುವ ಕೆಲಸ ಆಗುತ್ತಿಲ್ಲ. ಹರಿಜನರಿಗೋಸ್ಕರ ೨೫ ವರ್ಷಗಳಿಂದ ಏನು ಹಣ ಖರ್ಚು ಮಾಡುತ್ತೀದ್ದೀರಿ, ಅದರ ಫಲಿತಾಂಶ ಎನೂ ಸಿಗುತ್ತಾ ಇಲ್ಲ. ಇದೇ ರೀತಿ ಇದ್ದರೆ ಮತ್ತೆ ೨೫ ವರ್ಷಗಳಾದರೂ ಅವರಿಂದ ಪ್ರಯೋಜನವಾಗುವುದಿಲ್ಲ ನಿಮಗೆ ಈಗ ಮುಖಂಡತ್ವ ಸಿಕ್ಕಿದೆ, ನೀವು ಜವಾಬ್ದಾರಿ ಹೊತ್ತಿದ್ದೀರಿ, ನೀವು ಎಲ್ಲಾ ಅಂಶಗಳನ್ನು ತಿಳಿದುಕೊಂಡಮೇಲೆ, ಏನು ಕಾರ್ಯಕ್ರಮ ರೂಪಿಸಬೇಕು ಎಂದು ನಿಮಗೆ ಗೊತ್ತಾದಮೇಲೆ, ಒಂದು ಯೋಜನೆ ಕೂಡಲೇ ತಯಾರು ಮಾಡಿ. ಹಣಕ್ಕೆ ಯೋಚನೆ ಮಾಡಬೇಕಾಗಿಲ್ಲ, ಅದಕ್ಕೆ ಬೆಂಬಲ ಸಿಗುವುದಕ್ಕೆ ಯೋಚನೆ ಮಾಡಬೇಕಾಗಿಲ್ಲ.

ಶ್ರೀ ಕೆ. ಪ್ರಭಾಕರ.— ಹಣ ಸಾಕಷ್ಟು ಒದಗಿಸಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.— ಈ ಸಭೆಯಲ್ಲಿ ಇಷ್ಟು ಹಣ ಕೊಡಬೇಕು ಎಂದು ಹೇಳಿ, ಏಕೆ ಕೊಡುವುದಿಲ್ಲ ಎಂದು ನೋಡುತ್ತೀನೆ. ನಿಮ್ಮ ಕೈಯಲ್ಲಿ ಅಧಿಕಾರ ಇದೆ. ನೀವು ಈ ಜವಾಬ್ದಾರಿ ಕೆಲಸ ಮಾಡದೇ ಇದ್ದರೆ ಯಾರು ಏನೂ ಮಾಡುವುದಕ್ಕಾಗುವುದಿಲ್ಲ. ೧೦—೨೦ ಕೋಟಿ ರೂಪಾಯಿಯ ಒಂದು ಕಾರ್ಯಕ್ರಮ ರೂಪಿಸಿ ಸಪ್ಲಿಮೆಂಟರಿ ಡಿಮ್ಯಾಂಡ್ ತನ್ನಿ. ಯಾರು ಬೇಡ ಎಂದು ಹೇಳುತ್ತಾರೆ? ಇಂತಹ ದೊಡ್ಡ ಕೆಲಸವನ್ನು ಮಾಡಬೇಕಾದರೆ ಕಾರ್ಪೊರೇಷನ್ ಆಗತ್ಯ ಇದೆ ಎನ್ನುವುದು ಎಲ್ಲರಿಗೂ ಕಾಣುತ್ತಾ ಇದೆ.

ಶ್ರೀ ಎಂ.ಎಚ್. ಜಯಪ್ರಕಾಶ್ ನಾರಾಯಣ್.— ಸರಕಾರದವರು ರಿಹ್ಯಾಬಿಲಿಟೇಷನ್ ಆಫ್ ಲ್ಯಾಂಡ್‌ಲೆಸ್ ಅಗ್ರಿಕಲ್ಚರಲ್ ಲೇಬರರ್ಸ್ ಸ್ಕೀಂಗೆ ೧೫ ಲಕ್ಷ ರೂಪಾಯಿ ಇಟ್ಟಿದ್ದರು. ಅದನ್ನು ಲ್ಯಾಪ್ಸ್‌ಮಾಡಿದ್ದಾರೆ. ಅಗ್ರಿಕಲ್ಚರ್ ಕಾಲೋನಿ

ಸ್ಕೀಮನ್ನು ರದ್ದುಮಾಡಿದ್ದಾರೆ. ಮಲ್ಟಿಪರ್ಪಸ್ ಕೋ-ಆಪರೇಟೀವ್ ಪ್ರಾಜೆಕ್ಟ್‌ನ್ನು ನಿಲ್ಲಿಸಿದ್ದಾರೆ. ಅದೇ ರೀತಿ ತಾನೆ ಮುಂದೆ ಇವರು ರಿಹ್ಯಾಬಿಲಿಟೇಟ್ ಮಾಡುವುದು ಹೇಗೆ ?

ಶ್ರೀ ಕಾಗೋಡು ತಿಮ್ಮಪ್ಪ.—ಹರಿಜನರಿಗೋಸ್ಕರ ಇಟ್ಟಂಥ ಹಣವನ್ನು ಸಕಾಲದಲ್ಲಿ ಖರ್ಚುಮಾಡದೆ ಯಾರು ಹಾಗೇ ಬಿಟ್ಟಿದ್ದಾರೆ, ಅವರನ್ನು ಸಾರ್ವಜನಿಕವಾಗಿ ನೇಣು ಹಾಕಬೇಕು. ಇಲ್ಲದಿದ್ದರೆ ಅವರ ಖಾತೆಯನ್ನು ಬದಲಾವಣೆ ಮಾಡಬೇಕು. ಶ್ರೀ ಮಲ್ಲಿಕಾರ್ಜುನ ಸ್ವಾಮಿಯವರು ಈ ಕೆಲಸ ಮಾಡಿದ್ದರೆ ಅವರನ್ನು ಸಾರ್ವಜನಿಕವಾಗಿ ಈ ರೀತಿ ಟೀಕೆ ಮಾಡಬೇಕು, ಶ್ರೀ ಘೋರ್ಪಡೆಯವರು ಈ ಕೆಲಸ ಮಾಡಿದ್ದರೆ ಅವರನ್ನು ಆಕ್ಷೇಪಣೆಗೆ ಒಳಪಡಿಸಬೇಕು. ಹರಿಜನರಿಗೋಸ್ಕರ ಇಟ್ಟ ಹಣವನ್ನು ಸಕಾಲದಲ್ಲಿ ಖರ್ಚು ಮಾಡದೇ ಲ್ಯಾಪ್ಸ್ ಆಗಿದ್ದರೆ ಯಾರು ಅದಕ್ಕೆ ಜವಾಬ್ದಾರಿ? ಶ್ರೀ ಬದರೀ ನಾರಾಯಣ ಅಯ್ಯಂಗಾರ್ಯರಿಗೆ ಗೊತ್ತಿದೆ. ಹರಿಜನರಿಗೆ ಸರ್ಕಾರ ಜಮೀನು ಕೊಟ್ಟರು ಉಳಿಯಲಿಲ್ಲ. ಅವರ ಹತ್ತಿರ ಎತ್ತು ಇಲ್ಲ, ಎತ್ತು ಇದ್ದರೆ, ಬೀಜ ಇಲ್ಲ, ಬೀಜ ಇದ್ದರೆ ನೊಗ ಇಲ್ಲ, ನೇಗಿಲು ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ಇದ್ದುದರಿಂದ ಅವರಿಗೆ ಕೊಟ್ಟ ಭೂಮಿಯನ್ನು ಕಳೆದುಕೊಂಡರು.

ಶ್ರೀ ಕೆ. ಪ್ರಭಾಕರ್.—ಹರಿಜನರು ಮೇಲೆ ಬಂದರೆ, ಬೇರೆಯವರು ಕೆಳಗೆ ಹೋಗುತ್ತಾರೆ ಎಂದು ಇರಬಹುದು.

ಶ್ರೀ ಕಾಗೋಡು ತಿಮ್ಮಪ್ಪ.—ಮೊದಲು ಅವರನ್ನು ವಿದ್ಯಾವಂತರನ್ನಾಗಿ ಮಾಡಬೇಕು. ಮಾನ್ಯ ಘೋರ್ಪಡೆಯವರು ನಡೆಸತಕ್ಕ ವಿದ್ಯಾರ್ಥಿ ನಿಲಯಗಳಂತೆ ಮಾಡಿ ೧೦ ವರ್ಷದಲ್ಲಿ ಅವರನ್ನು ಬುದ್ಧಿವಂತರನ್ನಾಗಿ ಮಾಡಿ. ಅವರಿಗೆ ಕೊಡಬೇಕಾದುದನ್ನು ಕೊಡದಿದ್ದರೆ ಲಾಠಿ ತೆಗೆದುಕೊಳ್ಳುತ್ತಾರೆ. ಹರಿಜನರು ಇರತಕ್ಕ ಸ್ಥಿತಿ ನೋಡಿದರೆ, ನಾವು ಹೇಸಿಕೆ ಪಡಬೇಕು. ಇವೊತ್ತು ಮಲ ಹೊರುವ ಕಾನೂನು ತೆಗೆದು ಹಾಕಿದರೆ, ಅವರು ಅದರ ವಿರುದ್ಧ ರಿಟ್ ಹಾಕುವುದಕ್ಕೆ ಹೊರಟಿದ್ದಾರೆ. ಹರಿಜನರು ತಮ್ಮ ಬದುಕನ್ನು ನೋಡಿ ತಮ್ಮ ಸ್ಥಿತಿಯನ್ನು ನೋಡಿ ಅಸಹ್ಯ ಪಡುವ ಸ್ಥಿತಿಗೆ ಬರಬೇಕು. ಆ ಸ್ಥಿತಿಗೆ ಬರಬೇಕಾದರೆ, ಮೊದಲು ಅವರನ್ನು ವಿದ್ಯಾವಂತರನ್ನಾಗಿ ಮಾಡಬೇಕು. ಅವರ ಪುನರ್ವಸತಿಯ ಬಗ್ಗೆ ಯಾವುದಾದರೂ ನಿರ್ದಿಷ್ಟವಾದ ಅವಧಿಯಲ್ಲಿ ಖರ್ಚು ಮಾಡುವುದಕ್ಕೆ ಕಾರ್ಯಕ್ರಮವನ್ನು ಸೃಷ್ಟಿಸಬೇಕು. ಅದನ್ನು ಕಾರ್ಯಗತ ಮಾಡಬೇಕಾದರೆ ಅದಕ್ಕೆ ಒಂದು ಸಂಸ್ಥೆ ಇರಬೇಕಾಗುತ್ತದೆ. ಆ ಸಂಸ್ಥೆಯ ಮೂಲಕ ಕೆಲಸ ಮಾಡಬೇಕಾಗುತ್ತದೆ. ಅದಕ್ಕೋಸ್ಕರ ಕಾರ್ಪೊರೇಷನ್ ಅಗತ್ಯವಿದೆ. ನಮ್ಮ ರಾಜ್ಯದಲ್ಲಿ ೪೫ ಲಕ್ಷ ಹರಿಜನರಿದ್ದಾರೆ ಅವರಿಗೋಸ್ಕರ ಒಂದು ಕಾರ್ಪೊರೇಷನ್ ತೆಗೆದು, ಹೇರಳವಾದ ಭಂಡವಾಳ ತೊಡಗಿಸಿ ಅವರಲ್ಲಿ ತಾಲ್ಲೂಕು ಬೋರ್ಡ್ ಮತ್ತು ಪಂಚಾಯತಿಯವರು ಹಣವನ್ನು ಹಾಕಿ, ಏನೇನು ಕಾರ್ಯಕ್ರಮ ರೂಪಿಸುತ್ತಾರೋ ಅದನ್ನು ಕಾರ್ಯಗತ ಗೊಳಿಸುವುದಕ್ಕೆ ಒಬ್ಬ ಅಧಿಕಾರಿ ಇದ್ದರೆ, ಅದನ್ನು ಮಾಡುತ್ತಾ

ಹೋಗುತ್ತಾನೆ. ಆ ದೃಷ್ಟಿಯಿಂದ ಕಾರ್ಪೊರೇಷನ್ ಅಗತ್ಯತೆ ಜಾಸ್ತಿಯಾಗಿದೆ. ಈ ಕೆಲಸಗಳನ್ನು ಮಾಡುವುದಕ್ಕೆ ಸರ್ಕಾರ ಒಪ್ಪಿಕೊಳ್ಳಬೇಕೆಂದು ಕೇಳಿಕೊಂಡು, ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಟಿ. ಆರ್. ಶಾಮಣ್ಣ (ಬೆಂಗಳೂರು—ಕೋಟೆ) — ಮಾನ್ಯ ಸಭಾಧ್ಯಕ್ಷಣಿಯವರೇ, ಈಗ ಮಾನ್ಯ ಸದಸ್ಯರಾದ ಶ್ರೀ ಜಯಪ್ರಕಾಶ ನಾರಾಯಣರವರು ತಂದಿರತಕ್ಕಂಥ ನಿರ್ಣಯದ ಬಗ್ಗೆ ನನ್ನ ಒಪ್ಪಿಗೆಯನ್ನು ಕೊಡುತ್ತಾ ಕೆಲವು ಸಲಹೆಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಸ್ಪಷ್ಟವಾಗಿ ಹೇಳಿದ ಹಾಗೆ ಹರಿಜನರ ಉದ್ಧಾರವಾಗಬೇಕಾದರೆ ಅವರು ಮೊದಲು ವಿದ್ಯಾವಂತರಾಗಬೇಕು. ಈಗ ಶ್ರೀಮಾನ್ ಮಲ್ಲಿಕಾರ್ಜುನಸ್ವಾಮಿಯವರನ್ನು ನೋಡಿದರೆ ಅವರನ್ನು ಯಾರೂ ಹರಿಜನರು ಎಂದು ಹೇಳುವುದಿಲ್ಲ. ಏತಕ್ಕೆಂದರೆ ಅವರಿಗೆ ಸಾಕಾದಷ್ಟು ವಿದ್ವತ್ ಇದೆ, ಒಂದು ಸದ್ಭಾವನೆ ಇದೆ ಮತ್ತು ಸಜ್ಜನರಲ್ಲಿ ಸೇರತಕ್ಕಂಥ ಮನೋಭಾವ ಇದೆ, ಆದುದರಿಂದ ಅವರನ್ನು ಯಾರೂ ಹರಿಜನರು ಎಂದು ಹೇಳುವುದಕ್ಕಾಗುವುದಿಲ್ಲ. ಅದೇರೀತಿ ನಮ್ಮ ಪ್ರಭಾಕರ್‌ರವರೂ ಕೂಡ ಸಾಕಾದಷ್ಟು ಸಂಸ್ಕೃತಿ ಗಳಿಸಿದ್ದಾರೆ ಮತ್ತು ಅನೇಕ ವಿಚಾರಗಳನ್ನು ತಿಳಿದುಕೊಂಡಿದ್ದಾರೆ. ಆ ಜನಾಂಗ ಹೀಗಿದ್ದ ಪಕ್ಷದಲ್ಲಿ ಹರಿಜನ ಎನ್ನತಕ್ಕಂಥಾದ್ದು ಖಂಡಿತ ನಿರ್ಮೂಲವಾಗುತ್ತದೆ. ನನ್ನ ಜುನಾವಣೆಯಲ್ಲಿ ಹೆಚ್ಚಿಗೆ ಬೆಂಬಲ ಕೊಡತಕ್ಕಂಥಾವರು ಹರಿಜನರೇ. ಅವರ ವಿಚಾರವನ್ನು ನಾನು ಚೆನ್ನಾಗಿ ತಿಳಿದುಕೊಂಡಿದ್ದೇನೆ. ಆದರೆ ಒಂದು ವಿಚಾರ ಏನೆಂದರೆ ಅವರು ಸಂಪಾದನೆ ಮಾಡುತ್ತಾರೆ, ಸಂಪಾದನೆ ಮಾಡಿದ್ದನ್ನು ಕುಡಿಯುವುದಕ್ಕೆ ಹಾಕುತ್ತಾರೆ. ಈ ಕುಡಿಯುವುದನ್ನು ತಪ್ಪಿಸುವುದಕ್ಕೆ ಮತ್ತು ಅವರ ಆರ್ಥಿಕ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ? ಇದನ್ನು ಯೋಚನೆ ಮಾಡಿ. ಅವರು ೮ ವರ್ಷದ ಮಕ್ಕಳನ್ನು ಕೂಲಿಗೆ ಕರೆದುಕೊಂಡು ಬರುತ್ತಾರೆ. ಬೆಂಗಳೂರಿನಲ್ಲಿ ಕಾಂಕ್ರೀಟ್ ಕೆಲಸಕ್ಕೆ ಕೂಲಿಗೆ ಹೋಗತಕ್ಕಂಥಾವರು ಸಾಮಾನ್ಯವಾಗಿ ಹರಿಜನ ಮನೆತನಕ್ಕೆ ಸೇರಿದವರೇ. ಆ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಕಳಿಸುವ ಬದಲಾಗಿ ಕೂಲಿಗೆ ಎಳೆದುಕೊಂಡು ಬಂದು ಅವರನ್ನು ಯಥಾಪ್ರಕಾರ ದಾಸ್ಯತ್ವದಲ್ಲಿ ಇಡುವಂತೆ ಮಾಡುತ್ತಾರೆಯೇ ಹೊರತು ಅವರನ್ನು ವಿದ್ಯಾವಂತರನ್ನಾಗಿ ಮಾಡಿ ಮುಂದಕ್ಕೆ ಬರುವುದಕ್ಕೆ ಅವಕಾಶ ಮಾಡುತ್ತಾ ಇಲ್ಲ. ನನ್ನ ಒಂದು ಆಕ್ಷೇಪಣೆ ಏನೆಂದರೆ ಮುಂದೆ ಬರತಕ್ಕಂಥ ಹರಿಜನರ ಮಕ್ಕಳಿಗೆ ತಮ್ಮ ಜನಾಂಗದ ಬಗ್ಗೆ ಒಂದು ಆಸಕ್ತಿ ತೋರಿಸಬೇಕೇ ಹೊರತು ತಮ್ಮ ಸ್ವಾರ್ಥದ ಬಗ್ಗೆ ಆಸಕ್ತಿ ತೋರಿಸಬಾರದು. ಈ ಸಂದರ್ಭದಲ್ಲಿ ಒಂದು ವಿಷಯ ಹೇಳಬೇಕಾಗಿದೆ. ಹಿಂದೆ ಗೋಪಾಲಸ್ವಾಮಿ ಅಯ್ಯರ್ ಅನ್ನುವವರು ಇದ್ದರು. ಅವರು ನಮ್ಮ ಬಂಧುಗಳು. ಅವರು ಹರಿಜನರ ಮನೆಗೆ ಹೋಗಿ ಆ ಮಕ್ಕಳಿಗೆ ಎಲ್. ಎಸ್ ಪಾಸ್ ಆದ ತಕ್ಷಣ ಕರೆದುಕೊಂಡು ಬಂದು ಅವರಿಗೆ

ಬೇಕಾದಂಥ ವಸತಿ ಸೌಕರ್ಯಗಳನ್ನು ಕಲ್ಪಿಸಿಕೊಟ್ಟು ಅವರನ್ನು ವಿದ್ಯಾವಂತರನ್ನಾಗಿ ಮಾಡುತ್ತಿದ್ದರು. ಆ ರೀತಿ ವಿದ್ಯಾಭ್ಯಾಸ ಮಾಡಿದವರಲ್ಲಿ ಅನೇಕರು ಈ ದಿವಸ ಆಫೀಸರ್ ಆಗಿದ್ದಾರೆ, ಕೆಲವರು ದೊಡ್ಡ ದೊಡ್ಡ ಹುದ್ದೆಗಳಲ್ಲೂ ಇದ್ದಾರೆ, ಈ ದಿವಸ ಅವರುಗಳು ಗೋಪಾಲಸ್ವಾಮಿ ಆಯ್ಯರ್‌ರವರಿಗೆ ಚಿರರುಣಿಗಳಾಗಿರಬೇಕು ಎಂದು ಹೇಳುತ್ತೇನೆ.

ಒಬ್ಬ ಸದಸ್ಯರು.—ನಾನೂ ಕೂಡ ಗೋಪಾಲಸ್ವಾಮಿ ಅಯ್ಯರ್‌ರವರ ಹಾಸ್ಟಲ್‌ನಲ್ಲಿ ಓದಿದ್ದೇನೆ. ಅವರ ಫೋಟೋವನ್ನು ಇಟ್ಟುಕೊಂಡು ಪೂಜೆ ಮಾಡುತ್ತಿದ್ದೇನೆ.

ಶ್ರೀ ಟಿ. ಆರ್. ಶಾಮಣ್ಣ.—ಆದುದರಿಂದ ನನ್ನ ಅಭಿಪ್ರಾಯ ಏನೆಂದರೆ ಈಗ ನಮ್ಮಲ್ಲಿ ಅನೇಕ ಹರಿಜನರು ಬೇರೆಯವರ ಬೆಂಬಲದಿಂದ ಏನು ಬಾಳುತ್ತಾರೋ ಅದಕ್ಕೆ ಬದಲಾಗಿ ತಮ್ಮ ಜನಾಂಗಕ್ಕೇನೇ ಕಂಕಣ ಬದ್ಧರಾಗಿ ನಿಂತುಕೊಂಡು ಅವರಿಗೆ ಅನುಕೂಲ ಮಾಡಿಕೊಡುವುದಾದರೆ ನಾವೂ ಕೂಡ ನಮ್ಮ ಬೆಂಬಲವನ್ನು ಪೂರ್ಣವಾಗಿ ಕೊಡುತ್ತೇವೆ ಎಂದು ಖಂಡಿತವಾಗಿಯೂ ಹೇಳುತ್ತೇನೆ. ಒಟ್ಟಿನಲ್ಲಿ ಅವರ ಅಸ್ಪೃಶ್ಯತೆ ಹೋಗಬೇಕು, ಅವರ ಬಡತನ ಹೋಗಬೇಕು, ಅದಕ್ಕೆ ನನ್ನ ಪೂರ್ಣವಾದ ಬೆಂಬಲ ಕೊಡುತ್ತೇನೆ, ಎರಡನೇ ಮಾತೇ ಆಡುವುದಿಲ್ಲ. ಮೊದಲು ಅವರನ್ನು ವಿದ್ಯಾವಂತರನ್ನಾಗಿ ಮಾಡದೇ ಅವರಿಗೆ ಜಮೀನು ಕೊಟ್ಟರೆ, ಮನೆ ಕೊಟ್ಟರೆ, ಗ್ರಾಂಟ್ ಕೊಟ್ಟರೆ ಏನೂ ಉಪಯೋಗವಾಗುವುದಿಲ್ಲ, ಎಲ್ಲವೂ ಅನ್ಯಾಯವಾಗಿ ವ್ಯರ್ಥವಾಗಿ ಹೋಗುತ್ತದೆ. ಆದರೆ ವಿದ್ಯಾಭ್ಯಾಸಕ್ಕೆ ಮಾಡತಕ್ಕಂಥ ಖರ್ಚು ವ್ಯರ್ಥವಾಗುವುದಿಲ್ಲ. ಅವರ ವಿದ್ಯಾಭ್ಯಾಸಕ್ಕೆ ಇನ್ನೂ ಹೆಚ್ಚು ವೆಚ್ಚವಾದರೂ ಪರವಾಯಿಲ್ಲಾ. ಅವರನ್ನು ವಿದ್ಯಾವಂತರನ್ನಾಗಿ ಮಾಡಿ, ಅವರಿಗೆ ಕಡ್ಡಾಯ ವಿದ್ಯಾಭ್ಯಾಸ ಕೊಡಿ. ಆ ಮಕ್ಕಳ ತಂದೆತಾಯಿಗಳು ಬಹಳ ಬಡತನದಲ್ಲಿರುವುದರಿಂದ ಅವರು ಏನು ಮಾಡುತ್ತಾರೆ ಎಂದರೆ ಮಕ್ಕಳನ್ನು ಸ್ಕೂಲಿಗೆ ಕಳುಹಿಸಿದರೆ ಅವನು ಸಂಪಾದನೆ ಮಾಡತಕ್ಕ ೮ ಆಣೆ ೧ ರೂಪಾಯಿ ಎಲ್ಲಿ ಹೋಗುತ್ತದೋ ಎಂದು ಅನೇಕರು ಅವರ ಮಕ್ಕಳನ್ನು ವಿದ್ಯಾಭ್ಯಾಸ ಮಾಡಿಸುವುದಕ್ಕೆ ಅವಕಾಶ ಕೊಡುತ್ತಾ ಇಲ್ಲ. ಅಂಥಾವರನ್ನು ಕಡ್ಡಾಯವಾಗಿ ಕರೆದುಕೊಂಡು ಬಂದು ಹಾಸ್ಟಲಿಗೆ ಸೇರಿಸಿ ವಿದ್ಯಾಭ್ಯಾಸ ಮಾಡಿಸಬೇಕು. ಮತ್ತು ಅನೇಕ ಸಂದರ್ಭಗಳಲ್ಲಿ ನೋಡಿದರೆ ಅವರು ಹೆಚ್ಚು ಫೇಲ್ ಆಗುತ್ತಿದ್ದಾರೆ ಆದುದರಿಂದ ಇದನ್ನು ತಪ್ಪಿಸುವುದಕ್ಕೆ ಈಗ ಹರಿಜನ ವಿದ್ಯಾರ್ಥಿನಿಲಯ ಎಂದು ಏನು ಮಾಡಿದ್ದೀರೋ ಅದೇರೀತಿ ಆ ಹಾಸ್ಟಲ್‌ನಲ್ಲಿ ಆ ಮಕ್ಕಳು ಯಾವ ಸಬ್ಜಕ್ಟ್‌ನಲ್ಲಿ ವೀಕ ಆಗಿರುತ್ತಾರೋ ಆ ಸಬ್ಜಕ್ಟ್‌ನ್ನು ಹೇಳಿಕೊಡಲು ಟ್ಯೂಟರನ್ನು ನೇಮಿಸಿದರೆ ಅವರು ಫೇಲ್ ಆಗುವುದಕ್ಕೆ ಅವಕಾಶವಾಗುವುದಿಲ್ಲ. ಅವರು ಒಂದುವೇಳೆ ಫೇಲ್ ಆದರೆ ಅವರಿಗೆ ಮುಂದಿನ ವರ್ಷ ಅದರ ಸ್ಕಾಲರ್‌ಷಿಪ್ ಆಗಲಿ ಯಾವುದಾದರೂ ಆಗಲಿ ಸಿಕ್ಕುವುದಿಲ್ಲ. ಆದುದರಿಂದ ಇಂಥಾ ಒಂದು

ವ್ಯವಸ್ಥೆಯನ್ನು ಹಾಸ್ಟಲ್‌ಗಳಲ್ಲಿ ಏರ್ಪಾಡು ಮಾಡಿದರೆ ಅವರಿಗೆ ಇನ್ನೂ ಹೆಚ್ಚಿನ ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ.

ಇನ್ನು ಶ್ರೀಮಾನ್ ಜಯಪ್ರಕಾಶ್ ನಾರಾಯಣರವರು ಟೈಪರೈಟಿಂಗ್ ಅಂಡ್ ಷಾರ್ಟ್‌ಹ್ಯಾಂಡ್ ಬಗ್ಗೆ ಹರಿಜನರಿಗೆ ಸರಿಯಾದ ಉತ್ತೇಜನ ಸಿಕ್ಕುತ್ತಾ ಇಲ್ಲ ಎನ್ನುವ ವಿಷಯ ಹೇಳಿದರು. ಆ ಬಗ್ಗೆ ನಾನು ಹೇಳಬೇಕಾದರೆ ಒಬ್ಬ ವಿದ್ಯಾರ್ಥಿಗೆ ೨೫೦ ರೂಪಾಯಿ ವಿದ್ಯಾರ್ಥಿ ವೇತನ ಕೊಡುತ್ತಾರೆ. ಆ ವಿದ್ಯಾರ್ಥಿ ಏನು ಮಾಡುತ್ತಾನೆ ಎಂದರೆ ಮೊದಲನೇ ದಿವಸ ಅವನು ಟೈಪರೈಟಿಂಗ್ ಇನ್ಸ್ಟಿಟ್ಯೂಟ್‌ಗೆ ಅಡ್ಮಿಷನ್ ಆಗುವಾಗ ಅಪ್ಲಿಕೇಷನ್‌ಗೆ ಸೈನ್ ಮಾಡಿ ಹೋಗುತ್ತಾನೆ. ಅನಂತರ ಅವನು ಪರೀಕ್ಷೆಗೆ ಕೂತುಕೊಳ್ಳುವ ದಿನ ಇನ್ಸ್ಟಿಟ್ಯೂಟ್‌ಗೆ ಬರುತ್ತಾನೆ. ಒಟ್ಟಿನಲ್ಲಿ ಅವನ ಉದ್ದೇಶ ಏನಾಯಿತು ಏಂದರೆ ಈ ೨೫೦ ರೂಪಾಯಿ ಸ್ಕಾಲರ್‌ಷಿಪ್ ತೆಗೆದು ಕೊಳ್ಳುವುದಕ್ಕೆ ಟೈಪರೈಟಿಂಗ್ ಇನ್ಸ್ಟಿಟ್ಯೂಟಿಗೆ ಬರುತ್ತಾನೆಯೇ ಹೊರತು ಅವನು ಟೈಪರೈಟಿಂಗ್ ಕಲಿತುಕೊಂಡು ವಿದ್ಯಾವಂತನಾಗಬೇಕು ಎನ್ನುವ ದೃಷ್ಟಿಯಿಂದ ಬರುತ್ತಾ ಇಲ್ಲ. ಹರಿಜನರು ಉದ್ಧಾರವಾಗಬೇಕಾದರೆ ಅವರು ಬೇರೆಯವರನ್ನು ದೂಷಣೆ ಮಾಡಿದರೆ ಆಗುವುದಿಲ್ಲ ಅವರು ತಮ್ಮ ಕಾಲಮೇಲೆ ತಾವು ನಿಂತುಕೊಂಡು ಎಲ್ಲರಿಗಿಂ ತಲೂ ನಾವು ಮೇಲಾಗಿ ಇರಬೇಕು ಅನ್ನುವ ಸ್ವಭಾವ ಅವರಲ್ಲೇ ಬರಬೇಕು, ಈ ರೀತಿ ಯಾಗಿ ಈ ಒಂದು ವಾತಾವರಣ ಬದಲಾವಣೆಯಾಗಬೇಕು. ಅವರು ಕುಡಿಯುವುದು ಹೋಗಬೇಕು, ಅವರು ಬಟ್ಟೆ ಬರೆಗಳನ್ನು ಸ್ವಚ್ಛವಾಗಿ ಉಡಬೇಕು. ಯಾವ ಸವರ್ಣೀ ಯರು ಇವರನ್ನು ಅಸ್ಪೃಶ್ಯರು ಎಂದು ಕರೆಯುತ್ತಾರೋ ಅವರನ್ನು ಬಯಲಿಗೆ ಎಳೆಯು ವಂಥ ಒಂದು ಶಕ್ತಿ ಇವರಿಗೆ ಬರಬೇಕು. ಈಗ ನಮ್ಮ ಮನೆ ವಿಷಯದಲ್ಲಿ ಹೇಳುವು ದಾದರೆ ನಾನು ಹರಿಜನರು ಗಿರಿಜನರು ಎಂದು ನೋಡುವುದಿಲ್ಲ. ಅವರು ಯಾರೇ ಇರಲಿ. ಅನೇಕರು ನಮ್ಮ ಮನೆಗೆ ನೇರವಾಗಿ ಬರುತ್ತಾರೆ, ಬಂದು ತಮ್ಮ ಕೆಲಸ ಮಾಡಿಸಿಕೊಂಡು ಹೋಗುತ್ತಾರೆ. ಆದುದರಿಂದ ತಮ್ಮಲ್ಲಿ ನಾನು ವಿನಯಪೂರ್ವಕ ವಾಗಿ ಕೇಳುವುದು ಏನೆಂದರೆ ಈಗ ಅನೇಕ ಹರಿಜನ ಲೀಡರ್ಸ್ ಏನು ಇದ್ದಾರೋ ಅವರು ತಮ್ಮ ಸ್ಥಾನವನ್ನು ಸ್ವಾರ್ಥಕ್ಕೆ ಬಳಸಿಕೊಳ್ಳುವ ಬದಲು ತಮ್ಮ ಜನಾಂಗದ ವರ ಒಂದು ಅಭಿವೃದ್ಧಿಗೆ ಕಷ್ಟಪಟ್ಟು ಕೆಲಸ ಮಾಡಿದರೆ ಮುಂದೆ ಬರತಕ್ಕಂತ ಹರಿಜನ ಮಕ್ಕಳಿಗೆ ಹೆಚ್ಚು ಅನುಕೂಲವಾಗುತ್ತದೆ. ಉದಾಹರಣೆಗೆ ಹೇಳುವುದಾದರೆ ಹಿಂದೆ ಶ್ರೀಮಾನ್ ಸಿದ್ದಯ್ಯನವರು ಇದ್ದರು. ಈಗ ಅವರು ತೀರಿ ಹೋಗಿದ್ದಾರೆ. ಅವರು ಇವರ ಏಳಿಗೆಗಾಗಿ ತುಂಬಾ ಶ್ರಮಪಟ್ಟು ದುಡಿದರು. ಅಲ್ಲದೆ ಹಿಂದೆ ಗೋಪಾಲಸ್ವಾಮಿ ಅಯ್ಯರರವರು ಒಂದು ಹಾಸ್ಟೆಲ್ ನಡೆಸಿಕೊಂಡು ಹೋಗ್ತಾ ಇದ್ದರು. ಅವರು ತಮ್ಮ ಹಾಸ್ಟಲ್‌ಗೆ ಹರಿಜನ ಹುಡುಗರನ್ನು ಮನೆ ಮನೆಗೆ ಹೋಗಿ ಕರೆದು ಕೊಂಡು ಬಂದು ಆ ವಿದ್ಯಾರ್ಥಿಗೆ ಏನು ಬೇಕೋ ಆ ಸೌಕರ್ಯಗಳನ್ನು ಮಾಡಿ ಕೊಡುತ್ತಿದ್ದರು. ಈಗ ಅನೇಕರು ತಮ್ಮ ಸ್ವಾರ್ಥಗಳನ್ನು ಬೆಳೆಸಿಕೊಳ್ಳುತ್ತಿದ್ದಾರೆ. ಆದುದರಿಂದ ನಾನು ಹೇಳುವುದು ಏನಂದರೆ ಆ ಸ್ವಾರ್ಥಗಳನ್ನು ಬಿಟ್ಟು ಬನ್ನಿ, ನಿಮ್ಮ

ಜೊತೆಗೆ ನಾನೂ ಕೂಡ ಪಾಲಂಟರಿಯಾಗಿ ಬರುತ್ತೇನೆ. ಬೇರೆ ಮಾತನ್ನೇ ಆಡುವುದಿಲ್ಲ. ಹಿಂದೆ ಗೋಪಾಲಸ್ವಾಮಿ ಅಯ್ಯಂಗಾರ್‌ರವರು ಮಾಡಿದ ಹಾಗೆ ಒಂದು ಕಾರ್ಯಕ್ರಮವನ್ನು ರೂಪಿಸಿಕೊಂಡು ಕಾರ್ಯಗತ ಮಾಡಿದರೆ ಮಾತ್ರ ಈ ಹರಿಜನರ ಒಂದು ಸಮಸ್ಯೆ ಬಗೆ ಹರಿಯುತ್ತದೇ ಹೊರತು ಅದು ಬಿಟ್ಟು ೫–೧೦ ವರ್ಷದ ಒಂದು ಯೋಜನೆ ಹಾಕಿಕೊಂಡು ಹೋದರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ ಮತ್ತು ಅವರಿಗೆ ಹರಿಜನರ ಕಾಲೋನಿ ಕಟ್ಟಿಕೊಡುವ ಬದಲಾಗಿ ಎಲ್ಲರೊಡನೆ ಬೆರೆಯುವುದಕ್ಕೆ ಏರ್ಪಾಡು ಮಾಡಿಕೊಡಿ ಎಂದು ಹೇಳುತ್ತೇನೆ. ನಮ್ಮ ಬೆಂಬಲವನ್ನೂ ಸಹ ಕೊಡುವುದಕ್ಕೆ ನಾವು ಯಾವತ್ತೂ ಕೂಡ ಸಿದ್ಧವಾಗಿದ್ದೇವೆ. ಹರಿಜನರು ಕಷ್ಟಪಡುತ್ತಾರೆ, ಅವರು ಹೆಚ್ಚು ಬಡವರಾಗಿದ್ದಾರೆ; ಅನೇಕರು ಕೆಳಮಟ್ಟದಲ್ಲಿದ್ದಾರೆ. ಅವರನ್ನು ಎತ್ತಬೇಕಾದರೆ ಯಾವ ಒಂದು ಸರಿಯಾದ ನಿಲುವು ಇಲ್ಲ. ಈ ಬಗ್ಗೆ ಕಾರ್ಪೊರೇಷನ್ ಮಾಡುವುದರಿಂದ ಅವರ ಒಂದು ನೀತಿಯ ಮಟ್ಟ ಸರಿ ಹೋಗುತ್ತದೆ ಎನ್ನುವುದಾದರೆ ಅದಕ್ಕೂ ಕೂಡ ನಮ್ಮ ಪೂರ್ಣ ಬೆಂಬಲ ಇದೆ. ಆದರೆ ಮುಖ್ಯವಾಗಿ ಹೇಳಬೇಕಾದರೆ ಶ್ರೀಮಾನ ಕಾಗೋಡು ತಿಮ್ಮಪ್ಪನವರು ಹೇಳಿದ ಹಾಗೆ ಮೊದಲು ಅವರನ್ನು ವಿದ್ಯಾವಂತರನ್ನಾಗಿ ಮಾಡಿ. ಇನ್ನು ೫೫ ವರ್ಷದ ಸ್ಕೀಮನ್ನು ಹಾಕಿಕೊಂಡು ಅವರಲ್ಲಿ ೬೦ ಪರ್ಸೆಂಟ್ ಅಷ್ಟು ವಿದ್ಯಾವಂತರನ್ನಾಗಿ ಮಾಡುವ ಒಂದು ಸ್ಕೀಮನ್ನು ತೆಗೆದುಕೊಂಡು ಬನ್ನಿ. ಆವಾಗ ಹರಿಜನ ಎನ್ನುವ ಪ್ರಶ್ನೆ ಬಂದಾಗ ನಾನು ಕೇಳುತ್ತೇನೆ. ಆದುದರಿಂದ ಈ ಒಂದು ನಿಲುವನ್ನು ಕಾರ್ಯಗತ ಮಾಡುವುದರ ಬಗ್ಗೆ ಮುಂದೆ ಬರತಕ್ಕಂಥ ಹರಿಜನ ಮಕ್ಕಳ ಬಗ್ಗೆ ಒಂದು ಯೋಚನೆ ಮಾಡಿ.

(Deputy Speaker in the Chair)

ನೀವು ಯಾವ ಮೆಟ್ಟಿಲಿನ ಸಹಾಯದಿಂದ ಏಣಿಯನ್ನು ಹತ್ತಿಕೊಂಡು ಮುಂದಕ್ಕೆ ಬಂದರೋ ಆ ಮೆಟ್ಟಿಲನ್ನು ಒದೆಯಬೇಡಿ. ಅದನ್ನು ನೆನೆಸಿಕೊಂಡು ನಿವಾಗಿಯೇ ವಾಲಂಟರಿಯಾಗಿ ಮುಂದೆ ಬಂದು ನಿಮ್ಮ ಜನಾಂಗದ ಒಂದು ನೀತಿಯ ಮಟ್ಟವನ್ನು ಎತ್ತರಿಸುವ ಕಡೆ ಬನ್ನಿ. ನಿಮ್ಮ ಜೊತೆಗೆ ನಾವು ಕೂಡ ಬರುತ್ತೇವೆ ಎಂದು ಇಷ್ಟು ಮಾತ್ರ ಹೇಳುತ್ತೇನೆ.

†ಶ್ರೀ ಕೆ ಪ್ರಭಾಕರ್.— (ವಾರ್ತೂರು) ಮಾನ್ಯ ಅಧ್ಯಕ್ಷರೇ, ಈ ದಿವಸ ಒಂದು ವಿತ್ತೀಯ ಸಂಸ್ಥೆ ಎಂದು ಹೇಳಿದರೆ ಫೈನಾನ್ಸ್ ಕಾರ್ಪೊರೇಶನ್. ಇದರ ಮುಖಾಂತರ ಏನೇನು ಸೌಲಭ್ಯಗಳು ದೊರೆಯುತ್ತವೆ ಅವುಗಳನ್ನು ಹರಿಜನರ ಮತ್ತು ಗಿರಿಜನರ ಪುರೋಭಿವೃದ್ಧಿಗಾಗಿ ಶೀಘ್ರವಾಗಿ ಬಳಸಬೇಕು ಎನ್ನುವ ಉದ್ದೇಶದಿಂದ ಈ ಠರಾವನ್ನು ಸಭೆಯ ಮುಂದೆ ಮಂಡಿಸಿ ಶ್ರೀ ಜಯಪ್ರಕಾಶ್ ನಾರಾಯಣ್ ರವರು ನಮಗೆಲ್ಲರಿಗೂ ಇಲ್ಲಿ ಮಾತನಾಡುವ ಅವಕಾಶ ತಂದು ಕೊಟ್ಟಿದ್ದಾರೆ. ಇದುವರೆಗೂ ಮಾನ್ಯ ಸದಸ್ಯರುಗಳು ಮಾತನಾಡಿದ್ದನ್ನು ನೋಡಿದರೆ ನಿಜವಾಗಿಯೂ

ಒಂದು ತರಹ ನೋವು ಉಂಟಾಗುತ್ತದೆ. ಏಕಂದರೆ ಮಾನ್ಯ ಗೆಳೆಯರಾದ ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಮಾತನಾಡುತ್ತ ಹರಿಜನರಿಗೆ ಮತ್ತು ಗಿರಿಜನರಿಗೆ ಏನೇನು ಸೌಲಭ್ಯಗಳನ್ನು ಮಾಡಬೇಕು ಮತ್ತು ಅವರ ಪುರೋಭಿವೃದ್ಧಿಗೆ ಹಾಗೂ ಅವರನ್ನು ಮುಂದೆ ತರಲು ಪ್ರಯತ್ನ ಮಾಡಬೇಕು. ಅದನ್ನು ಮಾಡುವಾಗ ಅವರಲ್ಲಿ ಯಾರು ಮುಂದುವರಿದಿದ್ದಾರೆ ಅವರು ಅವರ ಪುರೋಭಿವೃದ್ಧಿಗೆ ಆಸಕ್ತಿ ತೋರಿಸುವುದಿಲ್ಲ ಎಂದು ಹೇಳಿದರು. ಆ ರೀತಿ ಅವರು ಹೇಳುವುದರಲ್ಲಿ ಏನೂ ಅರ್ಥವಿಲ್ಲ. ಎಲ್ಲ ಜನರಿಗೂ ಸಮಾಜದಲ್ಲಿ ಸರಿಯಾದ ಅವಕಾಶ ದೊರೆಯಬೇಕು ಮತ್ತು ವಿದ್ಯಾವಂತರಾಗಬೇಕು. ಆದರೆ ಅದಕ್ಕೆ ಸರಿಯಾದ ಅವಕಾಶ ಕಲ್ಪಿಸುತ್ತಿಲ್ಲ. ಈಗಿನ ನಮ್ಮ ಸಮಾಜದಲ್ಲಿ ಒಬ್ಬನನ್ನು ಮತ್ತೊಬ್ಬರು ತುಳಿದು ಶೋಷಣೆಮಾಡಿ, ಅವರ ಶೋಷಣೆಯಿಂದ ಜೀವನ ಮಾಡುವುದು ಅನೂಚಾನವಾಗಿ ಬೆಳೆದುಕೊಂಡು ಬಂದಿದೆ. ಹಿಂದುಳಿದವರಿಂದ ತಮ್ಮ ಕೆಲಸಕಾರ್ಯಗಳನ್ನು ಫೋರ್ಸ್‌ಡ್ ಲೇಬರ್‌ನಿಂದ ಮಾಡಿಸಿಕೊಂಡು ತಮ್ಮ ಸುಖವನ್ನು ಪಡೆಯುತ್ತಾರೆ. ಯಾವ ಜನರು ಹಿಂದುಳಿದಿದ್ದಾರೆ ಅವರು ಇದನ್ನು ಮಾಡಬೇಕಾದ್ದು ಅವರ ಕರ್ಮ ಎಂದು ಹೇಳಿಕೊಂಡು ಅವರನ್ನು ಶೋಷಣೆ ಮಾಡುತ್ತಾ ಬಂದಿರತಕ್ಕದ್ದು ಏನಿದೆ ಇದು ಶೋಷಣೆಯ ಪರಮಾವಧಿ. ಯಾರು ಅವರ ಶೋಷಣೆಯಿಂದ ಜೀವನ ಮಾಡತಕ್ಕಂಥ ಜನರು ಇದ್ದಾರೆ ಅವರು ಅಗ್ರಿಕಲ್ಚರ್ ಲೇಬರರ್ಸ್ ಅವರಿಗೆ ಮಿನಿಮಮ್ ವೇಜಸ್ ಆಕ್ಟ್ ಮಾಡಿ ಅದರ ಪ್ರಕಾರ ಅನುಕೂಲ ಮಾಡಿಕೊಡಿ ಎಂಬುದನ್ನು ಹೇಳುವ ಪ್ಲಾನಿಂಗ್ ಕಮಿಷನ್‌ನವರು ಗೌರೀಶಂಕರದಲ್ಲಿ ಕುಳಿತುಕೊಂಡು ಹೇಳತಕ್ಕಂಥ ಜನ ಯಾರು ಇದ್ದಾರೆ ಅವರಿಗೆ ಅವರ ಕಷ್ಟ ಗೊತ್ತಿಲ್ಲ. ಯಾವ ಜನರು ಕಷ್ಟದಲ್ಲಿ ಸಿಕ್ಕಿದ್ದಾರೋ ಅಂಥ ಕಷ್ಟದಲ್ಲಿ ಸಿಕ್ಕಿರುವವರನ್ನು ವಲ್ನರಬಲ್ ಜನರು ಎಂದು ಹೇಳುತ್ತಾರೆ. ಅಂತಹ ಜನರಿಗೆ ಬಿಟ್ಟಿಯಾಗಿ ಯಾವತ್ತು ಎಷ್ಟು ದವಸಧಾನ್ಯಗಳನ್ನು ಕೊಟ್ಟಿದ್ದೀರಿ ? ಕೊಟ್ಟಿರುವುದಕ್ಕೆ ಸರ್ಕಾರಕ್ಕೆ ಏನಾದರೂ ಹೆಸರು ಬಂತೆ ಎಂದು ಕೇಳಿದರೆ ಅದಕ್ಕೆ ಉತ್ತರ ಸೊನ್ನೆ ಎಂದು ಹೇಳಬಹುದು. ಕಾರಣ ಒಂದು ಸಲ ಸ್ಕೇರ್ಸಿಟಿ ಎಂದು ಹೇಳುತ್ತಾರೆ, ಮತ್ತೆ ಒಂದು ಸಾರಿ ಬರಗಾಲ ಎಂದು ಹೇಳುತ್ತಾರೆ. ಹಣಕ್ಕೆ ಸಂಬಂಧಪಟ್ಟ ಮುಗ್ಗಟ್ಟುಗಳು ಬರುವಂಥಾದ್ದು ಸಹಜವೇ ಸರಿ. ಆದರೆ ಕಾಮುಗಾರಿಗಳು ಮತ್ತು ಕೆಲಸಕಾರ್ಯಗಳು ಮೂಲಭೂತವಾಗಿ ಏನೇನು ಆಗಬೇಕೋ ಅವುಗಳನ್ನು ಮೊಟಕು ಮಾಡದಂತೆ ಕೆಲಸ ಮಾಡಿಕೊಂಡು ಹೋಗುವುದೇ ನಮ್ಮ ಬುದ್ಧಿವಂತಿಕೆ ಎಂದು ಮಾನ್ಯ ಹಣಕಾಸಿನ ಮಂತ್ರಿಗಳಾದ ಶ್ರೀ ಘೋರ್ಪಡೆಯವರು ಹೇಳಿದರು. ಎಲ್ಲೆಲ್ಲಿ ಹಣವನ್ನು ಖೋತಾ ಮಾಡಿದರೂ ಚಿಂತೆಯಿಲ್ಲ .ಆದರೆ ಸೋಷಿಯಲ್ ವೇಲ್‌ಫೇರ್ ಡಿಪಾರ್ಟ್‌ಮೆಂಟಿಗೆ ಹಣವನ್ನು ಖೋತಾ ಮಾಡದಂತೆ ನೋಡಿಕೊಳ್ಳಬೇಕೆಂದು ಕೇಳಿದ್ದೇನೆ. ಆ ರೀತಿ ಸೋಷಿಯಲ್ ವೇಲ್‌ಫೇರ್ ಡಿಪಾರ್ಟ್‌ಮೆಂಟಿಗೆ ಖೋತಾ ಮಾಡಿ ಸಮಾಜ ಕಲ್ಯಾಣ ಇಲಾಖೆ ಮಂತ್ರಿಗಳ ಕುತ್ತಿಗೆ ಹಿಡಿದುಕೊಳ್ಳಬೇಡಿ ಎಂದು ಹೇಳಿದೆ. ೫೫ ವರ್ಷಗಳಲ್ಲಿ ಯಾವ ರೀತಿಯಲ್ಲೂ

ನಮಗೆ ಒಳ್ಳೆಯದು ಆಗಿಲ್ಲ. ಆ ರೀತಿ ನಾವು ಸರಿಯಾಗಿ ನೋಡಿದರೆ ಹಿಂದಿನ ೫೦ ವರ್ಷಗಳಲ್ಲಿ ಕೂಡಾ ಆಗಿಲ್ಲವೆಂದು ಹೇಳಬಹುದು. ನಮಗೆ ಸ್ವರಾಜ್ಯ ಬಂದ ಮೇಲೆ ಅದು ಹೊಸ ಹುರುಪನ್ನು ನಮಗೆ ತಂದುಕೊಟ್ಟಿದೆ ಎನ್ನುವ ಮಾತನ್ನು ನಾವು ಹೇಳಿಕೊಂಡು ಹೋಗುತ್ತಿದ್ದೇವೆ. ನಿಜವಾಗಿ ನಡೆದಿರುವುದನ್ನು ನೋಡಿದರೆ ೫೦ ವರ್ಷಗಳಿಂದಲ್ಲೂ ಸರಿಯಾಗಿ ಆಗಬೇಕಾದ ಕೆಲಸಕಾರ್ಯಗಳು ಏನೂ ಆಗಿಲ್ಲ ವೆಂದು ಹೇಳಬೇಕಾಗುತ್ತದೆ. ನಾವು ಇಲ್ಲಿಯವರಿಗೆ ಏನು ಮಾಡಿದ್ದೇವೆಂದರೆ ಬೆಟ್ಟನನ್ನು ಅಗೆದು ಇಲಿ ಹಿಡಿದ ಹಾಗೆ ೫ ಪೈಸೆ ಇಲಿಯನ್ನು ಹಿಡಿಯುವುದಕ್ಕೆ ಡೈನಾಮೇಟ್ ಇಡಲು ೫ ಸಾವಿರ ರೂಪಾಯಿ ಎಸ್ಟಿಮೇಟ್ ಮಾಡಿ ಪ್ರಯತ್ನ ಪಟ್ಟಹಾಗೆ ಮಾಡುತ್ತಿದ್ದೇವೆಂದು ಹೇಳಿದರೆ ತಪ್ಪಾಗಲಾರದು. ಇದರಿಂದ ನಿಜವಾಗಿ ನಾವು ಪಡೆಯಬೇಕಾದ ಫಲ ನಮಗೆ ದೊರೆಯುವುದಿಲ್ಲ. ಈ ವಿಚಾರವನ್ನು ಹೇಳು ವಾಗ ಹರಿಜನರ ಮೇಲೆ ಪ್ರೀತಿಯಿಂದ ಮಾತನಾಡುತ್ತಿದ್ದೇನೆಂದು ಯಾರೂ ಭಾವಿಸ ಬಾರದು. ನಾವು ಒಳ್ಳೆಯ ಕಾಲದಲ್ಲಿದ್ದೇವೆಂದು ಹೇಳಿದರೂ ಇಷ್ಟು ವರ್ಷಗಳಲ್ಲಿ ಎಷ್ಟು ಉದ್ಧಾರವಾಗಬೇಕಾಗಿತ್ತೊ ಅಷ್ಟು ಉದ್ಧಾರವಾಗಿಲ್ಲವೆಂದು ಹೇಳಬೇಕಾಗು ತ್ತದೆ. ಸರ್ವಧರ್ಮ ಸಮನ್ವಯಾಚಾರ್ಯರೆಂದು ಹೇಳಿಕೊಳ್ಳುವವರು ಇದಕ್ಕೆ ಗಮನ ಕೊಡಬೇಕು. ಹೆಸರಿಗೆ ಮಾತ್ರ ಹರಿಜನರ ಉದ್ಧಾರ ಎಂದು ಆಗುತ್ತಿದೆಯೇ ವಿನಃ ನಿಜವಾಗಿ ಅದು ಕಾರ್ಯತಃ ಆಗುತ್ತಿಲ್ಲವೆಂದು ಹೇಳಬೇಕಾಗುತ್ತದೆ. ಆದ್ದರಿಂದ ಈ ಫೈನಾನ್ಸ್ ಕಾರ್ಪೊರೇಷನ್ ಆಗಬೇಕಾದ್ದು ಅಗತ್ಯ ಎಂದು ಹೇಳುತ್ತೇನೆ. ಎಷ್ಟೋ ಒಳ್ಳೆಯ ಶಕ್ತಿಗಳು ಇವರನ್ನು ಮುಂದಕ್ಕೆ ತರಬೇಕೆಂದು ಪ್ರಯತ್ನ ಮಾಡಿದರೂ ಅದನ್ನು ಮಾಡಲು ಕೆಲವು ದುಷ್ಟಶಕ್ತಿಗಳು ಬಿಡುವುದಿಲ್ಲ. ಈ ಇಲಾಖೆ ಯನ್ನೇ ಒಂದು ಕಾರ್ಪೊರೇಷನ್ ಮಾಡಬೇಕೋ ಅಥವಾ ಇದಕ್ಕೇ ಒಂದು ಸ್ಪೆಷಲೈಸ್ಡ್ ಸ್ಕೀಮ್ ಮಾಡಬೇಕೋ ಗೊತ್ತಿಲ್ಲ. ಇಲಾಖೆಯವರು ಅವರಿಗೆ ಕೊಡತಕ್ಕ ಸ್ಕಾಲರ್‌ಷಿಪ್ ಸಕಾಲಕ್ಕೆ ತಲುಪಲಿ ಏಂದು ಮಾಡುತ್ತಾರೋ ಅಥವಾ ಹುಡುಗರು ಬೇಸಿಗೆ ರಜಾಕ್ಕೆ ಊರಿಗೆ ಹೋಗುವ ಕಾಲಕ್ಕೆ ಅನುಕೂಲವಾಗಲಿ ಎಂದು ಕೊಡುತಾರೋ ಏತಕ್ಕಾಗಿ ಕೊಡುತಾರೆ ಎಂದು ಕೇಳಬೇಕಾಗಿದೆ. ಬಹುಶಃ ಇಂದಿರಾಗಾಂಧಿಯವರಿಗೆ ಹರಿಜನ ಖಾತೆ ಕೊಟ್ಟು ಈ ಕೆಲಸಗಳನ್ನು ಮಾಡಬೇಕೆಂದು ಹೇಳಿ ಅವರು ಪ್ರಯತ್ನ ಪಟ್ಟರೆ ಆಗ ಕೂಡ ಇವರ ಪುರೋಭಿವೃದ್ಧಿ ಆಗುತ್ತದೋ ಇಲ್ಲವೋ ಗೊತ್ತಿಲ್ಲ. ಎಷ್ಟೋ ಶಕ್ತಿಗಳು ಇವರನ್ನು ಹಿಂದಕ್ಕೆ ತುಳಿಯೋಣ ಎಂಬ ದೃಷ್ಟಿಯಿಂದ ಕೆಲಸಮಾಡುತ್ತವೆ. ಆದ್ದರಿಂದ ಮಂತ್ರ, ತಂತ್ರ ಹಾಕಿಕೊಂಡು ಹೋದರೂ ಕೂಡ ಇದು ನಡೆಯುವದಿಲ್ಲ. ಸರ್ಕಾರ ನಡೆಸುವವರು ಅದರಲ್ಲಿ ಕೆಲಸ ಮಾಡತಕ್ಕವರು ಉದ್ಧಾರವಾಗುತ್ತಿದ್ದಾರೆ. ಅವರಿಗೆ ಸರ್ವೀಸ್ ಕಂಡಿಷನ್ಸ್‌ಗಳು ಇವೆ. ಸಂಬಳ ಖೋತಾ ಆದರೆ ಸ್ಟೈಕ್ ಮಾಡುತ್ತೇವೆ, ಕೋರ್ಟಿಗೆ ಹೋಗು ತ್ತೇವೆ ಎಂದು ಹೇಳಬಹುದು. ಅವರು ಮಾಡತಕ್ಕ ಕೆಲಸಕಾರ್ಯಗಳು ಸರಿಯಲ್ಲ ಎಂದು ಹೇಳಬಹುದು. ಆದ್ದರಿಂದ ಮಾನ್ಯ ಸ್ನೇಹಿತರು ಸೂಚನೆ ಮಾಡಿರುವಂತೆ

ಈ ಕಾರ್ಪೊರೇಷನ್ ಮಾಡುವುದು ಒಳ್ಳೆಯದು ಎಂದು ಹೇಳುತ್ತೇನೆ. ಅವರ ವಿದ್ಯಾಭ್ಯಾಸಕ್ಕೆ ಕೊಡತಕ್ಕ ಸಹಾಯ ಆರ್ಥಿಕವಾಗಿ ಯಾರು ಹಿಂದುಳಿದಿದ್ದಾರೆ ಅವರಿಗೆ ಮುಟ್ಟಿದಾಗ, ನಿಜವಾಗಿ ಮಾಡಿದ ಸಹಾಯ ಆಗುತ್ತದೆ ವಿನಃ ಅವರ ಕೈಗೆ ಅದು ಸೇರದೆ ಹೋದರೆ ಅದು ನಿಜವಾಗಿಯೂ ಸಹಾಯ ಕೊಟ್ಟಂತೆ ಆಗುವುದಿಲ್ಲ. ಉದಾಹರಣೆ ಹೇಳುವುದಾದರೆ ಎಷ್ಟೋ ಟೈಲರಿಂಗ್ ಸೆಂಟರ್ಸ್ ಮಾಡಿರುತ್ತೀರಿ. ಅದರಲ್ಲಿ ಎಷ್ಟು ಜನರಿಗೆ ಟ್ರೈನಿಂಗ್ ಕೊಟ್ಟಿದ್ದೀರಿ ? ಎಷ್ಟು ಟೈಲರಿಂಗ್ ಮಷಿನ್ ಗಳನ್ನು ಕೊಟ್ಟಿದ್ದೀರಿ, ಇದನ್ನೆಲ್ಲಾ ನೋಡಿದರೆ ನಿಜವಾಗಿಯೂ ಕಣ್ಣೀರು ಬರುತ್ತದೆ. ಈ ಸ್ಕೀಮನ್ನು ಸ್ವಾರ್ಥಕ್ಕೋಸ್ಕರ ಇಟ್ಟುಕೊಂಡಿದ್ದಾರೆ. ಸಾಮಾನ್ಯವಾಗಿ ಇದರಿಂದ ಎಷ್ಟು ಜನ ಹರಿಜನ ಮಕ್ಕಳು ಜೀವನ ಮಾಡುತ್ತಾರೆ ಎಂಬುದನ್ನು ನೋಡಿದರೆ ಗೊತ್ತಾಗುತ್ತದೆ. ಅದರ ಲಾಭವನ್ನೆಲ್ಲಾ ಆಫೀಸರ್ಸ್‌ಗಳೇ ಉಪಯೋಗಿಸಿಕೊಳ್ಳುತ್ತಿದ್ದಾರೆ. ಆದ್ದರಿಂದ ಅಂಥವರನ್ನು ಹಿಡಿದು ಶಿಕ್ಷೆ ಕೊಡಿ ಎಂದು ಹೇಳುತ್ತೇನೆ. Escapism, lack of responsibility and dereliction of duty. The Social Wel-fare Department is more a department of appointments of non-Harijans than Harijans.

MR. DEPUTY SPEAKER.— I like all that you speak. But the question is the constitution of a Corporation. Whether it is necessary to have a Corporation and if it is constituted how it would be helpful is the question. Please confine yourself to it. The scope is extremely limited.

11-30 A. M.

ಶ್ರೀ. ಕೆ ಪ್ರಭಾಕರ — ಆದ್ದರಿಂದ ಈಫೈನಾನ್ಸ್ ಕಾರ್ಪೋರೇಷನ ಎನ್ನು ತಕ್ಕದ್ದು ಅತ್ಯಾವಶ್ಯಕ. ಎಷ್ಟೋ ಪ್ರಯೋಗಗಳನ್ನು ಸರ್ಕಾರದವರು ಮಾಡಿದ್ದಾರೆ. ಅದರಲ್ಲಿ ಇದು ಒಂದು ಎಂದು ನಾವು ತಿಳಿದುಕೊಳ್ಳಬೇಕು. ಇದನ್ನು ಸಮಗ್ರವಾಗಿ ವಿಚಾರ ಮಾಡಿ, ಎಷ್ಟು ದುಡ್ಡು ಆದರೂ ಇದಕ್ಕೆ ಖರ್ಚುಮಾಡಿ, ನಾವು ಸಹಕಾರ ಕೊಡುತ್ತೇವೆ ಎನ್ನುವ ಭಾವನೆ ಎಲ್ಲರ ಮನಸ್ಸಿನಲ್ಲಿದೆ. ಇದಕ್ಕೆ ಒಂದು ಯೋಜನೆ ಮಾಡಿ ಹಾಕಿ ನಾಲ್ಕೈದು ವರ್ಷಗಳಲ್ಲಿ ಇದನ್ನು ಕಾರ್ಯಗತ ಮಾಡಬೇಕು. ಇದನ್ನು ಬೇಡ ಎಂದು ಯಾರೂ ಹೇಳುವುದಿಲ್ಲ. ಮಾನ್ಯ ಹಣಕಾಸಿನ ಸಚಿವರು ಬಹಳ ಬುದ್ಧಿವಂತರು, ಅವರು ಇದಕ್ಕೆ ಐದು ಕೋಟಿ ರೂಪಾಯಿಗಳನ್ನು ಪ್ರಾಯೋಗಿಕವಾಗಿ ಮಾಡುತ್ತೇನೆ ಎನ್ನುವ ಅಷ್ಯೂರೆನ್ಸ್ ಕೊಡುತ್ತಾರೆನ್ನುವ ಭಾವನೆ ನನಗೆ ಇದೆ. ಹೀಗೆ ಇದು ನಾವು ಹರಿಜನರ ಅಭಿವೃದ್ಧಿಗೆ ಒಂದು ಕಾರ್ಪೋರೇಷನ ಮಾಡಿ ಎಲ್ಲಾ ದುಡ್ಡನ್ನು ಕ್ರೋಢೀಕರಿಸಿ ಅವರ ಆರ್ಥಿಕ ಪ್ರಗತಿಗೆ ಸಂಬಂಧಪಟ್ಟ ವಿಚಾರಗಳನ್ನು ಕಾರ್ಪೋರೇಷನ ಮುಖಾಂತರ ಮಾಡಿ ಮೈಸೂರಿಗೆ ಒಳ್ಳೆಯ ಹೆಸರು ಬರುವಂತೆ ಆಗಬೇಕು ಮತ್ತು ಇದರಿಂದ ಎಲ್ಲರಿಗೂ ಉಪಯೋಗವಾಗಬೇಕು ಎನ್ನುವಂತೆ ಬಹುಬೇಗ ಇದನ್ನು ಮಾಡ

ಬೇಕು. ಒಂದೇ ತಿಂಗಳಲ್ಲಿ ಇದನ್ನು ಮಾಡಿ ಕಾರ್ಯರೂಪಕ್ಕೆ ತಂದುಕೊಡಬೇಕು ಎಂದು ನಾನು ಹೇಳುತ್ತೀನೆ.

ಸಪ್ಲಿಮೆಂಟರಿ ಡಿವ್ಯಾಂಡ್ಸ್ ಬಿಟ್ಟು ಅಡಿಷನಲ್ ಗ್ರಾಂಟ್ಸ್ ತೆಗೆದುಕೊಳ್ಳುತ್ತೀರಿ. ಆದರೆ ಸೋಷಿಯಲ್ ವೆಲ್‌ಫೇರ್ ಡಿಪಾರ್ಟಮೆಂಟಗೆ ಅದರಲ್ಲಿ ಹಣವನ್ನು ಪ್ರೊವೈಡ ಮಾಡಿಲ್ಲ. ಐದು ಲಕ್ಷ ರೂಪಾಯಿಗಳನ್ನು ಇದಕ್ಕೆ ಪ್ರೊವೈಡ ಮಾಡಿ ಬೇಗ ಈ ಕಾಸ್ಟೋರೇಷನ ಅನ್ನು ಜಾರಿಗೆ ತರಬೇಕು. ಚಿಕ್ಕದ್ದಾಗಲಿ, ದೊಡ್ಡದಾಗಲೀ ಮೂಲ ಭೂತವಾಗಿ ಸರ್ಕಾರಕ್ಕೆ ಹೆಸರು ಬರುವ ರೀತಿಯಲ್ಲಿ ಇದನ್ನು ಮಾಡಬೇಕು ಎಂದು ನಾನು ಸಲಹೆ ಕೊಡುತ್ತೀನೆ. ಇಷ್ಟು ಹೇಳಿ ಅಧ್ಯಕ್ಷರು ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೀನೆ.

ಶ್ರೀ ಎಂ. ಎಸ್. ಕೃಷ್ಣನ್.—(ಮಲ್ಲೇಶ್ವರ) ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಜಯಪ್ರಕಾಶ್ ನಾರಾಯಣ ಅವರು ತಂದಿರುವಂಥ ನಿರ್ಣಯ ನನ್ನ ಅಭಿಪ್ರಾಯದಲ್ಲಿ ಅತಿ ಮುಖ್ಯವಾದ ನಿರ್ಣಯ. ಈ ಮನೆಯಲ್ಲಿ ಅನೇಕ ಸಲ ಹರಿಜನ ಮತ್ತು ಗಿರಿ ಜನರ ಬಗ್ಗೆ ಚರ್ಚೆಗಳು ನಡೆದಾಗ, ಬಜೆಟ್ ಮೇಲೆ ನಡೆದಾಗ ನಾನು ಸರಿಯಾದಂಥ ಸ್ಪಷ್ಟವಾದಂಥ ಅಭಿಪ್ರಾಯವನ್ನು ಕೊಟ್ಟಿದ್ದೇನೆ. ಸಾಮಾಜಿಕವಾಗಿ, ಆರ್ಥಿಕವಾಗಿ ಯಾರು ಹಿಂದಕ್ಕೆ ತುಳಿಯಲ್ಪಟ್ಟಿದ್ದಾರೆಯೋ ಅಂಥವರನ್ನು ಯಾವರೀತಿ ಮುಂದೆ ತರ ಬೇಕು ಎನ್ನುವುದರ ಬಗ್ಗೆ ಪರಿಣಾಮಕಾರಿಯಾದ ತೀರ್ಮಾನ ತೆಗೆದುಕೊಳ್ಳುವ ರೀತಿಯಲ್ಲಿ ಸಲಹೆಗಳನ್ನು ಕೊಟ್ಟರೂ ಅದು ಸಾಧ್ಯವಾಗಲಿಲ್ಲ. ಈಗಲಾದರೂ ಸಹ ಈ ನಿರ್ಣಯವನ್ನು ಸರ್ಕಾರದವರು ಒಪ್ಪಿ ಇದನ್ನು ಸಾಧ್ಯ ಮಾಡಿ ಕೊಡಬೇಕು ಎಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೀನೆ. ಮಾನ್ಯ ಜಯಪ್ರಕಾಶನಾರಾಯಣ ಅವರು ಇದನ್ನು ವಾಪಸು ತೆಗೆದುಕೊಳ್ಳಕೂಡದು ಎಂದು ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದರು. ನಾನು ಕೂಡ ಅವರನ್ನು ವಾಪಸು ತೆಗೆದುಕೊಳ್ಳಕೂಡದು ಎಂದು ಕೇಳಿಕೊಳ್ಳಬೇಕಾಗಿದೆ. ಏಕಂದರೆ ನಿರ್ಣಯ ವನ್ನು ತಂದು ವಾಪಸು ತೆಗೆದುಕೊಂಡರೆ ಹೇಳಿದ ಮುಖ್ಯತತ್ವವೆಲ್ಲ ಹೊರಟು ಹೋಗು ತ್ತದೆ. ಮತ್ತೆ ನಿರ್ಣಯದ ಮೇಲೆ ಮಾತನಾಡಿಯೂ ಪ್ರಯೋಜನವಿಲ್ಲ. ಬರೀ ಚರ್ಚೆಯಾಗುತ್ತದೆ. ಈ ನಿರ್ಣಯದ ಮಹತ್ವ ಏನೆಂದರೆ. ನಮ್ಮ ದೇಶದಲ್ಲಿ ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದವರಿಗೆ ನ್ಯಾಯ ದೊರೆಯಬೇಕು, ಯಾರು ಸಮಾಜದಿಂದ ಶೋಷಿಸಲ್ಪಟ್ಟಿದ್ದಾರೆ ಎಂದು ಅನೇಕ ವರ್ಷಗಳಿಂದ ನಾವು ಹೇಳುತ್ತಾ ಬಂದಿದ್ದೇವೆಯೋ ಅವರ ಅಭಿವೃದ್ಧಿ ಇದು ವರೆಗೂ ಆಗಿಲ್ಲ ಎನ್ನುವುದನ್ನು ಸ್ಪಷ್ಟ ವಾಗಿ ಹೇಳಬೇಕಾಗಿದೆ. ಮಾನ್ಯ ಅಂಬೇಡ್ಕರ ಅವರನ್ನು ನಾವು ಮನು ಎಂದು ಕರೆಯುತ್ತೀವೆ. ಅವರು ಘಟನಾವಳಿಯನ್ನು ಮಾಡಿದಾಗ ಒಂದು ಮಾತನ್ನು ಹೇಳಿದ್ದಾರೆ :

"On January 26, 1950, we will have equality in politics and in-equality in social and economic life. We

must remove the construction at the earliest moment or else those who suffer from in-equalities will blow the structure of political democracy which this Assembly has laboriously built up."

ಎಂದು ಹೇಳಿದ್ದಾರೆ. ನನಗಾದರೂ ಅನ್ನಿಸುತ್ತದೆ, ಕಳೆದ ೨೭ ವರ್ಷಗಳಿಂದ ನೋಡಿದರೆ, ಇನ್ ಇಕ್ವಾಲಿಟಿ ಇನ್ ಸೋಷಿಯಲ್ ಅಂಡ್ ಎಕನಾಮಿಕ ಲೈಫ್ ಆ ಇನ್ ಇಕ್ವಾಲಿಟಿ ಇನ್ನೂ ಹೋಗಿಲ್ಲ. ಇದು ಹಾಗೆಯೇ ಉಳಿದಿದೆ. ಯಾವ ಯಾವ ರೀತಿಯಿಂದ ಉಳಿದಿದೆ ಎನ್ನುವುದಕ್ಕೆ ನಾನುಬೇಕಾದಷ್ಟು ನಿದರ್ಶನಗಳನ್ನು ಕೊಡಬಲ್ಲೆ. ಅದು ತಮಗೂ ಗೊತ್ತಿದೆ. ಇವತ್ತಿಗೂ ಕೆಲವು ಕಡೆಗಳಲ್ಲಿ ಹರಿಜನರನ್ನು ಮನೆಗಳಲ್ಲಿ ಸೇರಿಸುವುದಿಲ್ಲ, ನೀರು ಕೊಡುವುದಿಲ್ಲ, ಹೋಟೆಲುಗಳಲ್ಲಿ ಬಿಡುವುದಿಲ್ಲ, ಅದಕ್ಕೆ ಬದಲಾಗಿ ಅವರನ್ನು ಮರಕ್ಕೆ ಕಟ್ಟಿ ಹೊಡೆಯುತ್ತಾರೆ. ಹರಿಜನ ಕೃಷಿ ಕಾರ್ಮಿಕರನ್ನು ಮರಕ್ಕೆ ಕಟ್ಟಿ ಹಾಕಿ ಹೊಡೆದಂಥ ನಿದರ್ಶನಗಳನ್ನು ನಾನು ಕೊಡಬಲ್ಲೆ. ಆಂಧ್ರದಲ್ಲಿ ಕೃಷಿ ಕಾರ್ಮಿಕ ಸರಿಯಾಗಿ ಕೆಲಸ ಮಾಡಲಿಲ್ಲ ಎಂದು ಏನೋ ಭೂಮಾಲಿಕರಿಗೆ ಇದರಿಂದ ತೊಂದರೆ ಬಂದು ಭೂಮಾಲೀಕನು ಸವರ್ಣೀಯನಾಗಿದ್ದು ಈ ಹರಿಜನ ಕೃಷಿಕಾರ್ಮಿಕನನ್ನು ಕರೆದುಕೊಂಡು ಹೋಗಿ ಮರಕ್ಕೆ ಕಟ್ಟಿ ಹಾಕಿ, ಮೈ, ಕೈಗೆ ಪೆಟ್ರೋಲ್ ಹಾಕಿ ಸುಟ್ಟು ಹಾಕಿದರು ಎಂದು ಪತ್ರಿಕೆಯಲ್ಲಿ ಬಂದಿತ್ತು. ಇಂಥ ಘಟನೆಗಳು ಬಿಜಾಪುರ ಜಿಲ್ಲೆಯಲ್ಲಿ ನಡೆದಿದೆ ಎಂದು ನಾನು ಕೇಳಿದ್ದೇನೆ. ಈ ತರಹ ನಿದರ್ಶನಗಳು ಬೇಕಾದಷ್ಟು ಇವೆ. ಇದನ್ನೆಲ್ಲಾ ನೋಡಿದರೆ, ಇಷ್ಟು ವರ್ಷವಾದರೂ ಸಹಾ ನಾವು ಇದರ ಬಗ್ಗೆ ಬೇಕಾದಷ್ಟು ಮಾತನಾಡುತ್ತೇವೆಯೇ ಹೊರತು ಏನೂ ಆಗಿಲ್ಲ ಎನ್ನುವ ಪರಿತಾಪ ಉಂಟಾಗುತ್ತದೆ. ಪರಿತಾಪ ಅಷ್ಟೇ ಅಲ್ಲ ಕ್ರೋಧವು ಉಂಟಾಗುತ್ತದೆ. ಆದ್ದರಿಂದ ಹರಿಜನ ಮುಖಂಡರುಗಳು ಯಾರಿದ್ದಾರೆ ಅವರು ಹೆಚ್ಚಿನ ರೀತಿಯಲ್ಲಿ ಒಂದು ಹೋರಾಟ ಚಳುವಳಿಯನ್ನು ರೂಪಿಸುವುದಕ್ಕೆ ಮುಂದೆ ಬರಬೇಕು. ಇಂಥ ಒಂದು ಪರಿಸ್ಥಿತಿ ಬಂದಿದೆ ಎಂದು ನಾನು ಸ್ಪಷ್ಟವಾಗಿ ಹೇಳಬೇಕಾಗಿದೆ. ಈ ರೀತಿ ಚಳುವಳಿಯನ್ನು ರೂಪಿಸದೆ, ಅನುಕೂಲ ಮಾಡಿಕೊಡಿ ಎಂದರೆ ಮಾತ್ರ ಸಾಕಾಗದು ಎಂದು ನನಗನ್ನಿಸುತ್ತದೆ ಮುಕ್ಕಾಲು ಜನ ಹರಿಜನರು ಕೃಷಿ ಕಾರ್ಮಿಕರು, ಕಡಿಮೆ ದರ್ಜೆಯ ರೈತರೂ ಕೂಡ ಹರಿಜನರು. ನಮ್ಮ ಪೌರ ಕಾರ್ಮಿಕರೂ ಇದ್ದಾರೆ. ಇವರ ಬಗ್ಗೆ ನಮ್ಮ ಮಾನ್ಯ ಬಸವಲಿಂಗಪ್ಪನವರು ಇಂಥ ಒಂದು ಹೆಸರನ್ನು ಇವರಿಗೆ ಕೊಟ್ಟಿದ್ದಕ್ಕಾಗಿ ನಾನು ಅವರನ್ನು ಶ್ಲಾಘಿಸಬೇಕಾಗಿದೆ. ಎರಡನೆಯದಾಗಿ ಪೌರ ಕಾರ್ಮಿಕರು ಮಲ ಹೊರುವ ಪದ್ಧತಿಯನ್ನು ತೆಗೆದು ಹಾಕಿದ್ದಾರೆ ಇದೂ ಕೂಡ ಬಹಳ ಸಂತೋಷದ ವಿಷಯ. ಈ ಪೌರ ಕಾರ್ಮಿಕರನ್ನು ಕೃಷಿ ಕಾರ್ಮಿಕರನ್ನು ಒಂದು ಕಡೆ ಸೇರಿಸಬೇಕು. ಅವರ ಒಂದು ಸಂಘಟನೆ ಬಲವಾಗಿ ಆಗಬೇಕಾಗಿದೆ. ಇವತ್ತು ಪ್ರಚಂಡ ಚಳುವಳಿ ವರ್ಗದ ಆಧಾರದ ಮೇಲೆ ಆಗಬೇಕಾಗಿದೆ. ಈ ರೀತಿ ಆದರೆ ಮಾತ್ರ ಹರಿಜನ ಗಿರಿಜನರ

ಪ್ರಶ್ನೆ ಅಮೂಲಾಗ್ರವಾಗಿ ಸರ್ಕಾರದಿಂದ ಪರಿಶೀಲನೆಯಾಗೆ ಇವರ ಅಭಿವೃದ್ಧಿಯಾಗುತ್ತದೆ. ಈ ದೃಷ್ಟಿಕೋನವನ್ನು ಹರಿಜನ ಮುಖಂಡರುಗಳು ಇಟ್ಟುಕೊಳ್ಳಬೇಕು ಎಂದು ನನ್ನ ಅಭಿಪ್ರಾಯ. ನಮ್ಮ ಪಾರ್ಟಿಯವರು ಇದೇ ದೃಷ್ಟಿಯಲ್ಲಿ ಕೆಲಸ ಮಾಡಿಕೊಂಡು ಹೋಗುತ್ತಿದ್ದಾರೆ.

Sri M. MALLIKARJUNASWAMY.— This is an appeal to all the political leaders, is it not so ?

Sri M. S. KRISHNAN.— This is an appeal to all concerned.

ವೆಸ್ಟೆಡ್ ಇಂಟರೆಸ್ಟ್ಸ್ ಬೆಳೆದು ರಾಜಕೀಯ ಮುಖಂಡರು ತಮ್ಮ ಕೋಮುಗಳ ಹಿತ ರಕ್ಷಿಸಿಕೊಂಡು ಇತರ ವರ್ಗಗಳ ಮೇಲ್ಮೆಗೆ ಅವಕಾಶವಿಲ್ಲದಂತೆ ಮಾಡುವರು. ಇದನ್ನು ದೃಷ್ಟಿಯಲ್ಲಿಟ್ಟು ತಕ್ಕ ಕ್ರಮ ಕೈಕೊಳ್ಳಬೇಕು. ಇನ್ನು ಫೈನಾನ್ಸ್ ಕಾರ್ಪೊರೇಶನ್ ಮಾಡುವ ಬಗ್ಗೆ ಎರಡು ಸಲಹೆಗಳನ್ನು ನೀಡುತ್ತೇನೆ. ಕೃಷಿಯ ಬಗ್ಗೆ ನನ್ನ ಸಲಹೆ ಹೆಚ್ಚು ಕೃಷಿ ಕಾರ್ಮಿಕರಿರುವುದರಿಂದ ಶ್ರೀ ಕಾಗೋಡು ತಿಮ್ಮಪ್ಪನವರು ಹೇಳಿದ ಹಾಗೆ ಎರಡು ಮೂರು ತಿಂಗಳು ಕೃಷಿ ಕಾರ್ಮಿಕರಿಗೆ ಕೆಲಸವಿಲ್ಲದೆ ಇರುವುದರಿಂದ ಅವರಿಗೆ ಒಂದು ಕೋ ಅಪರೇಟಿವ್ ಫಾರ್ಮಿಂಗ ಅಥವಾ ಕಲೆಕ್ಟಿವ್ ಫಾರ್ಮಿಂಗ್ ಎಂದು ಬೇಕಾದರೂ ಕರೆಯಿರಿ, ಅವನ್ನು ಮಾಡಿ ಹರಿಜನರಿಗೆ ಮನೆ ಮತ್ತು ಹಣದ ಸೌಕರ್ಯ ಒದಗಿಸಿಕೊಟ್ಟರೆ ಅವರು ಮುಂದುವರೆಯಲು ಸಾಧ್ಯವಾಗುವುದು. ಎರಡನೆಯದು ಈ ದಿವಸ ಮನೆ ಕಟ್ಟಿಸುವುದಕ್ಕೆ ಯೋಜನೆ ಇದೆ; ಅದಕ್ಕೆ ೨ ಸಾವಿರ ರೂಪಾಯಿ ಕೊಡುವರು. ೫೦೦ ರೂಪಾಯಿ ಕ್ಯಾಷ್ ಕೊಡಬೇಕು, ೫೦೦ ರೂಪಾಯಿಗಳ ವರೆಗೆ ಹ್ಯಾಂಡ್ ಲೇಬರ್ ಮಾಡಬೇಕು ಎಂದು ಮಾಡಿದ್ದೀರಿ. ೫೦೦ ರೂಪಾಯಿಗಳ ವರೆಗೆ ಲೇಬರ್ ಮಾಡಬೇಕೆಂದಿರುವಂತೆ ನಡೆದುಕೊಳ್ಳುವುದು ಸುಲಭವಲ್ಲ. ಅವರು ದುಡಿಯಬೇಕು, ಅದಕ್ಕೆ ಕೂಲಿ ಕೊಡುವುದಿಲ್ಲ. ಆದುದರಿಂದ ಈ ರೀತಿಯ ಕಾರ್ಪೊರೇಶನ್ ಮಾಡಿ ೫೦೦ ರೂಪಾಯಿಗಳನ್ನು ಅಡ್ವಾನ್ಸಾಗಿ ಕೊಟ್ಟು ಅದನ್ನು ಕಂತುಗಳಲ್ಲಿ ಮನೆ ಕಟ್ಟಿದ ಮೇಲೆ ವಸೂಲು ಮಾಡಿ. ಈ ರೀತಿ ಮಾಡಿದರೆ ಅನುಕೂಲವಾಗುತ್ತದೆ. ಹಣ ಅದರಿಂದ ದೊರೆಯುವುದು. ಹಣ ಕೊಡದಿರುವುದರಿಂದ ಕಾರ್ಪೊರೇಷನ್ ಮಾಡಿದರೆ ಅದರಿಂದ ಹಣ ಪಡೆದು ಕೆಲಸ ಮಾಡಿಸಬಹುದು. ವೊಕೇಷನಲ್ ಟ್ರೈನಿಂಗಿಗೂ ಇಂಥ ಕಾರ್ಪೊರೇಷನ್ ಮಾಡಿದರೆ ಅನುಕೂಲವಾಗುತ್ತದೆ. ಸ್ಕಾಲ್ ಸ್ಕೇಲ್ ಇಂಡಸ್ಟ್ರಿ ನಡೆಸಲು ಅವಕಾಶವಾಗುವುದು. ಜೊತೆಗೆ ವಿದ್ಯಾಭ್ಯಾಸ ನೀಡಬೇಕು. ಇದರಲ್ಲಿ ಭಿನ್ನಾಭಿಪ್ರಾಯವಿಲ್ಲ ಇದು ಬಹಳ ಮುಖ್ಯವಾದುದು, ಇದನ್ನು ಶ್ರೀ ತಿಮ್ಮಪ್ಪನವರು ಹೇಳಿದ್ದಾರೆ. ಮನೆಗಳನ್ನು ಕಟ್ಟಿಸುವಾಗ ಅವರಲ್ಲಿ ಶೇಕಡ ೫೦ ಮನೆಗಳನ್ನಾದರೂ ಹರಿಜನರಿಗೆ ಕೊಡಬೇಕು.

Mr. DEPUTY SPEAKER.— I request the hon. member to speak strictly within the scope of the resolution.

Sri M. S. KRISHNAN.— All my arguements come with in the scope of the Corporation.

Mr. DEPUTY SPEAKER.— The conditions of the SC/ST can be ameliorated by certain measures. Please narrate those measures as No. 1, 2 and 3. Otherwise narration of the entire conditions of the backward classes would it self become a big chapter. It is the legacy of the past and the difficulty of the present. I had already extended the time by 20 minutes which is also over.

ಶ್ರೀ ಎಂ. ಎಸ್. ಕೃಷ್ಣನ್ —ಶೇಕಡ ೫೦ ಮನೆಗಳನ್ನಾದರೂ ಹರಿಜನರಿಗೆ ಕೊಡಬೇಕು. ಕೇರಳದಲ್ಲಿ ಹಾಗೆ ಮಾಡಿದ್ದಾರೆ. ಆ ರೀತಿ ಇಲ್ಲೂ ಒಂದು ತೀರ್ಮಾನ ಮಾಡಬೇಕು. ಈ ಕಾರ್ಪೊರೇಷನ್ ಅತಿ ಮುಖ್ಯವಾದುದು. ನಮ್ಮಲ್ಲಿ ೩೫ ಲಕ್ಷ ಜನರಿದ್ದಾರೆಂದು ಹೇಳಿದರು. ಅವರಿಗಾಗಿ ಖರ್ಚು ಎಷ್ಟಾಗಬಹುದು ಎಂದು ಒಟ್ಟು ಲೆಕ್ಕ ಹಾಕಿದರೆ ಸುಮಾರು ೨೫೦ ಕೋಟಿ ರೂಪಾಯಿ ಆಗಬಹುದು. ಹತ್ತು ವರ್ಷಕ್ಕೆ ಇದನ್ನು ಹಂಚಬಹ ದು. ಇದಕ್ಕೆಲ್ಲಾ ಕಾರ್ಪೊರೇಷನ್ ಮಾಡಿದರೆ ಅವಕಾಶವಾಗು ವುದರಿಂದ ಅದನ್ನು ಮಾಡಬೇಕೆಂದು ಪ್ರಾರ್ಥನೆ ಮಾಡಿ ಇಷ್ಟು ಹೇಳಲು ಅವಕಾಶ ವಿತ್ತ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Mr. DEPUTY SPEAKER.—Is it the pleasure of the House that time be extended by half an hour?

HON. MEMBERS.— Yes.

ಶ್ರೀ ಸಿ. ಬೈರೇಗೌಡ (ನೆಲಮಂಗಲ್).— ಅಧ್ಯಕ್ಷರೇ, ನನ್ನ ಮಿತ್ರರಾದ ಶ್ರೀ ಜಯಪ್ರಕಾಶ ನಾರಾಯಣರವರು ಇಂದು ಈ ಖಾಸಗಿ ನಿರ್ಣಯವನ್ನು ತಂದಿದ್ದಾರೆ. ಆದರೆ ಸರಕಾರ ಇದನ್ನು ಒಪ್ಪುವುದೆಂಬ ವಿಚಾರದಲ್ಲಿ ನನಗೆ ನಂಬಿಕೆಯಿಲ್ಲ. ವಿರೋಧ ಪಕ್ಷದ ಸದಸ್ಯರು ಇದನ್ನು ತಂದಿರುವದರಿಂದ ಸರಕಾರ ಈ ನಿರ್ಣಯವನ್ನು ಒಪ್ಪು ವುದು ಧರ್ಮ. ನಾವು ಇಂಥ ನಿರ್ಣಯ ತಂದರೆ ಅದನ್ನು ಒಪ್ಪದಿರಬಹುದು. ಈಗ ವಿರೋಧ ಪಕ್ಷದ ಸದಸ್ಯರು ತಂದಿರುವದರಿಂದ ಇದನ್ನು ಒಪ್ಪಿಕೊಳ್ಳಬೇಕು. ಒಂದು ವೇಳೆ ಸರಕಾರ ಇದನ್ನು ಒಪ್ಪದಿದ್ದರೆ ನಿರ್ಣಯವನ್ನು ಸೂಚಕರು ವಾಪಸು ಪಡೆಯ ಬಾರದು, ಒಂದು ವೇಳೆ ವಾಪಸು ಪಡೆಯಬೇಕೆಂದರೆ ಅವರು ರಾಜೀನಾಮೆ ಕೊಡಬೇಕು ಎಂದು ಹೇಳುತ್ತೇನೆ. ಇದು ಬರೀ ನಮ್ಮ ರಾಜ್ಯದ ಪ್ರಶ್ನೆಯಲ್ಲ. ಇದು ರಾಷ್ಟ್ರೀಯ ಪ್ರಶ್ನೆ. ತಲೆತಲಾಂತರದಿಂದ ತುಳಿತಕ್ಕೆ ಸಿಕ್ಕಿರುವ ಈ ಜನರ ಏಳಿಗೆ ದೇಶಕ್ಕೆ ಸ್ವಾತಂತ್ರ್ಯ ಬಂದು ೨೬ ವರ್ಷವಾದರೂ ಇನ್ನೂ ಆಗಿಲ್ಲ, ಅವರ ಅಭಿವೃದ್ಧಿ ನೋಡಿದರೆ ಸೊನ್ನೆ ಎಂದು ಹೇಳಬಹುದು. ಹೀಗಿರುವಾಗ ಮಾನ್ಯ ಸದಸ್ಯರು ಇಂಥ ಒಂದು ನಿರ್ಣಯವನ್ನು ತಂದಿದ್ದಾರೆ. ವಿದ್ಯಾಭ್ಯಾಸ ಮತ್ತು ಟ್ರೈನಿಂಗ ಬಗ್ಗೆ ಮಾನ್ಯ ಮಿತ್ರರು ಹೇಳಿದರು. ವಿದ್ಯಾಭ್ಯಾಸ ಕೊಟ್ಟು ೧೫೦

ರೂಪಾಯಿ ಸಂಬಳವಾದರೂ ಸಿಕ್ಕುವಂತೆ ಮಾಡಿ. ಇಷ್ಟಕ್ಕೇ ನಿಲ್ಲಬಾರದು. ಇಂದು ಕೈಗಾರಿಕೆಗಳು ಬೆಳೆಯಬೇಕಾಗಿದೆ. ಇಂದು ಕೈಗಾರಿಕೆಗಳಿಂದ ಕೆಲವೇ ಜನರು ಮುಂದುವರೆಯುತ್ತಿದ್ದಾರೆ. ಅವರು ಸಕಲ ಸೌಲಭ್ಯಗಳನ್ನೂ ಉಪಯೋಗಿಸಿ ಕೊಳ್ಳುತ್ತಿದ್ದಾರೆ. ಈ ಹಿಂದುಳಿದ ವರ್ಗದವರು ಸಣ್ಣ ಕೈಗಾರಿಕೆಗಳನ್ನು ನಡೆಸಲು ಹಣ ಒದಗಿಸಬೇಕು. ಅಂಕಿಅಂಶ ನೋಡಿದರೆ ಭಾರತದಲ್ಲಾಗಲೀ ಅಥವಾ ಮೈಸೂರಿನಲ್ಲಾಗಲೀ ಹರಿಜನರಲ್ಲಿ ಕೈಗಾರಿಕಾ ಮೂಲೀಕರು ಯಾರಿದ್ದಾರೆಂದು ನೋಡಿದರೆ ದೊಡ್ಡ ಸೊನ್ನೆ ಎಂದು ನಾನು ಭಾವಿಸಿದ್ದೇನೆ. ಸರಕಾರ ಇಂದು ಒಂದು ಸೆಲ್ ಮಾಡುವದೆಂದು ಹೇಳುವರು, ಎಲ್ಲಾ ಬರೀ ಕಾಗದದ ಮೇಲಿರುವದು. ಏನೇ ಮಾಡಿದರೂ ಈ ಹಿಂದುಳಿದ ಜನರಿಗೆ ಬೇಕಾದ ಸೌಲಭ್ಯಗಳನ್ನು ಕಲ್ಪಿಸಲು ಇದುವರೆಗೆ ಸಾಧ್ಯವಾಗಿಲ್ಲ. ಉದಾಹರಣೆಗೆ ಇಂದು ನಮ್ಮ ಪ್ರಧಾನಿಗಳಿದ್ದಾರೆ. ಅವರ ಮಗ ಶ್ರೀ ಸಂಜಯಗಾಂಧಿಯವರು ಕಾರನ್ನು ತಯಾರು ಮಾಡುತ್ತಿದ್ದಾರೆ.

Mr. DEPUTY SPEAKER.—The hon. member seems to have warmed up when the time is over. I would have understood his warming up if he had stood up at the early stage. I would request him to go through the resolution. The object of the resolution is to suggest the ways and means for the constitution of a Finance Corporation and to assist it to implement the schemes meant for the SC/ST. All things on earth cannot come within the scope of the resolution. If the Hon. Member wants to be within this scope of the resolution, I would permit him to speak for a couple of minutes. If he wants to go outside the scope of the resolution, I would see that he completes his speech.

ಶ್ರೀ ಸಿ. ಬೈರೇಗೌಡ.— ಅವರು ಈ ದಿವಸ ತೊಡಗಿಸಿರುವ ಬಂಡವಾಳ ಕೇವಲ ನೂರು ರೂಪಾಯಿ. ಬಂಡವಾಳ ಒದಗಿಸಿ ಹಿಂದುಳಿದಿರುವವರು ಮುಂದೆ ಬರಲು ಅವಕಾಶ ಮಾಡಬೇಕು.

Mr. DEPUTY SPEAKAR.—The hon. member need not try to be heroic and too much learned. I request him to speak whithin the scope of the resolution. He should not go on speaking extraneous things.

ಶ್ರೀ ಸಿ. ಬೈರೇಗೌಡ.— ಆರ್ಥಿಕವಾಗಿ ಮುಂದುವರಿಯಬೇಕಾದರೆ ಅವರಿಗೆ ಅಲ್ಲ ಯಾರಿಗಾದರೂ ಕೂಡ ಬಂಡವಾಳ ಬೇಕೇ ಬೇಕು. ಅದಕ್ಕಾಗಿ ಇವರಿಗೆ ಹಣವನ್ನು ಒದಗಿಸಬೇಕಾದ್ದು ಅವಶ್ಯಕ ಎಂಬುದನ್ನು ತಿಳಿಸುವುದಕ್ಕಾಗಿ ಈ ಮಾತನ್ನು ಹೇಳುತ್ತಿದ್ದೇನೆ.

ಉಪಾಧ್ಯಕ್ಷರು.—ಹೌದು ಹೌದು ಮಾತನಾಡವುದಕ್ಕೂ ಕೂಡ ಬಂಡವಾಳ ಬೇಕು. ಬಂಡವಾಳ ಇಲ್ಲದೆ ಭಾಷಣವನ್ನೂ ಕೂಡ ಮಾಡುವುದಕ್ಕಾಗುವುದಿಲ್ಲ. ಮಾನ್ಯ ಸದಸ್ಯರೂ ನಿರ್ಣಯದವ್ಯಾಪ್ತಿ ಅನುಸರಿಸಿ ಭಾಷಣ ಮಾಡಬೇಕೆಂದು ಒತ್ತಿ ಹೇಳುತ್ತೇನೆ.

ಶ್ರೀ ಸಿ. ಬೈರೇಗೌಡ—ನಾನು ನಿರ್ಣಯವನ್ನು ಓದಿದ್ದೇನೆ. ಓದದೆ ನಾನು ಇಲ್ಲಿ ಮಾತನಾಡುತ್ತಿಲ್ಲ. ಈ ದಿವಸ ರೈತರಿಗೆ ಬಾವಿಗಳನ್ನು ತೆಗೆಸುವುದಕ್ಕೆ ಸಾಲ ಕೊಡುತ್ತಿದ್ದಾರೆ. ಮೊದಲು ಈ ಸಾಲಕ್ಕೆ ಶೇ. ೩ ರಂತೆ ಬಡ್ಡಿ ಹಾಕುತ್ತಿದ್ದರು. ಅದನ್ನಿಗ ಶೇ. ೯ ರಿಂದ ೧೧ ಕ್ಕೆ ಏರಿಸಿದ್ದಾರೆ. ನಾವು ನಮ್ಮ ಕೋಲಾರ ಜಿಲ್ಲೆಯಿಂದ ಒಂದು ರೆಸಲ್ಯೂಷನ್ ಮಾಡಿ ಈ ಹರಿಜನರಿಗೆ ಬಾವಿ ತೆಗೆಯುವುದಕ್ಕೆ ಕೊಡತಕ್ಕ ಸಾಲ ಏನಿದೆ ಇದಕ್ಕೆ ಬಡ್ಡಿಯನ್ನು ಪೂರ್ತಿಯಾಗಿ ಮನ್ನಾ ಮಾಡಿ ಇಲ್ಲವೇ ಮೂರು ಪರ್ಸೆಂಟ್ ಮಾತ್ರ ಮೊದಲಿದ್ದಂತೆ ಬಡ್ಡಿ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡಿದ್ದರೂ ಸರ್ಕಾರ ಅದನ್ನು ಮಾಡುವುದಕ್ಕೆ ಒಪ್ಪಿಲ್ಲ.

ಇನ್ನೊಂದು ವಿಚಾರ— ಅದು ಮಾನ್ಯ ಮಂತ್ರಿಗಳಿಗೂ ಗೊತ್ತಿದೆ, ಮುಖ್ಯ ಮಂತ್ರಿಗಳಿಗೂ ಗೊತ್ತಿದೆ. ನಮ್ಮ ಜಿಲ್ಲೆಯಲ್ಲಿ ಹರಿಜನರಿಗೆ ಸಾವಕ್ಕಾಗಿ ೧೯೪೮ ರಲ್ಲಿ ಪ್ರಾರಂಭಮಾಡಿದ ಮನೆಗಳನ್ನೂ ಆಗುವುದರಲ್ಲೇ ಇದೆ. ಒಂದು ನೂರು ಮನೆಗಳನ್ನು ಇವರೆಗೆ ಕಟ್ಟಿಸಲು ಸರ್ಕಾರ ಒಂದು ಯೋಜನೆಯನ್ನು ಮಾಡಿದ್ದು ಇನ್ನೂ ಮುಗಿದಿಲ್ಲ. ಕಟ್ಟಿಸಿದ್ದ ಮನೆಗಳೆಲ್ಲಾ ಬಿದ್ದು ನೆಲಸಮನಾಗಿವೆ. ಸುದೈವದಿಂದ ಅದರಲ್ಲಿದ್ದ ಯಾರೂ ಸಾಯಲಿಲ್ಲ. ಇಂಥ ಅನುಕೂಲಗಳನ್ನು ಮಾಡುವುದಕ್ಕಿಂತ ಮಾಡದಿರುವುದೇ ಲೇಸೆಂದು ಹೇಳುತ್ತೇನೆ. ಈ ದಿವಸ ಮಾನ್ಯ ಜಯಪ್ರಕಾಶ ನಾರಾಯಣ ಅವರು ತಂದಿರತಕ್ಕ ಈ ನಿರ್ಣಯ ಸಮಯೋಚಿತವಾಗಿರುವುದರಿಂದ ಸರಕಾರದವರು ಇದನ್ನು ಒಪ್ಪಲೇಬೇಕೆಂದು ಒತ್ತಾಯ ಮಾಡಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ (ಸಮಾಜ ಕಲ್ಯಾಣ ಮತ್ತು ಸಮಾಜ ವಿಕಾಶ ಶಾಖೆಯ ಸಚಿವರು)—ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ನನ್ನ ಮಾನ್ಯ ಮಿತ್ರರುಗಳಾದಂಥ ಶ್ರೀ ಜಯಪ್ರಕಾಶ ನಾರಾಯಣ ಅವರೂ ಮತ್ತು ಶ್ರೀ ಸಿದ್ದವಾದಯ್ಯನವರೂ ಈ ಒಂದು ಖಾಸಗೀ ನಿರ್ಣಯವನ್ನು ತಂದು ಇದರ ಬಗ್ಗೆ ಇಲ್ಲಿ ಮಹತ್ವಪೂರಿತವಾದ ಚರ್ಚೆಗಳು ನಡೆದಿವೆ. ಬಹುಶಃ ಹಿಂದೆ ನಡೆದ ಅಯವ್ಯಯ ಅಧಿವೇಶನದ ಕಾಲದಲ್ಲೂ ಈ ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಗಳ ಬಗ್ಗೆ ನಡೆದ ಆ ಒಂದು ಚರ್ಚೆಯಲ್ಲಿ ಕೂಡ ಇಷ್ಟು ಮಹತ್ವಪೂರಿತವಾದ ಚರ್ಚೆ ನಡೆಯಲಿಲ್ಲ ಎಂದು ನಾನು ಭಾವಿಸುತ್ತೇನೆ. ಅಂಥ ಒಂದು ಮಹತ್ವಪೂರಿತವಾದ ಚರ್ಚೆಯನ್ನು ಈ ಮಾನ್ಯ ಸಭೆಯವರು ಈಗ ನಡೆಸಿ ಸರಕಾರದ ಗಮನವನ್ನು ಸೆಳೆದುಕ್ಕಾಗಿ ನಾನು ಎಲ್ಲಾ ಮಾನ್ಯ ಸದಸ್ಯರುಗಳಿಗೂ ಸರ್ಕಾರದ ಪರವಾಗಿಯೂ ಮತ್ತು ನನ್ನ ವೈಯುಕ್ತಿವಾಗಿಯೂ ತಮ್ಮೆಲ್ಲರಿಗೂ ನನ್ನ ಧನ್ಯವಾದಗಳನ್ನರ್ಪಿಸುತ್ತೇನೆ.

ಈ ಹೊತ್ತಿನ ದಿವಸ ನಾನಾದರೂ ಕೂಡ ಈ ಚರ್ಚೆಗೆ ಉತ್ತರಕೊಡತಕ್ಕ ಈ ಒಂದು ಸಂದರ್ಭದಲ್ಲಿ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಈ ಹೊತ್ತಿನ ದಿವಸ ನಮ್ಮ ಮೈಸೂರು ರಾಜ್ಯದಲ್ಲಿ ಅಂದರೆ ಇಡೀ ಕರ್ನಾಟಕ ರಾಜ್ಯದಲ್ಲಿ ಏನು ಒಂದು ನೂರಇಪ್ಪತ್ತು ದಶಲಕ್ಷ ಜನತೆ ಬಡತನದ ದವಡೆಯಲ್ಲಿ ಸಿಕ್ಕಿ ನರಳುತ್ತಿದೆ ಅದನ್ನು ಯಾರೂ ಮರೆಯಬಾರದು. ಆ ಬಡವರಲ್ಲಿ ಸುಮಾರು ೪೦–೫೦ ಲಕ್ಷ ಜನರು ಹರಿಜನ ಗಿರಿಜನರಿರಬಹುದು. ಅದಾಗ್ಯೂ ಇವರಂತೆ ಬೇರೇ ಜನರೂ ಕೂಡ ಈ ಹರಿಜನರಷ್ಟೇ ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದವರಿದ್ದಾರೆ ಎಂಬ ಅಂಶವನ್ನು ನಾವು ಈ ಸಂದರ್ಭದಲ್ಲಿ ಗಮನದಲ್ಲಿಟ್ಟುಕೊಳ್ಳಬೇಕಾದ್ದು ಅತ್ಯವಶಕ. ಇದನ್ನು ತಾವೆಲ್ಲರೂ ಅರಿತಿದ್ದೀರಿ. ಆದರೆ ಯಾರು ಈ ಸಾಮಾಜಿಕವಾಗಿ ಬಹಳ ಹಿಂದುಳಿದಿದ್ದಾರೆ ಯಾರು ಅನೇಕ ಶತಮಾನಗಳಿಂದ ಈ ಒಂದು ಕುಂದುಕೊರತೆಗೆ ಸಿಕ್ಕಿ ನರಳುತ್ತಿದ್ದಾರೆ ಎಂಬುದನ್ನು ಶ್ರೀಮಾನ್ ಕೃಷ್ಣನ್‌ರವರು ಪ್ರಸ್ತಾಪ ಮಾಡುತ್ತ ಡಾ. ಅಂಬೇಡ್ಕರರು ರಾಜ್ಯಾಂಗಕ್ಕೆ ಒಂದು ಕರಡುಪ್ರತಿ ತಯಾರಿಸಿದ ಕಾಲದಲ್ಲಿ ಏನೊಂದು ಮಾತನ್ನು ಹೇಳಿದ್ದಾರೆಂಬುದನ್ನು ಉದ್ಧರಿಸಿ ಮಾತನಾಡಿದರು.

> "On 26th January 1950, we will have equality in politics but inequality in social and economic life. We must remove this contradiction at the earliest. Or else those who suffer from this inequality will blow up the political structure of our democracy which this House has so laboriously built".

ಎಂಬುದಾಗಿ ಅವರು ಹೇಳಿದ್ದಾರೆ. ಅವರೇನು ಓದಿದರು ಅದನ್ನೇ ನಾನು ಹೇಳುತ್ತಿದ್ದೇನೆ.

MR. DEPUTY SPEAKER— Eerlier also the hon. member quoted in the last Assembly.

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ಈ ದಿವಸ ರಾಷ್ಟ್ರದಲ್ಲಿ ಆಡಳಿತವನ್ನು ನಡೆಸುತ್ತಿರುವ ಸರಕಾರ ಅಂದರೆ ಕೇಂದ್ರ ಸರಕಾರದವರು, ಹಾಗೂ ಅದರ ಮುಖಂಡರೂ ಮತ್ತು ರಾಷ್ಟ್ರೀಯ ಅಭಿವೃದ್ಧಿ ಮಂಡಲಿಯವರೂ, ಯೋಜನಾ ಮಂಡಲಿಯವರೂ ಈ ಅಂಶಗಳನ್ನೆಲ್ಲಾ ಗಣನೆಗೆ ತೆಗೆದುಕೊಂಡು ಯಾವ ಯಾವ ವರ್ಗದವರು ಈ ಬಡತನದ ಗೆರೆಯ ಕೆಳಗೆ ಬರುತ್ತಾರೆ. ಅಂಥ ವರ್ಗಗಳ ಜನರನ್ನು ಮುಂದಕ್ಕೆ ತರುವ ಸಲುವಾಗಿ, ಆ ಉದ್ದೇಶದಿಂದ ಅವರು ಒಂದು ನ್ಯಾಷನಲ್ ಅಬ್ಜಕ್ಟನ್ನು ಇಟ್ಟುಕೊಂಡು ಈಗಾಗಲೇ ಅವರು ಎಲ್ಲ ರಾಜ್ಯ ಸರಕಾರಗಳಿಗೂ ಯಾವ ರೀತಿ ಕೆಲಸ ಮಾಡಬೇಕೆಂಬ ವಿಚಾರದಲ್ಲಿ ಒಂದು ಗೈಡ್‌ಲೈನನ್ನು ಕೊಟ್ಟಿದ್ದಾರೆ.

ಅಷ್ಟೇ ಅಲ್ಲದೆ ನಮ್ಮ ಪ್ರಧಾನ ಮಂತ್ರಿಗಳೂ ಕೂಡ ಪಾರ್ಲಿಮೆಂಟಿನೊಳಗೂ ಮತ್ತು ಹೊರಗೂ ಈ ಹರಿಜನರ, ಗಿರಿಜನರ ಹಾಗೂ ಇತರೇ ದುರ್ಬಲ ವರ್ಗಗಳ ಬಗ್ಗೆ ಇವರನ್ನು ಆರ್ಥಿಕವಾಗಿ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಮುಂದಕ್ಕೆ ತರಲು ಏನೇನು ಉಪದೇಶಗಳನ್ನು ಮಾಡುತ್ತಿದ್ದಾರೆ ಎಂಬ ಅಂಶವನ್ನೂ ಕೂಡ ನಾನು ಈ ಸಂದರ್ಭದಲ್ಲಿ ಈ ಮಾನ್ಯ ಸಭೆಯು ಗಮನದಲ್ಲಿಟ್ಟುಕೊಳ್ಳಬೇಕೆಂದು ತಿಳಿಸಲು ಇಷ್ಟಪಡುತ್ತೇನೆ.

ಈ ನಿರ್ಣಯವನ್ನು ತಂದಿರತಕ್ಕ ಮಾನ್ಯ ಸದಸ್ಯರಾದ ಶ್ರೀ ಜಯಪ್ರಕಾಶ ನಾರಾಯಣ ಅವರು ಅನೇಕ ಮಹತ್ವದ ವಿಷಯಗಳನ್ನು ಪ್ರಸ್ತಾಪಮಾಡಿದ್ದಾರೆ. ಈ ವಿಚಾರದಲ್ಲಿ ಒಂದು ಕಾರ್ಪೊರೇಷನ್ ರಚನೆ ಮಾಡಿದರೆ ಅದರ ಪ್ರಾಮುಖ್ಯತೆ ಎಷ್ಟಿದೆ, ಮತ್ತೆ ಅದನ್ನು ಜಾರಿಗೆ ತಾರದಿದ್ದರೆ ಈ ದುರ್ಬಲವರ್ಗದ ಅಭಿವೃದ್ಧಿಗೆ ಏನು ಕುಂದಕವಾಗುತ್ತದೆ, ನಮಗೆ ಸ್ವಾತಂತ್ರ್ಯ ಬಂದು ೨೫ ವರ್ಷಗಳು ಮೇಲಾಗಿದ್ದರೂ ಈ ವರ್ಗದ ಜನರು ಏಕೆ ಮುಂದುವರಿಯಲಿಲ್ಲ ಎಂಬ ಅನೇಕ ವಿಷಯಗಳನ್ನು ಅವರು ಪ್ರಸ್ತಾಪಮಾಡಿದ್ದಾರೆ. ಇದರ ಅಗತ್ಯ ಎಷ್ಟಿದೆ ಎಂಬುದನ್ನು ಆ ಪೆಡ್ಯಾಲ್ಡ್ ಕ್ಯಾಷ್ಟಿನ ಕಮಿಷನ್ನಿನವರು ತಮ್ಮ ವರದಿಯಲ್ಲೂ ಕೂಡ ತಿಳಿಸಿದ್ದಾರೆ. ಈ ದಿವಸ ನಮ್ಮ ಸಮಾಜದ ಏನೊಂದು ಆರ್ಥಿಕ ವ್ಯವಸ್ಥೆ ಇದೆ, ಹಾಗೂ ಗ್ರಾಮಾಂತರ ಪ್ರದೇಶದಲ್ಲಿ ಏನೊಂದು ಸ್ಟೆಪ್ಪಿದೆ ಅದರಲ್ಲಿ ಈ ದುರ್ಬಲವರ್ಗದವರು ಮುಂದಕ್ಕೆ ಬರಬೇಕಾಗಿದ್ದರೆ ಇವರ ಆರ್ಥಿಕ ಪರಿಸ್ಥಿತಿ ಸಾಮಾಜಿಕವಾಗಿ ಶೈಕ್ಷಣಿಕವಾಗಿ ಮುಂದುವರಿಯ ಬೇಕಾಗಿದ್ದರೆ ಇವರಿಗೆ ಎಲ್ಲಾ ಸೌಲಭ್ಯಗಳನ್ನು ಕೊಡಬೇಕಾದ್ದು ಅತ್ಯಗತ್ಯ ಎಂಬುದು ನಿರ್ವಿವಾದವಾದ ವಿಷಯ. ಈ ಸೌಲಭ್ಯಗಳನ್ನು ದೊರಕಿಸಿ ಕೊಡವುದರ ಜೊತೆಗೆ ಅವರಿಗೆ ಸಾಮಾಜಿಕ ನ್ಯಾಯವನ್ನೂ ಕೂಡ ದೊರಕಿಸಿಕೊಬೇಕೆಂದು ಮಾನ್ಯ ನಿರ್ಣಯದ ಸೂಚಕರು ಕೇಳಿದ್ದಾರೆ. ಇದೇ ವಿಷಯದಲ್ಲಿ ಈ ನಾಲ್ಕನೇ ಪಂಚವಾರ್ಷಿಕ ಯೋಜನೆಯ ಕರಡನ್ನು ತಯಾರಿಸತಕ್ಕ ಸಂದರ್ಭದಲ್ಲಿ ನಮ್ಮ ಪ್ರಧಾನಿಯವರು ಅದರ ಪ್ರಸ್ತಾವನೆಯಲ್ಲಿ ಏನು ಹೇಳಿದ್ದಾರೆಂಬುದನ್ನೂ ಕೂಡ ನಾವು ಗಮನಿಸಬೇಕಾದ್ದು ಬಹು ಮುಖ್ಯವಾದಂಥ ವಿಷಯ. ನಮ್ಮ ಭಾರತ ಸರ್ಕಾರ ಇಡೀ ರಾಷ್ಟ್ರದಲ್ಲಿ ಕಳೆದ ಮೂರು ಯೋಜನೆಗಳನ್ನು ಕಾರ್ಯಗತ ಮಾಡತಕ್ಕ ಕಾಲದಲ್ಲಿ ಸುಮಾರು ೬೩ ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದರೂ ನಾವೇನು ಈಗ ಚರ್ಚೆಮಾಡುತ್ತಿದ್ದೇವೆ ಈ ಸೌಲಭ್ಯಗಳು ದುರ್ಬಲವರ್ಗದವರಿಗೆ ಹರಿದು ಬರಲಿಲ್ಲ ಅವು ದೊರೆಯಲಿಲ್ಲ ಎಂಬುದಾಗಿ ಅವರು ಹೇಳಿದ್ದಾರೆ. ಅಷ್ಟೇ ಅಲ್ಲದೆ ಹಾಲಿ ಆಡಳಿತವನ್ನು ನಡೆಸತಕ್ಕ ಸರಕಾರಗಳು ಈ ವಿಚಾರಕ್ಕೆ ಇನ್ನಾದರೂ ತಮ್ಮ ಗಮನಕೊಟ್ಟು ಕೆಲಸ ಮಾಡಬೇಕೆಂದು ಸೂಚನೆ ಮಾಡಿದ್ದಾರೆ.

12-00 NOON

ಅವರು ಜಯಪ್ರಕಾಶ ನಾರಾಯಣ್ ಅವರ ಅಭಯ ಮತ್ತು ಆಶ್ರಯವೆಂಬ ದೊಡ್ಡ ಮಾತುಗಳನ್ನು ಉಪಯೋಗಿಸಿದ್ದಾರೆ. ಬಹುಶಃ ಆ ವಿಷಯದಲ್ಲೂ ಸರಕಾರಕ್ಕೆ ಯಾವ ರೀತಿಯಲ್ಲಿಯೂ ಭಿನ್ನಾಭಿಪ್ರಾಯವಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳುವದಕ್ಕೆ ಇಷ್ಟಪಡುತ್ತೇನೆ. ಅವರು ಇದರ ಬಗ್ಗೆ ಒಂದು ಕಾರ್ಪೊರೇಷನ್ ಆಗಬೇಕೆಂದು ಚರ್ಚಿಸಿದ್ದಾರೆ. ಈ ಜೀತ ಪದ್ಧತಿ ಏನಿದೆಯೋ ಇದು ಮೈಸೂರ ರಾಜ್ಯದಲ್ಲಿನ ಅಂತರ ರಾಷ್ಟ್ರೀಯ ಕಾರ್ಮಿಕ ಸಂಸ್ಥೆಯಲ್ಲಿಯೂ ಮತ್ತು ಇಂಟರ್ ನ್ಯಾಶನಲ್ ಲೇಬರ ಆರ್ಗನೈಜೇಷನ್‌ಗಳಲ್ಲಿಯೂ ಚರ್ಚೆಗೆ ಬಂತೆಂಬ ಮಾತನ್ನು ಅವರು ಹೇಳಿದ್ದಾರೆ. ಬಹುಶಃ ಆರ್ಥಿಕವಾದಂಥ ನೆರವನ್ನು ಕೊಡುವ ಮುಖಾಂತರ ಅವರ ದುರ್ದೆಶೆ ಏನಿದೆಯೋ ಅದನ್ನು ನಿವಾರಿಸಲು ಅವರಿಗೆ ನಾವು ಹಣವನ್ನು ಒದಗಿಸುವದರ ಮೂಲಕ ಮಾಡಬಹುದೆಂಬುದನ್ನು ಮತ್ತು ಬಹುಶಃ ಈ ಜೀತ ಪದ್ಧತಿಯನ್ನು ಮನುಷ್ಯ ಮನುಷ್ಯನನ್ನು ಶೋಷಣೆ ಮಾಡುವ ಮಾತನ್ನೂ ಕೂಡ ಕೆಲವು ಸದಸ್ಯರು ಅವರ ಭಾಷಣದಲ್ಲಿ ಹೇಳಿದರು. ಆ ಶೋಷಣೆ ಇನ್ನೂ ನಮ್ಮಲ್ಲಿ ಇದ್ದೇ ಇದೆ. ಇದರಿಂದೇನಾಗಿದೆಯೆಂದರೆ ಸುಮುದ್ರವನ್ನೇ ಉದಾಹರಣೆಗಾಗಿ ತೆಗೆದು ಕೊಂಡರೆ, ದೊಡ್ಡ ಮೀನು ಸಣ್ಣ ಮೀನನ್ನೇ ನುಂಗಿತು ಎಂಬ ಹಾಗೆ ಆಗಿದೆ. It is when we open the book of nature, it is when we read the story of evaluation through millions of years written in block and tears, it is when we study the laws regulating life, the laws productive of development, how illusive this theory that God is Love.

ಈ ರೀತಿಯಾಗಿ ಅವರು ಒಂದು ಕಡೆ ದೊಡ್ಡ ಉದ್ಗ್ರಂಥದಲ್ಲಿ ಒಂದು ಮಾತನ್ನು ಹೇಳುತ್ತಾರೆ. ಆದ್ದರಿಂದ ಪ್ರಕೃತದಲ್ಲಿ ಹೊಂದಿಕೊಂಡು ಬಂದಿರತಕ್ಕದ್ದು ಅದರಲ್ಲಿಯೂ ನಿಜವಾಗಿ ಬಂದಿರತಕ್ಕದ್ದು ಶೋಷಣೆ ಎನ್ನುವುದು. ಈ ಶೋಷಣೆಯನ್ನು ಎಷ್ಟರ ಮಟ್ಟಿಗೆ ತಪ್ಪಿಸುವದಕ್ಕೆ ಸಾಧ್ಯವಿದೆ ಎನ್ನುವದೂ ಸಾಮಾಜಿಕವಾಗಿ ಸರ್ಕಾರದ ಜವಾಬ್ದಾರಿ ಇದೆಯೆಂದು ಈ ಸಂದರ್ಭದಲ್ಲಿ ನಾನಾಡರೂ ಹೇಳುವದಕ್ಕೆ ಇಷ್ಟಪಡುತ್ತೇನೆ. ಈ ದಿಶೆಯಲ್ಲಿ ಬಹುಶಃ ರಾಜಾಸ್ಥಾನದವರು ಈಗಾಗಲೇ ಒಂದು ಕಾನೂನನ್ನು ತೆಗೆದುಕೊಂಡು ಬಂದಿದ್ದಾರೆ. ನಮ್ಮಲ್ಲಿಯೂ ಕೂಡ ಏಕೆ ಒಂದು ಜೀತ ಪದ್ಧತಿಯನ್ನು ಹೋಗಲಾಡಿಸುವದಕ್ಕೆ ಅಂತಹ ಒಂದು ಕಾನೂನನ್ನು ಇಲ್ಲಿ ತರಬಾರದೆಂದು ಸರ್ಕಾರ ಈಗಾಗಲೇ ಆಲೋಚನೆ ಮಾಡುತ್ತಾ ಇದೆ. ನಿನ್ನೆ ನಾನು ಡೈರೆಕ್ಟರ್ ಜನರಲ್ ಆಫ್ ಬ್ಯಾಕವರ್ಡ ಕ್ಲಾಸಸ್ ಅವರೊಡನೆ ನಮ್ಮ ಸಮಾಜ ಕಲ್ಯಾಣ ಇಲಾಖೆಯ ಹಾಗೂ ಸಮಾಜ ಕಲ್ಯಾಣ ಶಾಖೆಯ ಸಚಿವ ಖಾತೆಗೆ ಸಂಬಂಧಪಟ್ಟಂತೆ ಕೆಲವಾರು ವಿಷಯಗಳನ್ನು ಚರ್ಚೆ ಮಾಡುವ ಕಾಲದಲ್ಲಿ ಇದನ್ನೂ ಕೂಡಾ ಮಾಡತಕ್ಕ ಅವಶ್ಯಕತೆ ಇದೆಯೆಂದು ಅವರು ಒತ್ತಾಯಪೂರ್ವಕವಾಗಿ ಹೇಳಿದ್ದಾರೆ. ಅದನ್ನು ಈ ಸಭೆಯಲ್ಲಿ ಹೇಳುವದಕ್ಕೆ ನಾನು ಬಹಳ ಸಂತೋಷಪಡುತ್ತೇನೆ. ಇದರ

ಬಗ್ಗೆ ಸರ್ಕಾರದವರು ಏನು ಮಾಡಿದ್ದಾರೆಂಬುದನ್ನು ಸ್ವಲ್ಪ ಹೇಳಬೇಕಾಗುತ್ತದೆ. ಆದರೆ ಏನೇನೂ ಮಾಡಿಲ್ಲವೆಂದು ಹೇಳುವದು ತಪ್ಪು. ಸಮಾಜ ಕಲ್ಯಾಣ ಇಲಾಖೆಯಲ್ಲಿ ಹರಿಜನರ ಅಭಿವೃದ್ಧಿಗೋಸ್ಕರವಾಗಿ ಯಾವ ಒಂದು ಕ್ಷೇತ್ರದಲ್ಲಿಯಾಗಲೀ ಎಸ್ಟು ಮಾಡಬೇಕೋ ಅಷ್ಟು ಮಾಡುವದಕ್ಕೆ ಸಾಧ್ಯವಾಗಲಿಲ್ಲವೆಂದು ಹೇಳುವದು ಸರಿ. ಆದರೆ ಅಭಿವೃದ್ಧಿ ಏನೂ ಆಗಲಿಲ್ಲವೆಂದು ಹೇಳಿದರೆ ಅದನ್ನು ಮಾತ್ರ ನಾನು ಒಪ್ಪುವದಕ್ಕೆ ಈ ಸಂದರ್ಭದಲ್ಲಿ ತಯಾರಾಗಿಲ್ಲ. ಅದರ ಜೊತೆಗೆ ಅವರಿಗೆ ತಲುಪತಕ್ಕ ಸೌಕರ್ಯಗಳು ನೇರವಾಗಿ ತಲುಪುತ್ತಾ ಇಲ್ಲವೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಇನ್ನು ಮಾನ್ಯ ಶ್ರೀ ಪ್ರಭಾಕರ್ ಅವರು ಮಾತನಾಡುತ್ತಾ ಒಂದು ಮಾತನ್ನು ಹೇಳಿದರು. ಮೇಲ್ಪಡೆ ಇರತಕ್ಕ ಜನರೇನು ಇದ್ದಾರೆಯೋ ಅವರು ಕೆಳಗಡೆಗೆ ಇರತಕ್ಕ ಜನರನ್ನು ಮೇಲಕ್ಕೆತ್ತಬೇಕೆಂದು ಹೇಳಿದರು. ಅದು ಉತ್ತಮವಾದ ಸಲಹೆ. ಆದರೆ ಈಗ ಏನಾಗಿದೆಯೆಂದರೆ, ಆ ರೀತಿಯಾಗಿ ಈಗ ಪ್ರಯತ್ನಮಾಡದೆ ಅವರನ್ನು ಇನ್ನೂ ಹಿಂದಕ್ಕೇ ತುಳಿಯಬೇಕೆಂಬ ಪ್ರಯತ್ನ ನಡೆಯುತ್ತಾ ಇದೆ. ಅದು ನಮ್ಮ ಸರ್ಕಾರದಲ್ಲಿದೆಯೆಂದು ಹೇಳಿದರು. ಒಂದು ಮಾತನ್ನು ಸಮಾಜ ಶಾಸ್ತ್ರಜ್ಞರು ಎಲ್ಲರೂ ಒಪ್ಪಿಕೊಂಡಿದ್ದಾರೆ. ಅದೇನಂದರೆ, There not only inequality but inequality is further graded in our Society. There is an ascending scale of reverence and descending scale of contempt. ಈ ರೀತಿಯಾಗಿ ನಮ್ಮ ಸಮಾಜದಲ್ಲಿರತಕ್ಕದ್ದು ಎಂಬುದನ್ನು ಒಪ್ಪಿಕೊಂಡಿದ್ದಾರೆ. ಆದರೆ ಇದರಲ್ಲಿ ಸಾಮಾಜಿಕ ಬದಲಾವಣೆಯಾಗಬೇಕಾದರೆ ಕೇವಲ ಒಂದು ದಿವಸದಲ್ಲಿ ಆಗುವದಿಲ್ಲ. ಇದು ವಿಚಾರಕ್ರಾಂತಿಯಾಗಿ ಯಾವ ಜನರು ನೊಂದಿದ್ದಾರೆಯೋ ಅವರಿಗಾಗಿ ಒಂದು ತ್ಯಾಗ ಬಲಿದಾನ ಮಾಡುವದಕ್ಕೆ ಎಲ್ಲರೂ ತಯಾರಾಗಿರಬೇಕು. ಸಾಮಾನ್ಯವಾಗಿ ಚರಿತ್ರೆಯನ್ನು ಓದಿದವರು ಯಾರೇ ಆಗಲಿ ಅವರು ಎಲ್ಲರೂ ಹೇಳುವಮು ಇಷ್ಟ. ಶ್ರೀ ಮಾನ್ಯ ಎಂ. ಎಸ್. ಕೃಷ್ಣನ್‌ರವರೂ ಸಹ ಅದನ್ನೇ ಹೇಳಿದ್ದಾರೆ. ಅದನ್ನು ನಿಜವಾಗಿ ಒಪ್ಪಬೇಕು. ಇನ್ನು ನಾನು ಈ ಒಂದು ಸಂದರ್ಭದಲ್ಲಿ ಹೆಚ್ಚಿಗೆ ಹೇಳುವದಕ್ಕೆ ಇಷ್ಟಪಡುವದಿಲ್ಲ. ಇನ್ನು ಮಾನ್ಯ ಶ್ರೀ ಕಬಾಡಿಯವರು ಒಂದು ಮಾತನ್ನು ಹೇಳಿದರು. ತಾಲೂಕ ಬೋರ್ಡಿನಲ್ಲಿ ಹರಿಜನರ ಅಭಿವೃದ್ಧಿಗಾಗಿ ಏನ್ನೊಂದು ಪರ್ಸೆಂಟ ಹಣವನ್ನು ಇಟ್ಟಿದ್ದಾರೋ ಅದು ಖರ್ಚಾಗುತ್ತಾ ಇಲ್ಲ. ಬಹುಭಾಗ ತಾಲೂಕುಗಳಲ್ಲಿ ಅವರ ಕಡೆ ಸ್ನೇಹಿತರೇ ಇರತಕ್ಕದ್ದು ಎಂಬುದಾಗಿ ಹೇಳಿದರು. ಅಲ್ಲಿನವರಲ್ಲಿ ಮಾನ್ಯ ಸದಸ್ಯರು ಬಹಳ ಕಳಕಳಿಯಿಂದ ಪ್ರಾರ್ಥನೆಮಾಡಿಕೊಳ್ಳಬೇಕೆಂದು ನಾನು ಹೇಳುತ್ತೇನೆ. ಯಾವ ಕಾರಣದಿಂದಾಗಲೀ ಎಲ್ಲಿಯೇ ಆಗಲೀ ಸೇಕಡಾ ೧೮ರಷ್ಟು ಖರ್ಚು ಅವರ ಅಭಿವೃದ್ಧಿಗಾಗಿ ಆಗಲೇಬೇಕು. ಅದಕ್ಕೆ ಕಡಿಮೆ ಖರ್ಚಾಗಲಿಕ್ಕೆ ಬಿಡುವುದಿಲ್ಲ. ಪ್ರತಿಯೊಂದು ಇಲಾಖೆಗೂ ಈಗಾಗಲೇ ಒಂದು ಸೂಚನೆಯನ್ನು ಕೊಟ್ಟಿದ್ದೇವೆ. ಈ ವರ್ಷ ಆ ರೀತಿಯಾಗಿ ಖರ್ಚಾಗದೇ ಇದ್ದರೂ ಮುಂದಿನ ವರ್ಷದಲ್ಲಿ ಆ ಸಾಲಿನ ಹಣದ ಜೋತೆಗೆ ಪೂರ್ತಿಯಾಗಿ ಎಲ್ಲ ಹಣವನ್ನೂ ಖರ್ಚುಮಾಡಬೇಕೆಂದು ಹೇಳಿದ್ದೇವೆ. ಅದರ

ಜೊತೆಗೆ ೧೭ ಕಾರ್ಯಕ್ರಮಗಳಿಗೆ ಆ ಹಣವನ್ನು ಖರ್ಚುಮಾಡಬೇಕೆಂದು ಈಗಾಗಲೇ ಎಲ್ಲ ಇಲಾಖೆಗಳಿಗೂ ಈ ಸರ್ಕಾರದಿಂದ ಆದೇಶವನ್ನೂ ಸಹ ಕೊಟ್ಟಿದ್ದೇವೆ. It is only illustrative but not exhaustive. ಇಂತಿಂಥ ವಿಷಯಗಳಿಗೇ ಆ ಹಣವನ್ನು ಖರ್ಚುಮಾಡಬೇಕು. ಬಹುಭಾಗದ ಹಣವನ್ನು ಹರಿಜನರ ಹಾಗೂ ಗಿರಿಜನರ ಮಕ್ಕಳ ವಿದ್ಯಾಭ್ಯಾಸಕ್ಕೋಸ್ಕರವೇ ಖರ್ಚುಮಾಡಬೇಕೆಂದು ತಿಳಿಸಲಾಗಿದೆ. ಕಮ್ಯೂನಿಟಿ ಇರ್ರಿಗೇಷನ್ ಸೆಂಟರ್ಸ್ ವಗೈರೆಗಳಿಗೆ ಹೆಚ್ಚಿಗೆ ಹಣವನ್ನು ಖರ್ಚುಮಾಡಬೇಕೆಂದು ಹೇಳಿದ್ದೇವೆ. ಸೇಕಡಾ ೭೫ರಷ್ಟು ಕೇವಲ ವಿದ್ಯಾಭ್ಯಾಸಕ್ಕೊಸ್ಕರವಾಗಿಯೇ ಖರ್ಚುಮಾಡುತ್ತಾ ಇದ್ದಾರೆಂಬುದನ್ನು ನಾವು ಅಲ್ಲಿ ಮರೆಯುವ ಹಾಗೆ ಇಲ್ಲ. ಮಾನ್ಯ ಶ್ರೀ ಲಿಂಗಪ್ಪನವರು ಮಾತನಾಡುತ್ತಾ ಕೆಲವಾರು ವಿಷಯಗಳನ್ನು ಹೇಳಿದ್ದಾರೆ. ಸೂಂಡೂರಿನಲ್ಲಿ ವಿದ್ಯಾಇಲಾಖೆಯನ್ನು ಬಹಳ ಚನ್ನಾಗಿ ನಡೆಸುತ್ತಿದ್ದಾರೆಂಬುದಾಗಿ ಹೇಳಿದರು. ಬಹುಶಃ ನಾನು ಹೇಳುತ್ತೇನೆ. ಅಂಥಾದ್ದನ್ನು ಮಾಡೋಣ. ಸರ್ಕಾರ ಮನಸ್ಸುಮಾಡಿದರೆ ಅದನ್ನು ಇನ್ನೂ ಚನ್ನಾಗಿ ಅಭಿವೃದ್ಧಿ ಮಾಡುವದಕ್ಕೆ ಸಾಧ್ಯವಿದೆ. ಹರಿಜನರಲ್ಲಿಯೂ ಬುದ್ಧಿವಂತರಾದ ಮಕ್ಕಳನ್ನಾಗಿ ಮಾಡುವದಕ್ಕೆ ಹಾಗೂ ಜ್ಞಾನಿಗಳನ್ನಾಗಿ ಮಾಡುವದಕ್ಕೆ ಅಂತಹ ಶಾಲೆಗಳು ಅತ್ಯಾವಶ್ಯಕ. ಪ್ರಾಥಮಿಕ ಶಾಲೆಯಿಂದ ಪ್ರೌಢಶಿಕ್ಷಣದವರೆಗೂ ಶಾಲೆಗಳನ್ನು ಮಾಡುವುದು ಅವಶ್ಯಕವಿದೆಯೆಂದು ನಾನು ಒಪ್ಪಿಕೊಳ್ಳುತ್ತೇನೆ. ಕಡ್ಡಾಯ ಶಿಕ್ಷಣವನ್ನು ಇಡೀ ದೇಶ್ಯಾದ್ಯಂತ ಆ ಜನಾಂಗವರಿಗೆ ಜಾರಿಗೆ ತರಬೇಕೆಂಬುದನ್ನು ನಾನು ಒಪ್ಪುತ್ತೇನೆ. ೧೨೦ ದಶಲಕ್ಷ ವಿದ್ಯಾರ್ಥಿಗಳು ಷೆಡ್ಯೂಲ್ಡ ಕ್ಯಾಸ್ಟಿನಲ್ಲಿ ಇಡೀ ಭರತಖಂಡದಲ್ಲಿ ಈಗ ಓದುತ್ತಿದ್ದಾರೆ. ಅನೇಕ ಲಕ್ಷಾಂತರ ಹರಿಜನ ಹಾಗೂ ಗಿರಿಜನ ವಿದ್ಯಾರ್ಥಿಗಳು ವಿಶ್ವವಿದ್ಯಾಲಯದಲ್ಲಿ ಅಧ್ಯಯನ ಮಾಡುತ್ತಿದ್ದಾರೆ. ಅವರೆಲ್ಲರಿಗೂ ಕೇಂದ್ರ ಸರ್ಕಾರದ ನೆರವಿನಲ್ಲಿ ವಿದ್ಯಾರ್ಥಿವೇತನವನ್ನು ಕೊಡುತ್ತಾರೆಂಬುದು ಮಾನ್ಯ ಸದಸ್ಯರ ಗಮನಕ್ಕೆ ಈಗಾಗಲೇ ಬಂದಿರುವ ವಿಷಯವಾಗಿದೆ. ಅದರ ಜೊತೆಗೆ ನಾನಾದರೂ ಕೂಡ ಬಹುಶಃ ಈ ಒಂದು ದೃಷ್ಟಿಯನ್ನು ಇಟ್ಟುಕೊಂಡು ಇನೇ ಪಂಚವಾರ್ಷಿಕ ಯೋಜನೆಯನ್ನು ಮಾಡುವ ಸಂದರ್ಭದಲ್ಲಿ ಇವರ ಅಭಿವೃದ್ಧಿಯ ಬಗ್ಗೆ ಕೇಂದ್ರ ಸರ್ಕಾರದಲ್ಲಿ ಕ್ವಾಂಟಿಫಿಕೇಷನ್, ಡಾಕ್ಯುಮೆಂಟೇಷನ್, ಮತ್ತು ಸ್ಪೆಸಿಫಿಕೇಶನ್ ಎಂಬೀ ಮೂರು ದೊಡ್ಡ ಮಾತುಗಳನ್ನು ಉಪಯೋಗಿಸಿದ್ದಾರೆ. ಆದರೆ ಈಗ ಈ ಜನಾಂಗದವರ ಅಭಿವೃದ್ಧಿಗೆ ಇಟ್ಟಿರತಕ್ಕ ಹಣ ಯಾವ ರೀತಿಯಲ್ಲಿಯೂ ಸಾಲುವುದಿಲ್ಲ. ಅದರ ಜೊತೆಗೆ ಬಹಳ ಹೆಚ್ಚಿನಮಟ್ಟದಲ್ಲಿ ಅವರ ಸಮಸ್ಯೆಗಳನ್ನು ಬಗೆಹರಿಸಬೇಕಾದರೆ ಇನ್ನೂ ಹೆಚ್ಚಿಗೆ ಹಣವನ್ನು ಬಡ್ಜೆಟ್ಟಿನಲ್ಲಿ ಇಡಬೇಕಾಗುತ್ತದೆ . ಏಕೆಂದರೆ ಅವರ ಸಮಸ್ಯೆಗಳು ಬಹಳವಾಗಿ ಇವೆ. ಯಾವ್ಯಾವುದೆಂಬುದನ್ನು ನಿರ್ದಿಷ್ಟ ಮಾಡಬೇಕಾಗಿದೆ ಎಂಬುದಾಗಿ ಅವರು ಹೇಳಿದ್ದಾರೆ. ಬಹುಶಃ ಮಾನ್ಯ ಶ್ರೀ ಕೋಣಂದೂರು ಲಿಂಗಪ್ಪನವರು ಮಾತನಾಡುತ್ತಾ ಅವರ ಬಗ್ಗೆ ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಏನೂ ಅಭಿವೃದ್ಧಿಯಾಗಲಿಲ್ಲವೆಂದು ಹೇಳಿದರು. 12 million children are hailing from sheduled caste communities. ಈಗಾಗಲೆ ೬೨ ಹಾಸ್ಟೆಲ್ ಕಟ್ಟಡಗಳನ್ನು ಕಟ್ಟಿಸುವುದಕ್ಕೆ

ಏರ್ಪಾಡುಮಾಡಿದ್ದೇವೆ. ಕೆಲವು ಕಡೆಗಳಲ್ಲಿ ಮಾತ್ರ ಸ್ವಲ್ಪ ಕೆಲಸ ಸ್ಥಗಿತವಾಗಿದೆ. ಅದರ ಬಗ್ಗೆಯೂ ಸೂಕ್ತ ಕ್ರಮವನ್ನು ತೆಗೆದುಕೊಂಡು ಉಳಿದಿರತಕ್ಕ ಎಲ್ಲಾ ಹಾಸ್ಟೆಲು ಗಳನ್ನೂ ಕೂಡ ಈ ಸೆಪ್ಟೆಂಬರಿನೊಳಗೇ ಮಾಡಿ ಮುಗಿಸಿಬೇಕೆಂದು ನಮ್ಮ ಇಲಾಖೆಗೆ ನಾನು ಬಹಳ ಕಟುವಾಗಿ ಹೇಳಿದ್ದೇನೆ. ಆ ವಿಚಾರ ನಮ್ಮ ಮಾನ್ಯ ಹಣಕಾಸಿನ ಸಚಿವರಿಗೆ ಕೂಡ ಗೊತ್ತಿದೆ. ಅವರು ಬಹಳ ಉದಾರಿಗಳು. ಮಾನ್ಯ ಮುಖ್ಯ ಮಂತ್ರಿಗಳೂ ಸಹ ಇಂತಹ ವಿಚಾರದಲ್ಲಿ ತುಂಬಾ ಉದಾರಿಗಳಾಗಿದ್ದಾರೆ. ಒಟ್ಟಿನಲ್ಲಿ ಹೇಳುವುದಾದರೆ, ಇಡೀ ಮಂತ್ರಿಮಂಡಲ ಅಂದರೆ ಈ ಸರ್ಕಾರ ನಾನು ಕೇಳಿದ ಪ್ರಕಾರ ನನ್ನ ಯೋಜನೆಗಳಿಗೆ ತುಂಬಾ ಸಹಕಾರಿಯಾಗಿದೆ. ಆದ್ದರಿಂದ ವೈಯಕ್ತಿಕ ವಾಗಿ ಅದಕ್ಕಾಗಿ ನನ್ನ ಎಲ್ಲಾ ಸಹೋದ್ಯೋಗಿಗಳಿಗೆ ನನ್ನ ಹೃತ್ಪೂರ್ವಕವಾದ ವಂದನೆಗಳನ್ನು ಈ ಸಂದರ್ಭದಲ್ಲಿ ಹರಿಜನರ ಪ್ರತಿನಿಧಿಯಾಗಿ ಹೇಳಬಯಸುತ್ತೇನೆ.

ಬಹುಶಃ ನಾನು ಯಾವ ಯೋಜನೆಯನ್ನು ಅವರ ಹತ್ತಿರ ತೆಗೆದುಕೊಂಡು ಹೋದರೂ ಆ ಯೋಜನೆಗೆ ಬೆಂಬಲವನ್ನು ಕೊಟ್ಟಿದ್ದಾರೆ ಎಂದು ಹರ್ಷದಿಂದ ಮತ್ತು ಅಮಿತಾನಂದದಿಂದ ಹೇಳುತ್ತೇನೆ. ಈ ರೀತಿಯ ಒಂದು ರೆಸಲ್ಯೂಶನ್ನನ್ನು ೧೯೭೨ ರಲ್ಲಿ ಎರಡನೆಯ ಅಧಿವೇಶನದಲ್ಲಿ ಸಹ ಮಾನ್ಯ ವಿರೂಪಾಕ್ಷಪ್ಪನವರು ತೆಗೆದುಕೊಂಡು ಬಂದಿದ್ದರು. ಆದೇ ರೀತಿ ಮಾನ್ಯ ಜಿ ಪುಟ್ಟಸ್ವಾಮಿಯವರು ೨೦೭೩ ಫೆಬ್ರುವರಿಯಲ್ಲಿ ಇಂಥ, ಒಂದು ನಿರ್ಣಯವನ್ನು ತೆಗೆದುಕೊಂಡು ಬಂದಿದ್ದರು. ಅವುಗಳನ್ನು ಈಗಾ ಗಲೇ ಸರ್ಕಾರ ತತ್ವಶಃ ಒಪ್ಪಿಕೊಂಡಿದೆ. ಕೇರಳ ಮತ್ತು ಪಂಜಾಬಿನಲ್ಲಿರುವಂತೆ ಇಲ್ಲಿಯೂ ಒಂದು ಹಿನಾನ್ಸಿಯಲ್ ಕಾರ್ಪೊರೇಶನ್ ಮಾಡುವುದರ ಅವಶ್ಯಕತೆ ಇದೆ ಎಂಬುದನ್ನು ಸರ್ಕಾರ ತತ್ವಶಃ ಒಪ್ಪಿದೆ. ನಮ್ಮ ಇಲಾಖೆಯ ಅಧಿಕಾರಿಗಳನ್ನು ಇದರ ಬಗ್ಗೆ ಅಧ್ಯಯನ ಮಾಡಲು ಕೇರಳ ಮತ್ತು ಪಂಜಾಬುಗಳಿಗೆ ಕಳಿಸಿ ಅವರಿಂದ ವರದಿ ಯನ್ನು ತರಿಸಿ ಯಾವರೀತಿ ಮಾಡುವುದಕ್ಕೆ ಸಾಧ್ಯ ಎಂಬುದರ ಬಗ್ಗೆ ತೀರ್ಮಾನ ತೆಗೆದುಕೊಂಡಿದ್ದೇವೆ. ಇದರ ಡಿಟೇಲ್ಸ್ ಹೆಚ್ಚಿಗೆ ಹೇಳುವುದರ ಅವಶ್ಯಕತೆ ಇಲ್ಲವೆಂದು ಕಾಣುತ್ತದೆ.

ಮಾನ್ಯ ಸದಸ್ಯರು ತಮ್ಮ ನಿರ್ಣಯದಲ್ಲಿ ಇದನ್ನು ೫ನೇ ಯೋಜನೆಯ ಕಾಲ ದಲ್ಲಿ ಕಾರ್ಯಗತ ಮಾಡಬೇಕೆಂದು ಹೇಳಿದ್ದಾರೆ. ಬಹುಶಃ ಇದು ನಾಲ್ಕೈದು ತಿಂಗ ಳಲ್ಲಿ ಒಂದು ರೂಪವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆ ಎಂದು ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಯವರು ಸಹ ನನಗೆ ಬೇರೆ ರಾಜ್ಯಗಳಿಗೆ ಹೋಗಿ ನೋಡಿ ಕೊಂಡು ಬನ್ನಿ ಆ ಮೇಲೆ ಅದರಂತೆ ಮಾಡಬಹುದು ಎಂದು ಹೇಳಿದ್ದಾರೆ.

ಇನ್ನು ಪುನರ್‌ವಸತಿ ಆಗಬೇಕೆಂದು ಮಾನ್ಯ ಶಾಮಣ್ಣನವರು, ಲಿಂಗಪ್ಪನವರು ಹಾಗೂ ಇನ್ನಿತರ ಸದಸ್ಯರು ಹೇಳಿದ್ದಾರೆ. ಬಹುಶಃ ಮಿನಿಮಂ ವೇಜಸ್ ಆಕ್ಟ್ ಕಾರ್ಯರೂಪಕ್ಕೆ ಬಾರದಿರುವುದರಿಂದ ಇದನ್ನು ಕಾರ್ಯಗತ ಮಾಡಲಿಕ್ಕಾಗಲಿಲ್ಲ ವೆಂಬುದನ್ನು ಮಾನ್ಯ ಸದಸ್ಯರೊಬ್ಬರೇ ಹೇಳಿದ್ದಾರೆ. ಮೈಸೂರು ರಾಜ್ಯದಲ್ಲಿ ಸುಮಾರು ೧೬೦ ಲಕ್ಷ ಜನರು ಬಡತನದ ಅವಸ್ಥೆಯಲ್ಲಿದ್ದಾರೆ. ಇವರಿಗೆ ಸಮಾಜ ಕಲ್ಯಾಣ

ಇಲಾಖೆಯಿಂದ ಮಾತ್ರವಲ್ಲ, ಇತರ ಬೇರೆ ಇಲಾಖೆಗಳಿಂದ ಸಹ ಮಿನಿಮಂ ನೀಡ್ಸ್ ಏನಿವೆ, ಅವುಗಳನ್ನು ಒದಗಿಸಿಕೊಡಬೇಕೆಂದು ನಿರ್ದೇಶನವನ್ನು ಕಳಿಸಿದ್ದೇವೆ. ಮಾನ್ಯ ಹಣಕಾಸಿನ ಸಚಿವರು ಈ ವಿಚಾರದಲ್ಲಿ ಬಹಳ ಉದಾರವಾಗಿ ಸಹಾಯ ಮಾಡಿದ್ದಾರೆ. ಆದರಲ್ಲೂ ಕಡ್ಡಾಯವಾದ ಶಿಕ್ಷಣವನ್ನು ಹರಿಜನರ ಮಕ್ಕಳಿಗೆ ಕೊಡತಕ್ಕ ವಿಚಾರದಲ್ಲಿ ಹಣಕಾಸಿನ ಮಂತ್ರಿಯವರು ಒಪ್ಪುವುದು ಕಷ್ಟ ಎಂಬ ಶಂಕೆಯನ್ನು ಕೆಲವು ಸದಸ್ಯರು ವ್ಯಕ್ತಪಡಿಸಿದ್ದಾರೆ. ಆದರೆ ಆ ಮಾತು ಸರಿಯಾದುದಲ್ಲ. ಅವರು ಈ ವಿಚಾರದಲ್ಲಿ ತೋರಿಸಿದಂತಹ ಆಸಕ್ತಿಯನ್ನು ಈ ವರೆಗೆ ಯಾವ ಹಣಕಾಸಿನ ಸಚಿವರೂ ತೋರಿಸಿಲ್ಲ. ಅದಕ್ಕಾಗಿ ಅವರಿಗೆ ನಮ್ಮ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಹಾಗೆಯೇ ಮಾನ್ಯ ಶಾಮಣ್ಣನವರು ಸ್ಪೆಶಲ್ ಕೋಚಿಂಗ್ ಒದಗಿಸಿ ಮತ್ತು ವಾತಾವರಣ ಬದಲಾವಣೆ ಯಾಗುವಂತೆ ಮಾಡಬೇಕೆಂದು ಸಲಹೆ ಮಾಡಿದ್ದಾರೆ. ನಮ್ಮ ಸರ್ಕಾರದ ಉದ್ದೇಶ ವಾದರೂ ಅಷ್ಟೆ. ಬಡಜನರ ಬಗ್ಗೆ ಲೆವಲ್ ಆಫ್ ಎಂಪ್ಲಾಯಮೆಂಟ್ ಜಾಸ್ತಿ ಮಾಡ ಬೇಕೆಂಬುದು. ಆಗ ಈ ಸೌಲಭ್ಯವು ಅವರಿಗೆ ತಲಪುತ್ತದೆ. ಈ ಜನರಿಗೆ ಕುಡಿಯುವ ನೀರಿನ ಸೌಕರ್ಯ, ಉದ್ಯೋಗ, ಹಾಗೂ ಮತ್ತಿತರ ಮೂಲಭೂತವಾಗಿ ಬೇಕಾಗಿರುವ ಅವಶ್ಯಕತೆಗಳನ್ನು ಒದಗಿಸಬೇಕೆಂದು ದಿ. ಅಂಬೇಡ್ಕರ್ ಸಹ ಹಲವಾರು ಬಾರಿ ಹೇಳಿ ದ್ದಾರೆ. ಇದನ್ನು ಪೂರೈಸುವುದಕ್ಕೆ ಪ್ರತಿಯೊಂದು ಇಲಾಖೆಯಲ್ಲಿಯೂ ಗಣನೀಯ ವಾದಷ್ಟು ಹಣವನ್ನು ತೆಗೆದು ಇಟ್ಟು ತಕ್ಕ ಕಾರ್ಯಕ್ರಮಗಳನ್ನು ಹಾಕಬೇಕೆಂದು ನಿರ್ದೇಶನಗಳನ್ನು ಕೊಟ್ಟಿದ್ದೇವೆ.

ಇನ್ನು ಕೊನೆಯದಾಗಿ ಒಂದು ಮಾತನ್ನು ಹೇಳುತ್ತೇನೆ. ಮಾನ್ಯ ಸದಸ್ಯರು ಇನ್ನೂ ಇತರ ಅನೇಕ ಸಮಸ್ಯೆಗಳನ್ನು ನಮ್ಮ ಗಮನಕ್ಕೆ ತಂದಿದ್ದಾರೆ. ಅದರಲ್ಲಿ ಫಿನಾನ್ಸಿಯಲ್ ಕಾರ್ಪೊರೇಷನ್ ಮುಖೇಣ ವಿದ್ಯಾಭ್ಯಾಸ ಪ್ರಗತಿಗೂ ಆರ್ಥಿಕ ಸಹಾಯವನ್ನು ಕೊಡಬೇಕೆಂದು ಹೇಳಿದ್ದಾರೆ. ಅದನ್ನೂ ಸಹ ಕಾರ್ಯಗತ ಮಾಡು ವುದಕ್ಕೆ ಪರಿಶೀಲನೆ ಮಾಡುತ್ತೇವೆ. ಯಾರಾದರೂ ಖಾಸಗೀ ಹರಿಜನ ಸಂಸ್ಥೆ ಗಳನ್ನು ಸ್ಥಾಪನೆ ಮಾಡಿದರೂ ಸಹ ಅದಕ್ಕೆ ಸಹಾಯ ಮಾಡುತ್ತೇವೆ. ಈಗಾಗಲೇ ದಿ. ಗೋಪಾಲಸ್ವಾಮಿ ಐಯ್ಯಂಗಾರ ಸಂಸ್ಥೆ, ಬಾಪೂಜಿ ಸಂಸ್ಥೆ ಹಾಗೂ ಜಗಜೀವನರಾಂ ಸಂಸ್ಥೆ ಇತ್ಯಾದಿಗಳಿಗೆ ಸಹಾಯವನ್ನು ಕೊಟ್ಟಿದ್ದೇವೆ. ಬೇರೆ ರಾಜ್ಯಗಳಲ್ಲಿ ಇಂಟರೆಸ್ಟ್ ಫ್ರೀ ಲೋನ್ ಸಹ ಕೊಡುತ್ತಿದ್ದಾರೆಂದು ಕೆಲವರು ಹೇಳಿದರು ಅವುಗಳೆಲ್ಲವನ್ನು ಸಹ ಮನಸ್ಸಿನಲ್ಲಿಟ್ಟು ಮುಂದೆ ಇದನ್ನು ಮಾಡುವಾಗ ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳುತ್ತೇನೆ.

ಈಗಾಗಲೇ ಸಮಾಜ ಕಲ್ಯಾಣ ಇಲಾಖೆಯ ನಿರ್ದೇಶಕರಿಗೆ ಸರ್ಕಾರ ನಿರ್ದೇಶ ನವನ್ನು ಕೊಟ್ಟು ಪಂಜಾಬ್, ಕೇರಳ ಈ ಪ್ರದೇಶಗಳಿಗೆ ಒಂದು ಸ್ಟಡಿ ಟೀಮನ್ನು ಕಳುಹಿಸಬೇಕು, ಯಾರಾದರೂ ಒಬ್ಬರು ಸೀನಿಯರ್ ಆಫೀಸರು ಅಥವಾ ನಿವೃತ್ತ ರಾದ ಒಳ್ಳೆಯ ಅಧಿಕಾರಿ ಇದ್ದರೆ ಅವರು ಆ ಸ್ಟಡಿ ಟೀಮಿನ ಮುಖಂಡತ್ವವನ್ನು ವಹಿ ಸುವಂತೆಯೆ ಒಂದು ವೇಳೆ ಸ್ಟಡಿ ಟೀಮು ಮಾಡುವುದಕ್ಕೆ ಸಾಧ್ಯವಿಲ್ಲದಿದ್ದರೆ ಸಮಾಜ

ಕಲ್ಯಾಣ ಇಲಾಖೆಯ ಸೀನಿಯರ್ ಅಧಿಕಾರಿಗಳನ್ನು ಪಂಜಾಬ, ಕೇರಳ ರಾಜ್ಯಗಳಿಗೆ ಕಳಹಿಸಿ ಅಲ್ಲಿನ ಮಾಹಿತಿಯನ್ನು ತರಿಸಿಕೊಳ್ಳಬೇಕೆಂದು ಹೇಳಿದ್ದೇವೆ. ಈಗ ಮಾನ್ಯ ಸದಸ್ಯರಾದ ಶ್ರೀಮಾನ್ ಜಯಪ್ರಕಾಶ ನಾರಾಯಣ್ ಅವರು ಈ ಸಭೆಯ ಮುಂದೆ ಒಂದು ಫೈನಾನ್ಸ್ ಕಾರ್ಪೂರೇಷನ್ ಮಾಡಬೇಕು ಎಂದು ತಂದಿರತಕ್ಕ ಖಾಸಗಿ ಠರಾವನ್ನು ನಾವು ತಾತ್ವಿಕವಾಗಿ ಒಪ್ಪಿಕೊಂಡಿದ್ದೇವೆ ಆದ್ದರಿಂದ ಮಾನ್ಯ ಸದಸ್ಯ ಶ್ರೀ ಜಯಪ್ರಕಾಶ ನಾರಾಯಣ್ ಅವರು ತಮ್ಮ ಈ ಒಂದು ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳಬೇಕು ಎಂದು ಅವರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಮಾನ್ಯ ಸದಸ್ಯರು ನಮ್ಮ ಸಪರ್ಣ ಹಿಂದೂ ಸ್ನೇಹಿತರು ಅನೇಕರು ಸಮಾಜ ಕಲ್ಯಾಣ ಇಲಾಖೆಯ ಬೇಡಿಕೆಗಳು ಈ ಸಭೆಯ ಮುಂದೆ ಬಂದಾಗ ಮಾತನಾಡಿ ಅನೇಕ ಸಲಹೆಗಳನ್ನು ಕೂಟ್ಟಿದ್ದಾರೆ. ಈಗ ಈ ಸಭೆಯ ಮುಂದೆ ಬಂದಿರತಕ್ಕ ಈ ಖಾಸಗೀ ಠರಾವಿನ ಮೇಲೆ ಮಾತನಾಡುತ್ತಾ ಮಾನ್ಯ ಸದಸ್ಯರು ಅನೇಕ ಅಮೂಲ್ಯವಾದ ಸಲಹೆಗಳನ್ನು ಕೊಟ್ಟಿದ್ದಾರೆ ಈ ಎಲ್ಲಾ ಸಲಹೆಗಳನ್ನೂ ಪರಿಶೀಲನೆ ಮಾಡಿ ಯಾವ ಸಲಹೆಯನ್ನು ಎಷ್ಟರಮಟ್ಟಿಗೆ ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿದೆ ಎಂಬುದನ್ನು ಈ ಉದ್ದೇಶಿತ ಪಂಚವಾರ್ಷಿಕ ಯೋಜನೆಯಲ್ಲಿ ಅನುಸೂಚಿತ ಹಾಗೂ ಅನುಸೂಚಿತ ಆದಿಮ ಜಾತಿಗಳವರ ಸಲುವಾಗಿರತಕ್ಕ ಯೋಜನೆಗಳನ್ನು ಕಾರ್ಯಗತಗೊಳಿಸುವ ಬಗ್ಗೆ, ಸಹಾಯ ನೀಡಲು ವಿತ್ತೀಯ ಸಂಸ್ಥೆಯನ್ನು ಮಾಡತಕ್ಕ ಸಂದರ್ಭದಲ್ಲಿ ಪರಿಶೀಲನೆ ಮಾಡುತ್ತೇವೆಂದು ಹೇಳಿ ಅಮೂಲ್ಯವಾದ ಸಲಹೆಗಳನ್ನು ಕೊಟ್ಟಿರತಕ್ಕ ಮಾನ್ಯ ಸದಸ್ಯರಿಗೆ ಹೃತ್ಪೂರ್ವಕವಾಗಿ ವಂದಿಸಿ ಶ್ರೀಮಾನ್ ಜಯಪ್ರಕಾಶ್ ನಾರಾಯಣ್ ಅವರು ತಮ್ಮ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಂಡು ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ (ಸಿರಸಿ) — ಮಾನ್ಯ ಸಭಾಧ್ಯಕ್ಷರೇ, ಈ ರಾಜ್ಯದ ಸುಮಾರು ೫೦ ಲಕ್ಷ ಜನ ನಿರ್ಗತಿಕರು, ಸಾಮಾಜಿಕ ಆರ್ಥಿಕ ಹಾಗೂ ಶೈಕ್ಷಣಿಕವಾಗಿ ನೊಂದ ನೈಜವಾದ ಸ್ಥಿತಿಯನ್ನು ಅರಿತಂತಹ ಮಾನ್ಯ ಮುಖ್ಯ ಮಂತ್ರಿಗಳು, ಮಾನ್ಯ ಅರ್ಥ ಸಚಿವರು ಮತ್ತು ಎಲ್ಲಕ್ಕಿಂತ ಮಿಗಿಲಾಗಿ ಮಾನ್ಯ ಸಮಾಜಕಲ್ಯಾಣ ಮಂತ್ರಿಗಳು ನಿರ್ಣಯದ ಬಗ್ಗೆ ಹೊಂದಿರುವಂತಹ ಆಸಕ್ತಿ ಮತ್ತು ಈ ಸಂಬಂಧದಲ್ಲಿ ರಾಜ್ಯ ಸರ್ಕಾರದವರು ತೆಗೆದುಕೊಂಡಿರುವಂತಹ ಕೆಲವು ತೀರ್ಮಾನಗಳನ್ನು ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಮನೆಯ ಮುಂದೆ ಮಂಡಿಸಿದ್ದಾರೆ. ಜೊತೆಗೆ ಈ ಮನೆಯ ಎಲ್ಲಾ ಪಕ್ಷದ ಸದಸ್ಯರೂ ಈ ನಿರ್ಣಯವನ್ನು ಒಪ್ಪಿದ್ದಾರೆ. ಇದನ್ನು ಸರ್ಕಾರದವರು ಅರಿತುಕೊಂಡಿದ್ದಾರೆ. ಹರಿಜನಗಿರಿಜನರ ನೈಜವಾದ ಸ್ಥಿತಿಯನ್ನು ಸರ್ಕಾರದ ಮಂತ್ರಿಗಳು ಅರಿತುಕೊಂಡು ಅವರ ಅಭ್ಯುದಯವನ್ನು ಮಾಡಿ ಸರ್ವಾಂಗ ಸುಂದರವಾದ ಸಮಾಜವಾದದ ಒಂದು ಸರ್ವೋದಯ ಸಮಾಜವನ್ನು ರಚನೆ ಮಾಡತಕ್ಕ ರೀತಿಯಲ್ಲಿ ಅಭಿಪ್ರಾಯವನ್ನು ಸೂಚಿಸಿದ್ದಾರೆ. ಯೋಜನಾ ಮಂಡಲಿಯವರು ಇದನ್ನು ಒಪ್ಪಿದ್ದಾರೆಂದೂ ಕೇಂದ್ರ ಸರ್ಕಾರದವರು ಈ ಬಗ್ಗೆ

ಯೋಜನೆಗಳನ್ನು ಮಾಡುತ್ತಿದ್ದಾರೆ ಎಂದೂ ರಾಜ್ಯ ಸರ್ಕಾರದವರೂ ಈ ಬಗ್ಗೆ ಆಸಕ್ತಿ ತೀರ್ಮಾನವನ್ನು ತೆಗೆದುಕೊಂಡಿದ್ದಾರೆ ಎಂದೂ ತತ್ವದ ದೃಷ್ಟಿಯಿಂದ ಈ ನಿರ್ಣಯವನ್ನು ಒಪ್ಪಿಕೊಂಡಿದ್ದಾರೆಂದೂ ಇದನ್ನು ಕಾರ್ಯಗತ ಮಾಡಲು ತೀರ್ಮಾನ ತೆಗೆದುಕೊಳ್ಳುತ್ತೇವೆ ಎನ್ನುತಕ್ಕ ರೀತಿಯಲ್ಲಿ ಮಾನ್ಯ ಸಮಾಜಕಲ್ಯಾಣ ಶಾಖೆಯ ಮಂತ್ರಿಗಳು ಈ ಮನೆಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿರುವುದರಿಂದ ಹರಿಜನಗಿರಿಜನರ ಅಭಿವೃದ್ಧಿಗೆ ಪ್ರತ್ಯೇಕ ಫೈನಾನ್ಸ್ ಕಾರ್ಪೊರೇಷನ್ ರಚನೆಯಾಗುತ್ತದೆ ಎಂದು ತತ್ವಶಃ ಈ ಮನೆಯಲ್ಲಿ ಎಲ್ಲ ಮಾನ್ಯ ಸದಸ್ಯರೂ ನಂಬಿಕೊಂಡು ಒಪ್ಪಿಕೊಂಡಿರುವುದರಿಂದ ನಾನೂ ಸಹ ತತ್ವಶಃ ಇದನ್ನು ಒಪ್ಪಿ ನಾನು ನನ್ನ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳುತ್ತೇವೆ.

MR. DEPUTY SPEAKER.—Is it a pleasure of the House that the Resolution be withdrawn ?

(Some hon. Members raised dissentient voice)

MR. DEPUTY SPEAKER.–Under Rule 275 of the Rules of Procedure and conduct of business in the Mysore Legislative Assembly, I will have put the resolution to vote. The question is:

> "That this Assembly is of the opinion that a Scheduled Castes and Scheduled Tribes Financial Corporation be constituted to suggest ways and means to improve the economic conditions of Scheduled Castes and Scheduled Tribes people in the State and also to assist to implement the schemes meant for the Scheduled Castes and Scheduled Tribes in the proposed Fifth five year plan."

THE RESOLUTION WAS NEGATIVED

MR. DEPUTY SPEAKER.—Shri T. R. Shamanna. may move his Resolution No.3.

(iii) re: Abolition of Horse Races in Bangalore and Mysore Cities.

Sri T. R. SHAMANNA.— I beg to move.—

> "That this Assembly recommends to Government to take steps abolish conducting of the horse races in Bangalore & Mysore Cities in order to protect the people from the evil effects of the race and betting."

MR. DEPUTY SPEAKER.— Resolution moved.—

"That this Assembly recommends to Government to take steps to abolish conducting of the horse races in Bangalore and Mysore cities in order to protect the people from the evil effects of the race and betting."

†ಶ್ರೀ ಟಿ. ಆರ್. ಶಾಮಣ್ಣ (ಕೋಟೆ).— ಮಾನ್ಯ ಉಪಾಧ್ಯಕ್ಷರೇ, ಈ ಕುದುರೆ ಜೂಜಿನ ಬಗ್ಗೆ ಹೆಚ್ಚಿನ ಮಾಹಿತಿಯುಳ್ಳಂಥಾ ನಮ್ಮ ಸ್ನೇಹಿತರಾದ ಶ್ರೀಮಾನ್ ಕೆ. ಎಂ. ನಾಗಣ್ಣನವರು ಇಲ್ಲಿ ಇದ್ದಿದ್ದರೆ ಬಹಳ ಚೆನ್ನಾಗಿತ್ತು. ಅವರು ಈ ಬಗ್ಗೆ ಚೆನ್ನಾಗಿ ಅರಿತುಕೊಂಡಿದ್ದಾರೆ. ನಾನು ಕುದುರೆ ಜೂಜಿನ ಆವರಣಕ್ಕೆ ಹೋಗಿಲ್ಲ. ಆದರೆ ಅದರಿಂದ ದುಷ್ಪರಿಣಾಮ ಇದೆ ಎನ್ನತಕ್ಕಂಥಾದ್ದನ್ನು ನಾನು ಅನೇಕ ಸಂದರ್ಭಗಳಲ್ಲಿ, ಅನೇಕ ವಿಧದಲ್ಲಿ ಕೇಳಿದ್ದೇನೆ. ಆದ್ದರಿಂದ ಈ ನಿರ್ಣಯದ ಬಗ್ಗೆ ಮಾತನಾಡುವುದಕ್ಕೆ ಶ್ರೀಮಾನ್ ನಾಗಣ್ಣನವರು ಬರುತ್ತಾರೆ. ಅವರು ಈ ಬಗ್ಗೆ ಸ್ಪಷ್ಟವಾಗಿ ಹೇಳುತ್ತಾರೆ ಎಂದು ನಾನು ತಿಳಿದುಕೊಂಡಿದ್ದೆ. ಕಾರಣಾಂತರಗಳಿಂದ ಅವರು ಖಾಯಿಲೆ ಮಲಗಿರುವುದರಿಂದ ಈ ವಿಚಾರವನ್ನು ನನಗೆ ತಿಳಿದ ಮಟ್ಟಿಗೆ ಹೇಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ಈಗ ನಮ್ಮ ರಾಜ್ಯದಲ್ಲಿರತಕ್ಕ ಅನೇಕ ದುಷ್ಟಟಗಳ ಪೈಕಿ ಕುದುರೆ ಜೂಜು ಅತಿ ಮುಖ್ಯವಾದದು ಎಂದು ನಾನು ತಿಳಿದುಕೊಂಡಿದ್ದೇನೆ ಸಮಾಜದಲ್ಲಿ ನಮ್ಮ ಆರ್ಥಿಕ ಹೀನತೆಗೆ ಮತ್ತು ಜನಗಳ ನೈತಿಕ ಮಟ್ಟದ ಅಧೋಗತಿಗೆ ಅನೇಕ ದುಷ್ಟಟಗಳು ಮುಖ್ಯ ಕಾರಣ. ಒಂದುಕಡೆ ಕುಡಿಯ ತಕ್ಕದ್ದು, ಮತ್ತೊಂದು ಕಡೆ ಜೂಜುಗಾರಿಕೆ, ಮತ್ತೊಂದು ಕಡೆ ಕಂಡಹಾಗೆ ಮತ್ತು ಕಾಣದ ಹಾಗೆ ಸೂಳೆಗಾರಿಕೆಯನ್ನು ನಡೆಸಿಕೊಂಡು ಹೋಗುತಕ್ಕಂಥಾದ್ದು. ಮದ್ಯ ಪಾನದ ಹಾವಳಿ ಇವುಗಳನ್ನು ನಡೆಸುವುದರಿಂದ ಜನಗಳ ಆರ್ಥಿಕ ಪರಿಸ್ಥಿತಿ ಅಧಃಪತನವಾಗುತ್ತದೆ. ಜನಗಳ ಕೌಟುಂಬಿಕ ವಾತಾವರಣ ಹಾಳಾಗುತ್ತದೆ. ಹೆಂಡತಿ ಮಕ್ಕಳು ಕಷ್ಟಕ್ಕೆ ಈಡಾಗುತ್ತಾರೆ. ಈಗ ಈ ಜೂಜುಕಟ್ಟೆಯಿಂದ ಆಗತಕ್ಕಂಥಾ ಪ್ರಯೋಜನ ಏನೆಂಬುದನ್ನು ಯೋಚನೆ ಮಾಡಬೇಕಾಗಿದೆ. ಜೂಜುಕಟ್ಟೆಯಿಂದ ಬರತಕ್ಕ ವರಮಾನದಲ್ಲಿ ಯಾರೋ ಅದೃಷ್ಟ ಇರತಕ್ಕವರಿಗೆ ೫೦ ಭಾಗ ಸೇರಿದರೆ ಮತ್ತೆ ೫೦ ಭಾಗ-ಬೇರೆ ರೀತಿಯಲ್ಲಿ ಖರ್ಚಾಗುತ್ತದೆ.

2-30 P. M.

ಸರ್ಕಾರಕ್ಕೆ ಇದರಿಂದ ಸ್ವಲ್ಪ ವರಮಾನ ಬರುತ್ತದೆ ಎಂಬುದನ್ನು ಬಿಟ್ಟರೆ, ಉಳಿದಂತೆ ಇದರಿಂದ ಜನರಿಗೆ ಯಾವ ರೀತಿಯ ಪ್ರಯೋಜನವೂ ಇಲ್ಲ. ಇದರಿಂದ ಜನರ ನೈತಿಕಮಟ್ಟ ಹಾಳಾಗುತ್ತಿದೆ. ಈ ಕುದುರೆ ಜೂಜಿನಿಂದ ಕೆಲವರಿಗೆ ಹಣ ದೋಚವುದಕ್ಕೆ ಅವಕಾಶವಾಗಿದೆಯೇ ಹೊರತು, ಸಮಾಜಕ್ಕೆ ಯಾವ ವಿಧವಾದಂಥ

ಒಂದು ಸೌಲಭ್ಯವೂ ಇಲ್ಲ. ಹಳೆಯ ಕಾಲದ ಸಂಪ್ರದಾಯಗಳನ್ನು ಬಿಟ್ಟುಬಿಡ ಬೇಕೆಂದು ನಾವು ಹೇಳುತ್ತಿರುವಾಗ, ಹಿಂದಿನ ಕಾಲದಿಂದ ಬಂದಿರುವ ಈ ದುಶ್ಚಟ ವನ್ನು ನಿಲ್ಲಿಸುವ ಬಗ್ಗೆ ಚಳುವಳಿ ನಡೆಯದಿರುವದನ್ನು ನೋಡಿದರೆ ನನಗೆ ವ್ಯಸನ ವಾಗುತ್ತಿದೆ. ಬಹಳ ಅನುಕೂಲ ಸ್ಥಿತಿಯಲ್ಲಿರುವವರು ಮತ್ತು ಹೆಚ್ಚಿನ ರೀತಿಯಲ್ಲಿ ಹಣ ಗಳಿಸುತ್ತಿರುವವರು ಈ ಕುದುರೆ ಜೂಜನ್ನು ನಡೆಸುತ್ತಿದ್ದಾರೆ. ಆದರೆ ಹೆಚ್ಚಾಗಿ ಹಣ ಕಳೆದುಕೊಳ್ಳುವವರು ಯಾರೆಂದರೆ, ಸಾಧಾರಣವಾಗಿ ಬಡವರು ಮತ್ತು ಮಧ್ಯಮವರ್ಗದವರು. ಈ ಒಂದು ದುಶ್ಚಟಕ್ಕೆ ಒಳಗಾಗಿ ಅನೇಕರು ತಮ್ಮ ಮನೆ ಮಠಗಳನ್ನು ಕಳೆದುಕೊಂಡಿದ್ದಾರೆ. ಅಡಿಗೆ ಮಾಡುವವರು, ವಿಧವೆಯರು ಮತ್ತು ಬಡವರು ಸಹ ಈ ಒಂದು ಜಟಕ್ಕೆ ಒಳಗಾಗಿದ್ದಾರೆ. ಬೆಂಗಳೂರು ಕಾರ್ಪೊರೇಷನ್ ನವರು ಕುದಾಯ ವಸೂಲಿ ಮಾಡುವ ಕಾಲ ಮತ್ತು ಈ ಕುದುರೆ ಜೂಜು ಪ್ರಾರಂಭವಾಗುವುದು ಸಾಮಾನ್ಯವಾಗಿ ಹೊಂದಿಕೊಂಡಿರುವುದರಿಂದ, ಕಾರ್ಪೊರೇಷನ್ ನೌಕರರಲ್ಲಿ ಕೆಲವರು ವಸೂಲಿ ಮಾಡಿದ ಮನೆ ಕಂದಾಯವನ್ನು ಕುದುರೆ ಜೂಜಿಗೆ ಕಟ್ಟಿ, ಕೊನೆಗೆ ಕೆಲಸ ಕಳೆದುಕೊಳ್ಳುತ್ತಿರುವುದಲ್ಲದೆ, ಕಾರ್ಪೊರೇಷನ್ನಿಗೂ ಕೆಟ್ಟ ಹೆಸರು ತಂದಿದ್ದಾರೆ ಕುದುರೆ ಜೂಜು ನಡೆಯುವ ಕಾಲದಲ್ಲಿ ಸರ್ಕಾರಿ ನೌಕರರಲ್ಲಿ ಕೆಲವರು ತಮ್ಮ ಕೆಲಸ ಕಾರ್ಯ ಬಿಟ್ಟು ಕುದುರೆ ಜೂಜಿಗೆ ಹೋಗುವವರಿದ್ದಾರೆ. ಕುದುರೆ ಜೂಜಿನಿಂದ ಸರ್ಕಾರಕ್ಕೆ ಸ್ವಲ್ಪ ವರಮಾನ ಬರುವುದನ್ನು ಬಿಟ್ಟರೆ, ಉಳಿದಂತೆ ಇದರಿಂದ ಏನು ಪ್ರಯೋಜನವಾಗುತ್ತಿದೆ ಎಂಬ ಬಗ್ಗೆ ನಾವು ಯೋಚನೆ ಮಾಡಬೇಕಾಗಿದೆ. ಈ ಕುದುರೆಗಳನ್ನು ಬೆಳೆಸುವವರು ದೊಡ್ಡ ದೊಡ್ಡ ಹಣವಂತರು. ಮಲ್ಟಿಮಿಲಿನಿಯರ್ಸ್ ಆಗಿರುವವರೇ ಸ್ಪೆವರ್ಡ್ಸ್ ಆಗಿರುತ್ತಾರೆ. ಈ ಕುದುರೆ ಜೂಜು ಬೆಂಗಳೂರು ನಗರದಲ್ಲಿ ಮತ್ತು ಮೈಸೂರು ನಗರದಲ್ಲಿ ನಡೆಯುತ್ತಿದೆ. ಈ ಮೊದಲು ಬೇಸಿಗೆ ಕಾಲದಲ್ಲಿ ಮಾತ್ರ ಈ ಕುದುರೆ ಜೂಜು ನಡೆಯುತ್ತಿತ್ತು. ಆದರೆ ಈಗ ವರ್ಷದಲ್ಲಿಲ ತಿಂಗಳ ಕಾಲ ನಡೆಯುತ್ತಿರುವುದು ಶೋಚನೀಯವಾದ ವಿಚಾರ. ಈಗ ಏನಾಗಿದೆ ಎಂದರೆ, ವರ್ಷದಲ್ಲಿ ೩ ತಿಂಗಳ ಕಾಲ ನಡೆಯುತ್ತಿದ್ದ ಜೂಜನ್ನು ಈಗ ಎಂಟು ತಿಂಗಳಿಗೆ ಹೆಚ್ಚಿಸಿರುವುದರಿಂದ, ಒಂದು ಕಡೆ ಜನರು ಲಾಟರಿ ಮತ್ತು ಕುತಿತದಿಂದ ಹಾಳಾಗುತ್ತಿರುವುದಲ್ಲದೆ, ಈ ಜೂಜಿನಿಂದ ಸಹ ಅನೇಕ ಸಂಸಾರಗಳು ಹಾಳಾಗಿವೆ. ಒಂದು ಕಡೆ ಸರ್ಕಾರಕ್ಕೆ ವರಮಾನ ಬರುತ್ತಿದ್ದರೆ,ಮತ್ತೊಂದು ಕಡೆಅನೇಕ ಸಂಸಾರಗಳು ಹಾಳಾಗುತ್ತಿವೆ. ಇದರ ಕಡೆಗೆ ಸರ್ಕಾರದವರು ಗಮನ ಕೊಡದಿರುವುದು ಶೋಚನೀಯವಾದ ವಿಚಾರ. ಜೂಜಾಡಿ ಎಂದು ನಾವು ಜನರನ್ನು ಒತ್ತಾಯ ಮಾಡುವುದಿಲ್ಲವೆಂದು ಸರ್ಕಾರದವರು ಸವಾಲು ಹಾಕಬಹುದು; ಆದರೆ ಮನುಷ್ಯರಲ್ಲಿರತಕ್ಕ ಒಂದು ಚಟ ಏನಂದರೆ, ಯಾರಿಗಾದರು ಲಕ್ಷ ಗಟ್ಟಲೆ ಹಣ ಜೂಜಿನಿಂದ ಬಂದುಬಿಟ್ಟರೆ, ಬೇರೆಯವರು ಸಹ ತಾವು ಒಂದೇ ಸಲ ಸಾವುಕಾರರಾಗಬೇಕೆಂದು ಆಸೆ ಇಟ್ಟುಕೊಂಡು ಈ ಜೂಜಾಡುವುದಕ್ಕೆ ಹೋಗುತ್ತಾರೆ. ಈ ರೇಸ್ ಕ್ಲಬ್‌ನಲ್ಲಿ ಮೆಂಬರಷಿಪ್ ಸಿಗಬೇಕಾದರೆ ಬಹಳ ಕಷ್ಟ.

ಏಕೆಂದರೆ ರೆಪ್ರಿಸೆಂಟೇಟಿವ್ ಮೆಂಬರ ಷಿಪ್‌ಗಳು ಇರುತ್ತವೆ ಒಂದು ಸಲ ಕಾಕ್‌ಟೈಲ್ ಪಾರ್ಟಿಯನ್ನು ಏರ್ಪಾಡು ಮಾಡಿದರೆ ೫೦-೬೦ ಸಾವಿರ ರೂಪಾಯಿಗಳು ಖರ್ಚಾಗುತ್ತದೆಂದು ಕೇಳಿದ್ದೇನೆ. ಈ ಕುದುರೆ ಜೂಜಾಡುತ್ತಿದ್ದ ಸಂಬಂಧೀಕರೊಬ್ಬರು ನನಗೆ ಇದ್ದರು. ಇವರಿಗೆ ೧೫೦೦ ರೂಪಾಯಿ ಸಂಬಳ ಬರುತ್ತಿತ್ತು. ಮದ್ರಾಸ, ಕಲ್ಕತ್ತ, ಬೊಂಬಾಯಿ, ಬೆಂಗಳೂರು, ಎಲ್ಲಿಯೇ ರೇಸ್ ನಡೆಯಲಿ, ಇವರು ಅಲ್ಲಿಗೆ ಹೋಗಿ ಆಡುತ್ತಿದ್ದರು. ಈ ರೀತಿ ಆಡಿ ಆಡಿ ಇಂದು ಏನೂ ಇಲ್ಲದವರಾಗಿದ್ದಾರೆ. ಅವರ ಹೆಂಡತಿ ಮಕ್ಕಳು ಇಂದು ನಿರ್ಗತಿಕರಾಗಿರುವುದಲ್ಲದೆ, ಅವರಿಗೆ ತಿನ್ನುವುದಕ್ಕೆ ಅನ್ನ ಸಹ ಇಲ್ಲದಂತೆ ಆಗಿದೆ. ಇದೇ ರೀತಿ ಜೂಜಾಡಲು ಮನೆ ಮಾರಿಕೊಂಡವರು ಇಂದು ಭಿಕ್ಷುಕರಾಗಿದ್ದಾರೆ. ಮತ್ತು ಅವರ ಹೆಂಡತಿ ಮಕ್ಕಳು ಪಡುತ್ತಿರುವ ಕಷ್ಟ ಅಷ್ಟಿಷ್ಟಲ್ಲ. ಈ ದೃಷ್ಟಿಯಿಂದಲಾದರೂ ಸಹ ಸರ್ಕಾರದವರು ಇದನ್ನು ತಪ್ಪಿಸುವುದಕ್ಕೆ ಆದಷ್ಟು ಬೇಗ ಕಾರ್ಯಕ್ರಮ ಕೈಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ. ಈಗ ಬೆಂಗಳೂರು ನಗರದ ಮಧ್ಯ ಭಾಗದಲ್ಲಿ ಈ ಜೂಜು ನಡೆಯುತ್ತಿದೆ. ಈ ಜೂಜು ನಡೆಯುವ ಕಾಲದಲ್ಲಿ ಬೆಂಗಳೂರು ನಗರದಲ್ಲಿ ಒಂದು ರಕ್ಷಾ ಸಿಗುವುದಿಲ್ಲ ಮತ್ತು ಹೋಟೆಲ್‌ಗಳಲ್ಲಿ ಒಂದು ರೂಮು ಸಿಗುವುದಿಲ್ಲ. ಇದರ ಜೊತೆಗೆ ಸರ್ಕಾರೀ ಕಛೇರಿಗಳಲ್ಲಿ ಮತ್ತು ಬೇರೆ ಬೇರೆ ಕಡೆಗಳಲ್ಲಿ ನೆಮ್ಮದಿಯಿಂದ ಕೆಲಸಗಳು ಆಗುವುದಿಲ್ಲ. ಈ ರೀತಿ ಇರತಕ್ಕಂಥ ಪರಿಸ್ಥಿತಿಯಲ್ಲಿಯೂ ಸಹ ಇದಕ್ಕೆ ಬೆಂಬಲ ಕೊಡುತ್ತಿರುವುದಕ್ಕೆ ಕಾರಣವೇನು ಮತ್ತು ಇದರಿಂದ ಸರ್ಕಾರಕ್ಕೆ ಬರುವ ವರಮಾನ ಒಂದನ್ನು ಬಿಟ್ಟರೆ, ಬೇರೆ ಇನ್ನಾವುದಾದರೂ ಪ್ರಯೋಜನವಿದೆಯೇ ಎಂಬುದನ್ನು ಮಾನ್ಯ ಆರ್ಥಿಕ ಸಚಿವರು ಹೇಳಿದರೆ ಆಗ ನಾನು ಒಪ್ಪಿಕೊಳ್ಳುತ್ತೇನೆ. ಹಿಂದಿನ ಕಾಲದಿಂದ ಬಂದಿರುವ ಈ ಲೂಟಿ ಮಾಡುವ ಪದ್ಧತಿಯನ್ನು ನಿಲ್ಲಿಸುವುದಕ್ಕೆ ಸರ್ಕಾರದವರು ಏತಕ್ಕೆ ಪ್ರಯತ್ನ ಮಾಡಲಿಲ್ಲ ಎಂದು ನಾವು ಯೋಚನೆ ಮಾಡಬೇಕಾಗಿದೆ. ಈ ಜೂಜಿನಿಂದ ಅನೇಕ ಬುಕೀಸ್ ಇಂದು ಲಕ್ಷಾಧೀಶ್ವರರಾಗಿದ್ದಾರೆ. ಕೆಲವರು ಏಜೆಂಟರು ಸೇರಿಕೊಂಡು ತಿಳಿವಳಿಕೆ ಇಲ್ಲದವರಿಗೆ ಈ ನಂಬರ್‌ಗೆ ಹಾಕಿ, ಆ ನಂಬರ್‌ಗೆ ಹಾಕಿ ಎಂದು ಹೇಳಿ ದುಡ್ಡು ಹಾಕಿಸುವ ದಳ್ಳಾಳಿಗಳು ಇದ್ದಾರೆ. ಒಟ್ಟಿನಲ್ಲಿ ಈ ವ್ಯವಹಾರ ಕಠಿಣವಾದುದು ಮತ್ತು ಕ್ಲಿಷ್ಟವಾದುದು. ಇದರಿಂದ ಸರ್ಕಾರಕ್ಕೆ ಅಲ್ಪ ವರಮಾನ ಬಂದರೂ ಸಹ, ಅನೇಕ ಮನೆಗಳು ಹಾಳಾಗುತ್ತಿವೆ ಮತ್ತು ಸಮಾಜದ ಅನೇಕ ಸಂಸಾರಗಳಿಗೆ ಪ್ರತ್ಯಕ್ಷವಾಗಿಯಲ್ಲದಿದ್ದರೂ ಪರೋಕ್ಷವಾಗಿ ಧಕ್ಕೆಯಾಗುತ್ತಿರುವುದರಿಂದ ಇದನ್ನು ತೆಗೆದುಹಾಕಬೇಕೆಂದು ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಬೆಂಗಳೂರಿನ ಮಧ್ಯಭಾಗದಲ್ಲಿರುವ ಈ ಜಾಗವನ್ನು ಷಾಪಿಂಗ್ ಸೆಂಟರ್ ಮಾಡಿದರೆ ಈಗ ಬರುತ್ತಿರುವ ವರಮಾನಕ್ಕಿಂತ ಹತ್ತು ಪಟ್ಟು ಜಾಸ್ತಿ ಬರುವುದಕ್ಕೆ ಅವಕಾಶವಿದೆ. ಈಗ ಚಿಕ್ಕಪೇಟೆ ಮತ್ತು ದೊಡ್ಡಪೇಟೆಯಲ್ಲಿ ಒತ್ತಡ ಜಾಸ್ತಿಯಿರುವುದರಿಂದ, ರೇಸ್‌ಕೋರ್ಸ್ ಜಾಗದಲ್ಲಿ ಷಾಪಿಂಗ್ ಸೆಂಟರ್ ಮಾಡಿದರೆ, ಈಗ ಏನು ರೇಸಿನಿಂದ ಸರ್ಕಾರಕ್ಕೆ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ

ಮತ್ತು ಬೆಟ್ಟಿಂಗ್ ಟ್ಯಾಕ್ಸ್‌ನಿಂದ ವರಮಾನ ಬರುತ್ತಿದೆ, ಅದಕ್ಕೂ ಹೆಚ್ಚು ಸಂಪಾದನೆ ಸರ್ಕಾರಕ್ಕೆ ಬರುತ್ತದೆ. ಮುಖ್ಯವಾಗಿ ಈ ಜೂಜಿನ ವ್ಯವಹಾರ ಜನರಿಗೆ ಅನುಕೂಲವಾಗಿಲ್ಲದಿರುವುದರಿಂದ, ಇದನ್ನು ತಕ್ಷಣ ತೆಗೆದುಹಾಕಬೇಕೆಂದು ಒತ್ತಾಯಪೂರ್ವಕವಾಗಿ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಬೆಂಗಳೂರಿನಲ್ಲಿ ನಡೆಯುವ ಕುದುರೆ ಜೂಜಿಗೆ ಬೇರೆ ರಾಜ್ಯಗಳಿಂದ ಅನೇಕರು ಬರುತ್ತಾರೆ. ನಮ್ಮ ರಾಜ್ಯದ ಬಡ ಜನರೂ ಕೂಡ ಈ ಜೂಜಿಗೆ ಹೋಗಿ ಹಣ ಕೊಟ್ಟು ಕಳೆದುಕೊಳ್ಳುತ್ತಿದ್ದಾರೆ. ಒಂದೇ ಸಾರಿ ಸಾಹುಕಾರರುಗಳಾಗಬೇಕು ಎನ್ನುವ ಒಂದು ಚಟದಿಂದ ಜೂಜಿಗೆ ಬರುತ್ತಾರೆ. ಮತ್ತೆ ಕೆಲವು ಜನರು ಮನೆಯಲ್ಲಿಟ್ಟಿರುವ ಒಡವೆಗಳನ್ನು ಗಿರವಿ ಇಟ್ಟು ಜೂಜಿಗೆ ಬಂದು ಹಣ ಕಳೆದುಕೊಳ್ಳುತ್ತಾರೆ. ಹೀಗೆ ಆಸ್ತಿ ಪಾಸ್ತಿಗಳನ್ನೂ ಅನೇಕರು ಕಳೆದುಕೊಳ್ಳುತ್ತಾರೆ. ಇದರಲ್ಲಿ ಸರಕಾರದ ಬೊಕ್ಕಸಕ್ಕೇನೋ ಹಣ ಬರುತ್ತದೆ. ಆದರೆ ಇದರ ಇಂಡೈರೆಕ್ಟ್ ಎಫೆಕ್ಟ್ ಸರಕಾರಕ್ಕೆ ಬರುವ ಸಣ್ಣ ವರಮಾನಕ್ಕಿಂತ ಅಪ್ರತ್ಯಕ್ಷವಾಗಿ ಅನೇಕ ಸಂಸಾರಗಳವರು ಅನೇಕ ಕಷ್ಟನಷ್ಟಗಳನ್ನು ಅನುಭವಿಸುತ್ತಿದ್ದಾರೆ. ಆದುದರಿಂದ ಇದನ್ನು ಆದಷ್ಟು ಬೇಗ ತೆಗೆಯುವುದು ಒಳ್ಳೆಯದು. ಇದರಿಂದ ಅನೇಕ ಬಡ ಸಂಸಾರಗಳು ಹಾಗೂ ಬಡವನ ಹೆಂಡತಿಮಕ್ಕಳು ಜೀವನ ಮಾಡಲು ಸಹಾಯವಾಗುತ್ತದೆ. ಇದನ್ನು ಗಮನದಲ್ಲಿಟ್ಟುಕೊಂಡರೆ ಈ ಸಮಾಜದಲ್ಲಿ ಇಂತಹ ರೇಸುಗಳನ್ನು ನಡೆಸಲು ಅರ್ಹತೆ ಇಲ್ಲ, ಇದಕ್ಕೆ ಅನೇಕ ವಿಧವಾದ ಕಾರಣಗಳೂ ಇವೆ. ಇದರಿಂದ ಅನೇಕ ದುಷ್ಟ ಚಾಳಿಗಳೂ ಹುಟ್ಟಲು ಕಾರಣವಾಗುತ್ತದೆ. ಆದುದರಿಂದ ರೇಸುಗಳನ್ನು ತೆಗೆದುಹಾಕಲು ತಕ್ಕ ಏರ್ಪಾಡು ಮಾಡಬೇಕೆಂದು ಒತ್ತಾಯಪೂರ್ವಕವಾಗಿ ಸರಕಾರದಲ್ಲಿ ಸಲಹೆ ಮಾಡುತ್ತೇನೆ. ಮತ್ತು ಮಾನ್ಯ ಆರ್ಥ ಸಚಿವರು ಇದನ್ನು ಒಪ್ಪಿಕೊಳ್ಳಬೇಕೆಂದು ಹೇಳುತ್ತೇನೆ ಹಾಗೂ ಮಾನ್ಯ ಸಭೆಯವರೂ ಕೂಡ ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಅವರಲ್ಲಿ ಪ್ರಾರ್ಥಿಸುತ್ತೇನೆ.

† ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು (ಶಾಂತಿನಗರ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಶ್ರೀಮಾನ್ ಶಾಮಣ್ಣನವರು ತಂದಿರತಕ್ಕ ಖಾಸಗೀ ನಿರ್ಣಯವನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತಾ ಈ ಸಂದರ್ಭದಲ್ಲಿ ನಾಲ್ಕು ಸಲಹೆಗಳನ್ನು ಕೊಡಲು ಇಚ್ಛಿಸುತ್ತೇನೆ. ಸರಕಾರಕ್ಕೇನೋ ಇದರಿಂದ ಆದಾಯ ಬರುತ್ತದೆ ಎಂದು ಒಂದು ಕಡೆ ಇಟ್ಟುಕೊಂಡರೂ ಇದರಿಂದ ದೇಶದಲ್ಲಿ ಆಗತಕ್ಕ ಹಾನಿಯನ್ನು ನಾವು ಇಲ್ಲಿ ಯೋಚನೆ ಮಾಡಬೇಕಾದ್ದುಅತ್ಯಗತ್ಯ. ಇದರ ಬಗ್ಗೆ ಈಗಾಗಲೇ ನನ್ನ ಮಿತ್ರರು ಅನೇಕ ವಿಚಾರಗಳನ್ನು ಹೇಳಿದ್ದಾರೆ ಇದರಿಂದ ಆಗತಕ್ಕ ಕುಂದುಕೊರತೆಗಳ ಜೊತೆಗೆ ಜನರಲ್ಲಿರುವ ನೈತಿಕ ಮಟ್ಟ ಹಾಳಾಗುತ್ತಿದೆ ಈ ದಿವಸ ನಮ್ಮ ಬಡಜನರು ಅನುಭವಿಸುತ್ತಿರುವ ಕಷ್ಟ ಕಾರ್ಪಣ್ಯಗಳ ಜೊತೆಗೆ ಈ ಜನರ ನೈತಿಕ ಮಟ್ಟವೂ ಇದರಿಂದ ಬೇಗ ಹಾಳಾಗುತ್ತಿದೆ.

ನಾನು ಮೊನ್ನೆ ದಿವಸ ಮಾನ್ಯ ಮಂತ್ರಿಗಳಲ್ಲಿ ಇದೇ ರೇಸಿನ ಬಗ್ಗೆ ಪ್ರಶ್ನೆ ಕಳು

ಹಿಸಿ ಅದರಲ್ಲಿ ಈಗ ನಡೆಯುವ ರೇಸಿನ ಜಾಗವನ್ನು ಊರಿಂದ ಹೊರಗಡೆ ಬದಲಾ ಯಿಸಬೇಕು ಎಂದು ಕೇಳಿದುದಕ್ಕೆ ಉತ್ತರವಾಗಿ ಇದನ್ನು ತೆಗೆಯಲಾಗುವುದಿಲ್ಲ ಎಂದು ಜವಾಬು ಕೊಟ್ಟರು. ಇದು ಪಟ್ಟಣದ ಮಧ್ಯಭಾಗದಲ್ಲಿರುವುದರಿಂದ ಜನತೆಗೆ ತೊಂದರೆಯಾಗುತ್ತಿದೆ. ಇದರಿಂದ ಸರ್ಕಾರಕ್ಕೆ ಸುಮಾರು ನಾಲ್ಕು ಕೋಟಿಯಷ್ಟು ವರಮಾನ ಬರುವುದು ಮುಖ್ಯವಲ್ಲ ಇದನ್ನು ಬದಲಾವಣೆ ಮಾಡಿ ದೆಹಲಿಯಲ್ಲಿ ಕೊನಾಟ್ ಸರ್ಕಸನಲ್ಲಿರುವಂತೆ ಒಂದು ಷಾಪಿಂಗು ಕಾಂಪ್ಲೆಕ್ಸು ಎಂದು ಮಾಡಿದರೆ ಈಗ ಬರುತ್ತಿರುವ ವರಮಾನಕ್ಕಿಂತ ಹೆಚ್ಚಾಗಿ ವರಮಾನ ಬರುತ್ತದೆ ಎಂದು ಸಲಹೆ ಮಾಡಿದ್ದೆ. ಆದರೆ ಆ ಜಾಗದಿಂದ ಇದನ್ನು ತೆಗೆಯಲು ಸಾಧ್ಯವಿಲ್ಲ ಎಂದರು. ಮೊದಲು ಸರ್ಕಾರದವರೇ ಇದನ್ನು ತೆಗೆಯಬೇಕೆಂದು ಮಾಡಿದ್ದರು. ಈಗ ಏಕೆ ನಾವು ಇದನ್ನು ತೆಗೆಯಬೇಕೆಂದು ಹೇಳುತ್ತಿಲ್ಲವೆಂದರೆ ಈ ರೇಸ್‌ಕೋರ್ಸಿನ ಸುತ್ತಲೂ ಎಜುಕೇಶನಲ್ ಇನ್ಸ್‌ಟಿಟ್ಯೂಷನ್‌ಗಳು, ಹಾಸ್ಪಟ್ಲುಗಳೂ ಇವೆ. ಇದರಲ್ಲಿರುವ ಸ್ಟೂಡೆಂಟ್ಸುಗಳು ಇದನ್ನು ನೋಡುತ್ತಿರ ತ್ತಾರೆ. ಇದರಿಂದ ಅವರ ಮೇಲೆ ದುಷ್ಪರಿ ಣಾಮಗಳುಂಟಗುತ್ತವೆ. ನಾವು ಸುಮಾರು ಇಪ್ಪತ್ತು ವರ್ಷಗಳಿಂದಲೂ ರೇಸುಗ ಳನ್ನು ನೋಡುತ್ತಿದ್ದೇವೆ.

ಹಿಂದೆ ನಡೆಯುತ್ತಿದ್ದ ರೇಸುಗಳಿಗೂ ಈಗ ನಡೆಯುತ್ತಿರುವ ರೇಸುಗಳಿಗೂ ಬಹಳ ವ್ಯತ್ಯಾಸಗಳಾಗಿವೆ. ಇಂದು ನೂರರಲ್ಲಿ ಎಂಬತ್ತು ಭಾಗ ಬಡ ಜನರೇ ರೇಸಿಗೆ ಬಂದು ದುಡ್ಡು ಕೊಟ್ಟು ಬಿಡೀರ್ ಸಾಹುಕಾರರಾಗಬೇಕೆಂದು ಹಾಳಾಗುತ್ತಿದ್ದಾರೆ. ಬಿಡೀರ್ ಹೋಟೆಲುಗಳು ಎಂದು ನಾವು ಹೇಳುವಂತೆ ಇಲ್ಲಿ ಅನೇಕ ಬಡ ಜನರು ಬಂದು ಬಿಡೀರ್ ಸಾಹುಕಾರರು ಆಗಬೇಕೆಂದು ಇಲ್ಲಿಗೆ ಬಂದು ಹಾಳಾಗುತ್ತಿದ್ದಾರೆ. ಬಡ ಜನರು ಇದರಿಂದ ಬದುಕಲು ಅವಕಾಶ ಆಗುತ್ತಿಲ್ಲ. ಎಷ್ಟೋ ಬಡ ಸಂಸಾರಗಳು ಇದರಿಂದ ಹಾಳಾಗುತ್ತಿವೆ. ಇಂದು ಜನರು ಪ್ರಾಣಿಗಳನ್ನು ಸಾಕಿ ಅವುಗಳನ್ನು ಜೂಜಿಗೆ ಬಳಸಿ ಅವುಗಳ ಮೇಲೆ ಬದುಕಬೇಕಾಗಿದೆ. ಕುದುರೆಗೆನಾದರೂ ಹೊಟ್ಟೆ ನೋವು ಬಂದರೆ ಅದನ್ನು ನಿವಾರಣೆ ಮಾಡಲಾಗುತ್ತಿಲ್ಲ ಎಂಬ ಮಾತನ್ನು ಕೇಳಿ ದ್ದೇನೆ. ಅಂದಾಗ ಇಂಥ ಪ್ರಾಣಿಗಳ ಮೇಲೆ ಹಣ ಹಾಕಿ ಹಾಳುಮಾಡಿಕೊಳ್ಳು ತ್ತಿದ್ದಾರೆ. ಬೇಗನೆ ಸಾಹುಕಾರರು ಆಗಬೇಕೆಂದು ಹೀಗೆಲ್ಲಾ ಮಾಡುತ್ತಿದ್ದಾರೆ. ಆಂಧ್ರದಲ್ಲಿ ಕೋಳಿ ಜೂಜು ಎಂದಿದೆ, ಕೋಣನ ಜೂಜು ಇದೆ. ಹೀಗೆ ಪ್ರಾಣಿಗಳ ಮೇಲೆ ಹಣ ಕಟ್ಟಿ ಜೂಜಿನಲ್ಲಿ ಹಾಳಾಗುತ್ತಿದ್ದಾರೆ. ಇಂತಹ ಅನೇಕ ನಿದರ್ಶನಗಳು ನಮ್ಮ ಮುಂದೆ ಇವೆ ಆದುದರಿಂದ ಇಂದು ರಾಜ್ಯದಲ್ಲಿ ನಡೆಯುವ ಕುದುರೆ ಜೂಜನ್ನು ಸಾಧ್ಯವಾದ ಮಟ್ಟಿಗೂ ತೆಗೆದುಹಾಕಬೇಕು.

ಇನ್ನೊಂದು ವಿಶಾದಕರವಾದ ಅಂಶ ಎಂದರೆ ಹಿಂದೆ ಇಲ್ಲಿ ಕುದುರೆ ಜೂಜು ನಡೆಯುತ್ತಿದ್ದುದು ಕೇವಲ ಎರಡು ಮೂರು ತಿಂಗಳ ಕಾಲ ಮಾತ್ರ. ಈಗ ಹೆಚ್ಚು ಕಡಿಮೆ ವರ್ಷವೆಲ್ಲಾ ನಡೆಯಬೇಕೆಂದು ಮಾಡಿದ್ದಾರೆ. ಪಾಶ್ಚಿಮಾತ್ಯರು ಹಿಂದೆ ಹಾಕಿದಂತಹ ಈ ಒಂದುಕುದುರೆ ಜೂಜಿನ ಪದ್ಧತಿ ನಮ್ಮ ರಾಜ್ಯದಲ್ಲೂ ನಡೆದುಕೊಂಡು

ಬಂದು ಈ ರೇಸುಗಳಾಗುತ್ತಿವೆ. ಇಂದು ನಮ್ಮ ರಾಜ್ಯದ ಬಡವರ ಆರ್ಥಿಕ ಸ್ಥಿತಿ ಬಹಳ ವ್ಯಸನಕರವಾಗಿದೆ. ಪಾಶ್ಚಿಮಾತ್ಯ ದೇಶಗಳಂತೆ ನಮ್ಮ ಜನರ ಆರ್ಥಿಕ ಸ್ಥಿತಿ ಚೆನ್ನಾಗಿಲ್ಲ. ಈ ಬಡ ದೇಶಕ್ಕೆ, ರೇಸುಗಳೇಕೆ ಇರಬೇಕು? ಇಂದು ಬೆಂಗಳೂರು ಹಾಗೂ ಮೈಸೂರಿನಂತಹ ಪಟ್ಟಣಗಳಲ್ಲಿ ವಾಸ ಮಾಡುವ ಲಕ್ಷಾಂತರ ಜನರು ರೇಸಿಗೆ ಬಂದು ಹಣ ಕಳೆದುಕೊಳ್ಳುತ್ತಿದ್ದಾರೆ. ಇದರಿಂದ ದಿಡೀರ್ ಸಾಹುಕಾರರಾಗ ಬೇಕೆಂದು ಈ ರೀತಿ ಮಾಡುತ್ತಿದ್ದಾರೆ ಇದರ ದುಷ್ಪರಿಣಾಮಗಳು ಬಹಳ ಹೆಚ್ಚಾ ಗುತ್ತಿವೆ. ಇದರಲ್ಲಿ ಇನ್ನೊಂದು ಅಂಶ ಎಂದರೆ ಕುದುರೆ ಜೂಜು ನಡೆಯುವಾಗ ಕೂಲಿ ಮಾಡುವವರಿಗೆ, ದನಗಳನ್ನು ಸಾಕುತ್ತಿರುವವರಿಗೆ ಬಹಳ ಕಷ್ಟವುಂಟಾಗಿದೆ. ಅವರಿಗೆ ಬೇಕಾದ ಬೂಸಾ, ಹೊಟ್ಟು ಇತ್ಯಾದಿಗಳ ಬೆಲೆಗಳೂ ಆಗ ಬಹಳವಾಗಿ ಏರಿ ಹೋಗುತ್ತವೆ. ಇದರಿಂದ ಬಡ ಜನರು ಬದುಕುವುದಕ್ಕೂ ಕಷ್ಟವಾಗಿದೆ ಮತ್ತು ಅವರ ಜೀವಕ್ಕೆ ಇದರಿಂದ ಅಡ್ಡಿ ಕೊಡ ಬರುತ್ತಿದೆ. ರೇಸುಗಳಿಂದ ಪಿಕ್‌ಪಾಕೆಟ್ಟು ಮಾಡುವವರಿಗೆ ಒಳ್ಳೆಯ ಅವಕಾಶಗಳಾಗುತ್ತಿವೆ. ಇಂದು ನಾವು ರೇಸು ಬುಕ್ಕು ಗಳನ್ನು ಬೀದಿ ಬೀದಿಗಳಲ್ಲೂ ಮಾರುತ್ತಿರುವುದನ್ನು ನೋಡುತ್ತಿದ್ದೇವೆ. ಇದರದೆ ಒಂದು ರೀತಿಯ ವಿಚಿತ್ರ ವ್ಯಾಪಾರ, ಇದರಲ್ಲೇ ಒಂದು ವಿಚಿತ್ರ ಪ್ರಪಂಚ. ಬ್ಲಾಕ್ ಮಾರ್ಕೆಟ್ಟಿನಿಂದ ದುಡ್ಡು ಸಂಪಾದನೆ ಮಾಡಿರುವವರಿಗೆ ಇದು ಇರುವುದರಿಂದ ಅನು ಕೂಲವುಂಟು. ಅವರು ಹೇಗಾದರೂ ಮಾಡಿ ದುಡ್ಡನ್ನು ಖರ್ಚು ಮಾಡಲೇ ಬೇಕೆಂದಿರುತ್ತಾರೆ; ಅಂಥವರಿಗೆ ಇಲ್ಲಿ ಹಣ ಖರ್ಚು ಮಾಡಲು ಒಂದು ಅವಕಾಶ ಸಿಗುತ್ತದೆ. ಅವರು ಇದರಲ್ಲಿ ಉದಾರವಾಗಿ ಹಣ ಖರ್ಚು ಮಾಡಿ ಸಂಪಾದನೆ ಮಾಡಿಕೊಳ್ಳಬಹುದು. ಇಂದು ಜನರು ಜೂಜಿಗಾಗಿ ಖರ್ಚು ಮಾಡುವ ಹಣ ವನ್ನು ಬೇರೆ ಯಾವುದಾದರೂ ನ್ಯಾಷನಲ್ ರೀಕನ್‌ಸ್ಟ್ರಕ್ಷನ್ ಪ್ರೋಗ್ರಾಂಗಾಗಿ ಖರ್ಚು ಮಾಡಿದರೆ ಅದರಿಂದ ಬಹಳ ಅನುಕೂಲವಾಗುತ್ತದೆ. ಜನಗಳಿಗೂ ಇದರಿಂದ ಸಹಾಯವಾಗುತ್ತದೆ. ಸಾಧ್ಯವಾದಮಟ್ಟಿಗೂ ಈಗ ರೇಸು ನಡೆಯುತ್ತಿರುವ ಜಾಗ ವನ್ನು ಊರಿಂದ ಹೊರಗೆ ಹಾಕಿದರೆ ಇದು ಕಣ್ಣಿಗೆ ಕಾಣದಂತಿರುತ್ತದೆ. ಇದ ಕ್ಕಾಗಿ ಮತ್ತೆ ಬೇಕಾದರೆ ಒಂದು ಕಮೀಟಿ ಮಾಡಿ ಇದರ ಬಗ್ಗೆ ಆದಷ್ಟು ಬೇಗ ತೀರ್ಮಾನ ತೆಗೆದುಕೊಂಡು ಇದನ್ನು ಊರಿಂದ ಹೊರಗೆ ವರ್ಗಾಯಿಸುವು ದರ ಬಗ್ಗೆ ಸರಕಾರ ಪ್ರಯತ್ನ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಇದರಿಂದ ಇಂದು ಕೊಟ್ಯಾಂತರ ಸಂಸಾರಗಳು ಹಾಳಾಗುತ್ತಿವೆ. ಈ ಜೂಜಿನ ಪರಿಣಾಮ ವಾಗಿ ಕೆಲವು ಹೋಟಲುಗಳಲ್ಲಿ ಸೊಯಿಸೈಡು ಕೂಡ ಆಗಿವೆ. ಕೆಲವರು ಹಣ ತಂದು ಹಾಳು ಮಾಡಿಕೊಂಡವರು ಹೋಟೆಲ್ಲುಗಳಿಗೆ ಬಂದು ಆತ್ಮಹತ್ಯೆಗಳನ್ನು ಕೂಡ ಮಾಡಿಕೊಂಡಿರುತ್ತಾರೆ. ಮುಖ್ಯವಾಗಿ ಜನರ ನೈತಿಕ ಮಟ್ಟ ಇದರಿಂದ ಹಾಳಾ ಗುತ್ತಿದೆ. ಸಾಮಾಜಿಕ ಸ್ಥಿತಿ ಉತ್ತಮ ಮಾಡಬೇಕಾಗಿದ್ದರೆ ಈ ರೇಸುಗಳನ್ನು ತೆಗೆಯ ಬೇಕು. ಇದಕ್ಕಾಗಿ ಮಾನ್ಯ ಶಾಮಣ್ಣನವರು ತಂದಿರುವ ನಿರ್ಣಯವನ್ನು ನಾನೂ ಸಮರ್ಥಿಸುತ್ತೇನೆ, ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎ.ಎಂ. ಸೂರ್ಯನಾರಾಯಣಗೌಡ(ಯಲಹಂಕ) —ಮಾನ್ಯ ಅಧ್ಯಕ್ಷರೇ, ನಮ್ಮ ಮುಂದೆ ಇರತಕ್ಕ ನಿರ್ಣಯದಲ್ಲಿ ಜೂಜನ್ನಿಂದಾಗುವ ದುಷ್ಪರಿಣಾಮಗಳ ಬಗ್ಗೆ ಹೇಳಲಾಗಿದೆ. ಇಂತಹ ನಿರ್ಣಯವನ್ನು ನಾನು ಅನುಮೋದಿಸುತ್ತಾ ಎರಡು ಮಾತುಗಳನ್ನು ಹೇಳಬೇಕಾಗಿದೆ. ಬೆಂಗಳೂರು ಹಾಗೂ ಮೈಸೂರುಗಳಲ್ಲಿ ಕುದುರೆ ಜೂಜು ಆಗುತ್ತಿರುವುದರಿಂದ ಅದರ ಪರಿಣಾಮವಾಗಿ ಜನರಲ್ಲಿ ಅನೈತಿಕ ಮಟ್ಟ ಹೆಚ್ಚಲು ಕಾರಣವಾಗಿದೆ ಮತ್ತು ಸಮಾಜದ ಮೇಲೆ ಇದರಿಂದ ದುಷ್ಪರಿಣಾಮ ಗಳುಂಟಾಗುತ್ತವೆ. ಇಲ್ಲಿ ಹಣವಂತರು ಬರುವುದಕ್ಕಿಂತ ಬಡವರೇ ಹೆಚ್ಚಾಗಿ ಬರುತ್ತಿರುವವರು, ಬಡವರು ಸಾಲಮಾಡಿಕೊಂಡು ಬಂದು ರೇಸುಗಳಲ್ಲಿ ಭಾಗವಹಿಸಿ ಹಣ ಕಳೆದುಕೊಂಡು ಹಾಳಾಗುತ್ತಿದ್ದಾರೆ. ಇದರಿಂದ ಜನರಲ್ಲಿ ಒಂದು ರೀತಿಯಾದ ಅನೈತಿಕ ಮಟ್ಟ ಹೆಚ್ಚಾಗಲು ಕಾರಣವಾಗಿದೆ. ಈ ಜೂಜಿನಿಂದ ಅನೇಕ ಸಂಸಾರಗಳು ಹೆಚ್ಚು ತೊಂದರೆಗಳಿಗೆ ಈಡಾಗುತ್ತಿವೆ. ಕುದುರೆ ಜೂಜಿನ ದುಷ್ಪರಿಣಾಮಗಳು ಇಂದು ಬೆಂಗಳೂರಿನಲ್ಲಿ ಹಾಗೂ ಮೈಸೂರಿನಲ್ಲಿರುವ ಜನತೆಯ ಮೇಲೆ ಸಂಪೂರ್ಣ ವಾದ ಪ್ರಭಾವವನ್ನು ಬೀರದೆ ಇರುವುದಿಲ್ಲ.

ಜೂಜನ್ನು ನಿಲ್ಲಿಸುವದರಿಂದ ಸಮಾಜದ ಮೇಲೆ ಒಳ್ಳೆಯ ಪರಿಣಾಮವಾಗುತ್ತದೆ. ಸಮಾಜವಾದಿ ಸರ್ಕಾರ ಎಂದು ಹೇಳುವಂಥ ಸಂದರ್ಭದಲ್ಲಿ ಈ ತರಹ ಜೂಜಿನ ಕಟ್ಟೆಗಳಿರುವದು ಒಳ್ಳೆಯದಲ್ಲ. ಜೂಜು ನಡೆಯುವದಕ್ಕೆ ಅವಕಾಶ ಕೊಡುವುದರಿಂದ ಸಮಾಜದ ಮೇಲೆ ಆಗತಕ್ಕ ದುಷ್ಪರಿಣಾಮಗಳನ್ನು ನಾವು ಕಡಮೆ ಮಾಡುವದಕ್ಕೆ ಬದಲಾಗಿ ಹೆಚ್ಚು ಹೆಚ್ಚು ದುಷ್ಪರಿಣಾಮಗಳಾಗುವದಕ್ಕೆ ಅನುಕೂಲ ಮಾಡಿಕೊಟ್ಟ ಹಾಗಾಗುತ್ತದೆ.

ಹಿಂದೆ ಮಾತನಾಡಿದ ಸದಸ್ಯರು ಈಗಿರುವ ರೇಸ್ ಕೋರ್ಸನ್ನು ಬೇರೆ ಕಡೆಗೆ ಬದಲಾಯಿಸಿ ಡೆಲ್ಲಿಯಲ್ಲಿ ಕೊನ್ನಾಟ್ ಸೆಂಟರ್ ಇರುವಂತೆ ಇಲ್ಲಿ ಒಂದು ಷಾಪಿಂಗ್ ಸೆಂಟರ್ ಮಾಡಬೇಕೆಂದು ಹೇಳಿದರು. ಬೆಂಗಳೂರಿನಲ್ಲಿರತಕ್ಕ ಹೆಚ್ಚಿನ ಕೈಗಾರಿಕೆಗಳಿಂದ ಕೆಡತಕ್ಕ ಹವಾವನ್ನು ಸ್ವಚ್ಛ ಮಾಡುವದಕ್ಕೆ ಅಲ್ಲಲ್ಲಿ ವಿಶಾಲವಾದ ಮೈದಾನಗಳು ಬೇಕು. ಆದಕಾರಣ ರೇಸ್ ಕೋರ್ಸ ಇರುವ ಜಾಗದಲ್ಲಿ ದೊಡ್ಡ ಉದ್ಯಾನವನ್ನು ಮಾಡುವುದು ಹೆಚ್ಚು ಅವಶ್ಯಕವಾದುದು. ಈ ಜೂಜು ಕಟ್ಟೆಯನ್ನು ಆದಷ್ಟು ಬೇಗನೆ ತೆಗೆಯತಕ್ಕ ಪ್ರಯತ್ನ ಸರಕಾರ ಮಾಡಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ವೈ. ಘೋರ್ಪಡೆ (ಹಣಕಾಸಿನ ಶಾಖೆಯ ಮಂತ್ರಿಗಳು) —ಮಾನ್ಯ ಅಧ್ಯಕ್ಷರೇ, ಈ ವಿಷಯ ನನ್ನ ಇಲಾಖೆಗೆ ಸಂಬಂಧಪಟ್ಟಿರುವದರಿಂದ ನಾನು ಇದಕ್ಕೆ ಉತ್ತರ ಹೇಳಬೇಕಾಗುತ್ತದೆ. ಮಾನ್ಯ ಶಾಮಣ್ಣನವರಿಗೆ ಗೊತ್ತಿರುವಂತೆ ನನಗೆ ರೇಸಿಗೆ ಹೋಗುವ ಚಟವಿಲ್ಲ. ಅದರ ಬಗ್ಗೆ ಹೆಚ್ಚಿನ ಜ್ಞಾನ ಕೂಡ ಇಲ್ಲ ಎಂದು ಒಪ್ಪಿಕೊಳ್ಳುತ್ತೇನೆ. ಆದರೂ ಕೂಡ ಇದರ ಬಗ್ಗೆ ನಾನು ಒಂದು ಮಾತನ್ನಂತೂ ಹೇಳಬೇಕಾಗುತ್ತದೆ. ಗ್ಯಾಂಬ್ಲಿಂಗ್ ಇನ್‌ಸ್ಟಿಂಕ್ಟ್ ಅಥವಾ ಸಮಾಜದಲ್ಲಿರತಕ್ಕ

ಜೂಜಾಡುವ ಪ್ರವೃತ್ತಿ ಏನಿದೆ ಅದನ್ನು ಬರೀ ಸರ್ಕಾರದ ಕ್ರಮದಿಂದಲೇ ಹೋಗಲಾಡಿಸುವದಕ್ಕೆ ಸಾಧ್ಯ ಎನ್ನುವ ವಾದವನ್ನು ನಾನಂತೂ ಒಪ್ಪುವದಿಲ್ಲ. ಸಮಾಜದಲ್ಲಿ ರತಕ್ಕ ನ್ಯೂನತೆಗಳು ಅಥವಾ ಬೇರೆ ಬೇರೆ ಪದ್ಧತಿಗಳು, ಮನರಂಜನೆಯ ಪದ್ಧತಿಗಳು ಇವುಗಳನ್ನು ಬದಲಾಯಿಸಬೇಕಾದರೆ ಅದು ಸಮಾಜದಿಂದಲೇ ಸಾಧ್ಯವೇ ಹೊರತು ಬರೀ ಸರ್ಕಾರದ ಕಾರ್ಯಕ್ರಮದಿಂದಲ್ಲ. ಈ ಹೊಸ್ತು ರೇಸುಗಳು ಇಲ್ಲದೆ ಹೋದರೆ ಮಟ್ಕ ಅಥವಾ ಬೇರೆ ಬೇರೆ ರೀತಿಯ ಜೂಜಾಟಗಳಿವೆ; ಕೋಳಿ ಜೂಜು ಇಂಥವೆಲ್ಲ ಇವೆ. ಜೂಜಾಡುವಂಥ ಪ್ರವೃತ್ತಿ ಬಹಳ ಹಿಂದಿನಿಂದ, ಮಹಾಭಾರತದ ಕಾಲದಿಂದ ಇದೆ. ಪಾಂಡವರು ಜೂಜಾಡಿ ರಾಜ್ಯವನ್ನು ಕಳೆದುಕೊಂಡು ವನವಾಸಕ್ಕೆ ಹೋದರು. ಅದನ್ನು ತಪ್ಪಿಸುವದಕ್ಕೆ ಸಾಧ್ಯವಾಗಲಿಲ್ಲ. ಮನುಷ್ಯನ ಸ್ವಭಾವವೇನು ಎನ್ನುವದನ್ನು ಅದರಲ್ಲಿ ಪ್ರತಿಬಿಂಬಿಸಿದ್ದಾರೆ. ಆ ಕಾಲದಲ್ಲಿ ಜೂಜಾಡಿದಂಥ ರಾಜ ಮಹಾರಾಜರು ಜೂಜಿನಲ್ಲಿ ಸೋತು ವನವಾಸಕ್ಕೆ ಹೋಗುವ ಸಂಭವವಿತ್ತು. ಈ ಕಾಲದಲ್ಲಿ ಜೂಜಿನಲ್ಲಿ ಸೋತವರು ವನವಾಸಕ್ಕೆ ಹೋಗುವ ಕೆಲಸವಿಲ್ಲ, ಅವರು ಹಣವನ್ನು ಕಳೆದುಕೊಳ್ಳುತ್ತಾರೆ. ಆದಕಾರಣ ಮೂಲಭೂತವಾಗಿ ಮನುಷ್ಯನ ಸ್ವಭಾವದಲ್ಲಿ ಬಹಳ ಪರಿವರ್ತನೆಯಾಗಬೇಕು. ಇದು ಸರಕಾರದ ಕಾರ್ಯಕ್ರಮದಿಂದ ಮಾತ್ರ ಸಾಧ್ಯವಿಲ್ಲ.

ಶ್ರೀಮಾನ್ ನಾಗಣ್ಣನವರ ವಿಷಯ ಹೇಳಿದರು. ಅವರು ಸಭೆಯಲ್ಲಿ ಇದ್ದಿದ್ದರೆ ಒಳ್ಳೆಯದಾಗುತ್ತಿತ್ತು. ವಿಂಟರ್ ರೇಸಿಂಗ್ ಆಗಬಾರದು, ಆದರೆ ಚಳುವಳಿ ಮಾಡುತ್ತೇನೆಂದು ಹೇಳಿದ್ದರು. ಅವರು ರೆಗ್ಯುಲರ್ ಆಗಿ ರೇಸಿಗೆ ಹೋಗುತ್ತಾರೆ. ಜೂಜಾಡುತ್ತಾರೆ. ಆ ವಿಷಯ ಮಾನ್ಯ ಶಾಮಣ್ಣನವರಿಗೂ ಗೊತ್ತಿದೆ, ಮಾನ್ಯ ನಾಗಣ್ಣನವರು ಸಭೆಯಲ್ಲಿ ಇದ್ದಿದ್ದರೆ ಅವರಿಗೇ ನೇರವಾಗಿ ನಾನು ಪ್ರಶ್ನೆ ಕೇಳಬಹುದಾಗಿತ್ತು. ನನಗಿಂತ ಹೆಚ್ಚು ಅನುಭವ ಅವರಿಗಿದೆ.

ಶ್ರೀ ಟಿ. ಆರ್. ಶಾಮಣ್ಣ.— ಶ್ರೀ ನಾಗಣ್ಣನವರಿಗೆ ರೇಸಿಗೆ ಹೋಗುವ ಅನುಭವವಿದೆ, ೫೦ ವರ್ಷಗಳ ಅನುಭವವಿದೆ. ಅವರ ಅನುಭವದಿಂದ ಅವರು ಪಡತಕ್ಕ ಕಷ್ಟ ನಷ್ಟ ಬೇರೆಯವರಿಗೆ ಬೇಡ ಎನ್ನುವ ಉದ್ದೇಶದಿಂದ ರೇಸುಗಳನ್ನು ನಿಲ್ಲಿಸಬೇಕೆಂದು ಅವರ ಅನುಭವವನ್ನು ಹೇಳುತ್ತಿದ್ದರೆಂದು ನಾನು ತಿಳಿದೆ.

ಶ್ರೀ ಎಂ. ಪೈ. ಫೋರ್ಪಡೆ.— ಇನ್ನು ಕೆಲವರು ರೇಸ್ ಕೋರ್ಸ್ ಇರುವ ಕಡೆ ಷಾಪಿಂಗ್ ಸೆಂಟರ್ ಮಾಡಬಹುದು ಎಂದು ಹೇಳಿದರು. ಆ ಉದ್ದೇಶದಿಂದಲೂ ಕೂಡ ಕೆಲವರು ರೇಸಿಂಗ್ ಹೋಗಬೇಕು ಎಂದು ಹೇಳಿದರು. ಶ್ರೀ ಕೆ. ಆರ್. ಎಸ್. ನಾಯ್ಡು ಅವರು ರೇಸ್ ಕೋರ್ಸ ಬೇರೆ ಕಡೆಗೆ ಬದಲಾಯಿಸಿ ಅಲ್ಲಿ ಒಂದು ಷಾಪಿಂಗ್ ಸೆಂಟರ್ ಏಕೆ ಮಾಡಬಾರದು ಎಂದು ಕೇಳಿದರು. ಬೆಂಗಳೂರಿನ ಜನಸಂಖ್ಯೆ ವಿಪರೀತವಾಗಿ ಬೆಳೆಯುತ್ತಿದೆ. ಅದಕ್ಕಾಗಿ ಅಲ್ಲಲ್ಲ ಲಂಗ ಸ್ಪೇಸ್ ಬಿಟ್ಟುಕೊಂಡು ಹೋಗಬೇಕಾದ್ದು ಮುಖ್ಯ ಎಂದು ನನ್ನ ಅಭಿಪ್ರಾಯ. ಆದಕಾರಣ ಅದರ ಬಗ್ಗೆ ಅವಸರವಿಲ್ಲ, ಯಾವ ಒಂದು ತೀರ್ಮಾನವನ್ನೂ ತೆಗೆದುಕೊಳ್ಳುವ

ಪರಿಸ್ಥಿತಿಯಲ್ಲಿ ಸರ್ಕಾರವಿಲ್ಲ. ರೇಸ್ ಕೋರ್ಸ ಅನ್ನು ಈಗ ಇರುವ ಸ್ಥಳದಿಂದ ಬೇರೆ ಕಡೆಗೆ ಬದಲಾಯಿಸಬೇಕೆಂದು ಹೇಳಿದರು. ಹಾಗೆ ಬದಲಾಯಿಸಬೇಕಾದರೆ ಎರಡು ಮೂರು ಕೋಟಿ ರೂಪಾಯಿ ಬೇಕಾಗುತ್ತದೆ. ಆದ್ದರಿಂದ ಅಷ್ಟು ಸುಲಭವಾಗಿ ಬದಲಾಯಿಸುವುದಕ್ಕೆ ಆಗುವದಿಲ್ಲ.

ರೇಸಿಂಗ್ ಎಂದರೆ ಕುದುರೆ ಜೂಜು, ಹಾರ್ಸ್ ಬೆಟ್ಟಿಂಗ್. ಜೂಜು ಬಹಳ ಪುರಾತನ ಕಾಲದಿಂದ ಬಂದಿರತಕ್ಕದ್ದು. ಮೈಸೂರು ರಾಜ್ಯದಲ್ಲಿ ಹತ್ತು ಸ್ಟಡ್ ಫಾರಂಗಳಿವೆ; ೭೦—೮೦ ರೇಸ್ ಹಾರ್ಸಸ್ ಇವೆ. ಹೊರಗಡೆಯಿಂದ ೧೦೦—೧೫೦ ರೇಸ್ ಹಾರ್ಸಸ್ ಬ್ರೀಡ್ ಮಾಡುವುದಕ್ಕೆ ರೇಸಿಂಗ್ ಪುಷ್ಟಿ ಕೊಟ್ಟಿದೆ. ರೇಸ್ ಕೆಟ್ಟದ್ದು ಎಂದು ಹೇಳಿದರೂ ಕೂಡ ಅದರಲ್ಲಿಯೂ ಕೆಲವು ಒಳ್ಳೆಯ ಅಂಶಗಳಿವೆ. ಅವುಗಳನ್ನು ನಾನು ಸಂಕ್ಷಿಪ್ತವಾಗಿ ತಮ್ಮ ಮುಂದೆ ಇಡುವದಕ್ಕೆ ಪ್ರಯತ್ನ ಮಾಡುತ್ತೇನೆ. ರೇಸಿಂಗ್‌ನಿಂದ ಎರಡು ಮೂರು ಸಾವಿರ ಜನಗಳಿಗೆ ಕೆಲಸ ಸಿಕ್ಕುತ್ತದೆ. ರೇಸುಗಳು ನಡೆಯುವಾಗ ಹೋಟಲುಗಳಲ್ಲಿ ಜಾಗ ಸಿಕ್ಕುವದಿಲ್ಲವೆಂದು ಹೇಳಿದರು. ಹೋಟಲುಗಳಲ್ಲಿ ಜಾಗವಿಲ್ಲದೆ ಹೋದರೆ ಹೊಸ ಹೊಸ ಹೋಟಲುಗಳನ್ನು ಜನ ಕಟ್ಟುತ್ತಾರೆ. ಹೋಟಲುಗಳಲ್ಲಿ ಜಾಗ ಸಿಕ್ಕುವುದಿಲ್ಲವೆಂದ ತಕ್ಷಣ ಆರ್ಥಿಕ ದೃಷ್ಟಿಯಿಂದ ಕೆಟ್ಟದ್ದು ಎಂದು ಹೇಳುವುದು ಕಷ್ಟವಾಗುತ್ತದೆ ನೈತಿಕ ದೃಷ್ಟಿಯಿಂದ ಬೇರ ವಿಷಯ. ಆದರೆ ಆರ್ಥಿಕ ದೃಷ್ಟಿಯಿಂದ ಎಕನಾಮಿಕ್ ಆಕ್ಟಿವಿಟ್ ಜಾಸ್ತಿ ಮಾಡುವ ದೃಷ್ಟಿಯಿಂದ ಕೆಲವು ಒಳ್ಳೆಯ ಅಂಶಗಳನ್ನು ಕೂಡ ನಾವು ಕಾಣಬಹುದು. ಗ್ಯಾಂಬ್ಲಿಂಗ್ ಇನ್‌ಸ್ಟಿಂಕ್ಟ್, ಆದಾಯದ ದೃಷ್ಟಿಯಿಂದ ತೆಗೆದುಕೊಂಡರೆ ಹೋದ ವರ್ಷ ೧ ಕೋಟಿ ೪೦ ಲಕ್ಷ ರೂಪಾಯಿ ಆದಾಯ ಬಂದಿದ್ದು ಈ ವರ್ಷ ಒಂದು ಕೋಟಿ ೬೫ ಲಕ್ಷ ರೂಪಾಯಿ ಬರುತ್ತದೆ. ಆದಾಯಕ್ಕೋಸ್ಕರ ಪ್ರೋತ್ಸಾಹ ಕೊಡಬೇಕೆಂದು ನಾನು ಹೇಳುತ್ತಿಲ್ಲ. ಗ್ಯಾಂಬ್ಲಿಂಗ್ ಇನ್‌ಸ್ಟಿಂಕ್ಟ್ ಏನಿದೆ, ಮನುಷ್ಯನ ಸ್ವಭಾವವೇನಿದೆ ಅದನ್ನು ಇದ್ದಕ್ಕಿದ್ದ ಹಾಗೆ ಬದಲಾಯಿಸುವದಕ್ಕೆ ಅಥವಾ ತೆಗೆದು ಹಾಕಲಿಕ್ಕೆ ಸಾಧ್ಯವಿಲ್ಲ. ಒಟ್ಟಿನಲ್ಲಿ ಗ್ಯಾಂಬ್ಲಿಂಗ್ ಮಾಡುವ ವ್ಯವಸ್ಥೆ ಒಂದು ಸೋಷಿಯಲ್ ಕಂಟ್ರೋಲ್, ಸಮಾಜದ ಹತೋಟಿಯಲ್ಲಿ ಸರಕಾರದ ಮೇಲ್ವಿಚಾರಣೆಯಲ್ಲಿ ನಡೆದರೆ ಅದರಿಂದ ಅಪಾಯವನ್ನು ಸ್ವಲ್ಪ ಮಟ್ಟಿಗೆ ಕಡಮೆ ಮಾಡುವದಕ್ಕೆ ಸಾಧ್ಯ. ಇನ್ಸಿಡೆಂಟಲ್ ಆಗಿ ಇದರ ಜೊತೆಗೆ ಏನು ಆದಾಯ ಬರುತ್ತದೆ. ಆ ಆದಾಯವನ್ನು ಕೂಡ ಸಾಮಾಜಿಕ ಕೆಲಸಗಳಿಗೋಸ್ಕರ ಉಪಯೋಗಿಸುವದಕ್ಕೆ ಸಾಧ್ಯವಾಗುತ್ತದೆ. Organised gambling under proper supervision is better than unbridled gambling, which does more harm. All human values are relative. ಇದ್ದುದರಲ್ಲಿ ಯಾವದು ಒಳ್ಳೆಯದು ಎಂಬುವನ್ನು ನಾವು ನೋಡಬೇಕು. ಈ ಪರಿಸ್ಥಿತಿ ಇರುವುದರಿಂದ ನಾವು ರೇಸಿಂಗ್ ಏನಿದೆ ಅದನ್ನು ಒಮ್ಮೆಲೇ ರದ್ದು ಮಾಡುವದಕ್ಕೆ ಆಗುತ್ತದೆ ಎಂದು ಹೇಳುವದಕ್ಕೆ ಸಾಧ್ಯವಾಗುವದಿಲ್ಲ.

1-00 P. M.

ಈಗ ಲಾಟರಿ ತೆಗೆದುಕೊಳ್ಳಿ, ಲಾಟರಿ ಪ್ರಾರಂಭವಾದಾಗ ಬಹಳ ಜನಪ್ರಿಯವಾಗಿತ್ತು. ಈಗ ಜನಪ್ರಿಯತೆ ಕಡಿಮೆ ಆಗುತ್ತಿದೆ. ಇನ್ನು ಕೆಲವು ದಿವಸ ಹೋದ ನಂತರ, ಲಾಟರಿ ಪಾಪ್ಯುಲ್ಯಾರಿಟಿ ಕಡಿಮೆಯಾದರೆ ಅದನ್ನು ಕೈಬಿಡುವ ಕಾಲ ಬರಬಹುದು.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯಿಡು.—ಜನ ಬಡವರು ಆದರು.

ಶ್ರೀ ಎಂ. ವೈ. ಘೋರ್ಪಡೆ.—ಗ್ಯಾಂಬ್ಲಿಂಗ್ ಆಡಲೇಬೇಕು ಎನ್ನುವ ಮನಸ್ಸು ಇರುವವರು ಗ್ಯಾಂಬ್ಲಿಂಗ್‌ನ್ನು ಆಡೇ ಆಡುತ್ತಾರೆ. ಮಟಕ ಆಡಿ ಹಾಳಾಗಿ ಹೋಗ ಬಹುದು. ರಸ್ತೆಯಲ್ಲಿ ಕಾರ್ ನಂಬರ್ಸ್ ನೋಡಿಬಿಟ್ಟು ಅದರ ಮೇಲೆ ಗ್ಯಾಂಬ್ಲಿಂಗ್ ಮಾಡುತ್ತಾರೆ. ಗ್ಯಾಂಬ್ಲಿಂಗ್ ಮಾಡುವುದಕ್ಕೆ ಸಾವಿರಾರು ವಿಧಾನಗಳಿವೆ. ರೇಸಿಂಗ್ ತಕ್ಷಣ ನಮ್ಮ ರಾಜ್ಯದಲ್ಲಿ ನಿಲ್ಲಿಸುವುದರಿಂದ, ಗ್ಯಾಂಬ್ಲಿಂಗ್ ಮಾಡುವುದನ್ನು ಜನ ಕೈಬಿಡುತ್ತಾರೆಂದು ಹೇಳುವುದಾದರೆ ಅದು ವಾಸ್ತವಿಕವಾಗಿ ಸರಿಯಲ್ಲ. ಗ್ಯಾಂಬ್ಲಿಂಗ್ ನಡೆಯುವುದು ಒಳ್ಳೆಯದು, ಲಾಟರಿ ಒಳ್ಳೆಯದು, ಕುಡಿಯುವುದು ಒಳ್ಳೆಯದು, ಬೇರೆ ಸಮಾಜದಲ್ಲಿ ಇರತಕ್ಕ ಬೇರೆ ಬೇರೆ ಅಂಶಗಳು ಒಳ್ಳೆಯದೆಂದು ನಾನು ವಾದ ಮಾಡುವುದಕ್ಕೆ ಬರಲಿಲ್ಲ. ವಾಸ್ತವಿಕವಾದ ಪರಿಸ್ಥಿತಿ ಏನು ಇದೆ ಅದನ್ನು ಅರ್ಥ ಮಾಡಿಕೊಂಡು ಪ್ರಾಕ್ಟಿಕಲ್ ಆಗಿ ಏನು ಮಾಡಲಿಕ್ಕೆ ಸಾಧ್ಯ ಎಂದು ಯೋಚನೆ ಮಾಡಬೇಕಾಗುತ್ತದೆ. ಹಾಗೆ ಮಾಡದೆ ಒಮ್ಮೆಗೆ ರೇಸಿಂಗ್‌ನ್ನು ಕೈಬಿಡಲಿಕ್ಕೆ ಸಾಧ್ಯ ವಾಗುವುದಿಲ್ಲ.

ಇನ್ನು ವಿಂಟರ್ ರೇಸಿಂಗ್ ಬಗ್ಗೆ ಬಹಳ ದೊಡ್ಡ ಚರ್ಚೆಯಾಯಿತು. ವಿಂಟರ್ ರೇಸಿಂಗ್ ಬಗ್ಗೆ ಹೇಳಿಕೆ ಕೊಡುವಾಗ ಸ್ಪಷ್ಟವಾಗಿ ಹೇಳಿದೆ. ವಿಂಟರ್ ರೇಸಿಂಗ್ ಮೈಸೂರು ರಾಜ್ಯದಲ್ಲಿ ೬೨ ರೇಸಿಂಗ್ ಮೀಟ್ ಆಗುತ್ತಿದ್ದುದು ೭೮ ರೇಸ್ ಮೀಟ್ ಆಗುತ್ತಿದೆ. ಬೆಂಗಳೂರಿನಲ್ಲಿ ೪೦ ಇದ್ದುದು ೬೦ ಆಗುತ್ತದೆ. ವಾರಕ್ಕೆ ಒಂದು ಸಲ ಮಾತ್ರ ವಿಂಟರ್ ರೇಸ್ ಮಾಡುತ್ತಾರೆ. ಬೆಂಗಳೂರಿನಲ್ಲಿ ಇರತಕ್ಕ ಜನರಿಗೆ ಇದರಿಂದ ವಿಪರೀತ ತೊಂದರೆಯಾಗುತ್ತದೆಯೇ ಎಂಬುದನ್ನು ಕಾದು ನೋಡಬೇಕು. ವಿಂಟರ್ ರೇಸಸ್ಸ್ ಮಾಡುವುದಕ್ಕೆ ಒಪ್ಪಿದ್ದೇವೆ. ಅದರಿಂದ ಬಹಳ ತೊಂದರೆಯಾದರೆ ನಾವು ಅದರ ಬಗ್ಗೆ ಪರಿಶೀಲನೆ ಮಾಡೋಣ ವಿಂಟರ್ ರೇಸಿಂಗ್ ಮಾಡಕೂಡದು ಎಂದು ಹೇಳುವುದು ಅಷ್ಟೊಂದು ಸರಿಯಲ್ಲ. ಕಲಕತ್ತಾದಲ್ಲಿ, ಮದ್ರಾಸಿನಲ್ಲಿ ಮತ್ತು ಬೊಂಬಾಯಿಯಲ್ಲಿ ಇದೇ ರೀತಿ ಕಾರ್ಯಕ್ರಮ ಹಾಕಿಕೊಂಡಿದ್ದಾರೆ ಇದರಿಂದ ಬಡಜನ ಮಾತ್ರ ಹಾಳಾಗುತ್ತಾರೆ ಎನ್ನುವ ವಾದ ಏನು ಇದೆ ಅದನ್ನು ಕೂಡ ಅಷ್ಟು ಸಂಪೂರ್ಣವಾಗಿ ಒಪ್ಪಲಿಕ್ಕೆ ಆಗುವುದಿಲ್ಲ. ಗ್ಯಾಂಬ್ಲಿಂಗ್ ಆಡುವ ಜನ ಹೆಚ್ಚಾಗಿ ಶ್ರೀಮಂತರೇ ಇದ್ದಾರೆ. ಬೆಟ್ಟಿಂಗ್ ಟ್ಯಾಕ್ಸ್ ಫಸ್ಟ್ ಎನ್‌ಕ್ಲೋಜರ್‌ನಲ್ಲಿ ೪ ಕೋಟಿ ೬೫ ಲಕ್ಷ ಆದರೆ, ಸೆಕೆಂಡ್ ಎನ್‌ಕ್ಲೋಜರ್‌ನಲ್ಲಿ ೪೫ ಲಕ್ಷ ಮಾತ್ರವಾಗುತ್ತದೆ. ಅಂದಮೇಲೆ ಏನು ಬೆಟ್ಟಿಂಗ್ ಮಾಡುತ್ತಾರೆ ಅದರಲ್ಲಿ ೯೦

ಪರಸೆಂಟ್ ಶ್ರೀಮಂತರೇ ಮಾಡುತ್ತಾರೆ. ೧೦ ಪರಸೆಂಟ್ ಆರ್ಥಿಕವಾಗಿ ದುರ್ಬಲರು ಇರತಕ್ಕ ಜನರು ಮಾಡುತ್ತಾ ಇರಬಹುದು. ಈ ಒಂದು ಅಂಕಿಸಂಖ್ಯೆಗಳನ್ನು ನೋಡಿದರೆ ಇವತ್ತು ನಮ್ಮ ದೇಶದಲ್ಲಿ ರೇಸಿಂಗ್ ಏನು ನಡೆಯುತ್ತಿದೆ ಅದು ಮೈಸೂರು ರಾಜ್ಯದಲ್ಲಿ ಒಳ್ಳೆಯ ರೀತಿಯಿಂದ ನಡೆಸಲಿಕ್ಕೆ ಅವಕಾಶ ಇದೆ. ಇದರಿಂದ ಎಂಪ್ಲಾಯ ಮೆಂಟಿಗೂ ಅನಕಾಶವಾಗುತ್ತದೆ. ವಿಂಟರ್ ರೇಸಿಂಗ್ ಬೆಂಗಳೂರು ಜನತೆಗೆ ಬಹಳ ತೊಂದರೆಯಾದರೆ ಅದರ ಬಗ್ಗೆ ಪುನಃ ಸರ್ಕಾರ ಯೋಚನೆ ಮಾಡಲಿಕ್ಕೆ ಅವ ಕಾಶವಿರುತ್ತದೆ. ಅದರ ಬಗ್ಗೆ ನಾವು ಘಾಬರಿ ಆಗಬೇಕಾದ್ದು ಇಲ್ಲ. ಇವತ್ತಿಗೆ ರೇಸಿಂಗ್ ಸಂಪೂರ್ಣ ರದ್ದು ಮಾಡುತ್ತೇವೆ ಎಂದು ಹೇಳುದ ಪರಿಸ್ಥಿತಿಯಲ್ಲಿ ಸರ್ಕಾರ ಇಲ್ಲ. ಆದುದರಿಂದ ಈ ಎಲ್ಲಾ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಸ್ನೇಹಿತರಾದ ಶಾಮಣ್ಣನವರು ಈ ನಿರ್ಣಯವನ್ನು ಪಾಪಸ್ಸು ಗೆಗೆದುಕೊಳ್ಳ ಬೇಕೆಂದು ನಾನು ವಿನಂತಿ ಮಾಡುತ್ತೇನೆ.

†ಶ್ರೀ ಟಿ. ಆರ್. ಶಾಮಣ್ಣ.—ರೇಸಿಂಗ್‌ನಿಂದ ಯಾವ ಪ್ರಯೋಜನವಿಲ್ಲ, ಅನುಕೂಲಕ್ಕಿಂತ ಅನಾನುಕೂಲವೇ ಜಾಸ್ತಿ. ಸರ್ಕಾರಕ್ಕೆ ಬರತಕ್ಕ ಒಂದುವರೆ ಕೋಟಿ ರೂಪಾಯಿಗಳನ್ನು ಅದು ಕಳೆದುಕೊಳ್ಳುವುದಕ್ಕೆ ಸಿದ್ಧವಾಗಿಲ್ಲ. ಸಂಬಂಧ ಪಟ್ಟ ಸ್ಟೀವರ್ಡ್‌ಸ್ ಪ್ರಭಾವಶಾಲಿಗಳಾಗಿದ್ದಾರೆ. ಪ್ರಭಾವಶಾಲಿಗಳ ವಿರೋಧ ಕಟ್ಟಿಕೊಳ್ಳುವುದು ಸಾಧ್ಯವಿಲ್ಲ. ಆದುದರಿಂದ ರೇಸಿಂಗ್ ತೆಗೆದುಹಾಕುವುದಕ್ಕೆ ಸಾಧ್ಯವಿಲ್ಲ ಎಂದು ಸ್ಪಷ್ಟವಾಗಿ ಹೇಳಿರುವುದರಿಂದ ನನ್ನ ನಿರ್ಣಯಕ್ಕೆ ಬೆಂಬಲ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎಂ. ವೈ. ಘೋರ್ಪಡೆ.— ಮೆಂಬರ್ಸ್ ಬಗ್ಗೆ ಏನು ಹೇಳಿದ್ದಾರೆ. ಅದನ್ನು ಒಪ್ಪಿ ಕೊಳ್ಳುತ್ತೇನೆ. ಮೆಂಬರಷಿಪ್ ಜಾಸ್ತಿ ಮಾಡಬೇಕು ಎಂದು ಅದರ ಬಗ್ಗೆ ಸ್ಪಷ್ಟವಾಗಿ ರೇಸ್ ಕ್ಲಬಿಗೆ ಹೇಳಿದ್ದೇವೆ ಮೆಂಬರಷಿಪ್ ಜಾಸ್ತಿ ಮಾಡಲು ಒಂದು ಸಬ್ ಕಮಿಟಿ ಕೂಡ ಅವರು ಮಾಡಿದ್ದಾರೆ. ಈಗ ಮೆಂಬರ್‌ಷಿಪ್ ೨೦೦ ಇದೆ. ಅದನ್ನು ಜಾಸ್ತಿ ಮಾಡಬೇಕು ಎಂದು ಸ್ಪಷ್ಟವಾಗಿ ಹೇಳಿದ್ದೇವೆ. ಅವರೂ ಆ ಬಗ್ಗೆ ಕಾರ್ಯಕ್ರಮ ಕೈಗೊಳ್ಳುತ್ತಿದ್ದಾರೆ. ಅವರು ಒಂದು ಸಬ್ ಕಮಿಟಿ ಮಾಡಿದ್ದಾರೆ.

ಶ್ರೀ. ಟಿ. ಆರ್. ಶಾಮಣ್ಣ.— ನಾನು ನಿರ್ಣಯವನ್ನು ತಾತ್ವಿಕ ದೃಷ್ಟಿ ಯಿಂದ ತಂದಿರುವುದರಿಂದ ನನ್ನ ಒಂದು ಓಟನ್ನಾದರೂ ಅದಕ್ಕೆ ಕೊಡುತ್ತೇನೆ. ಆದ್ದರಿಂದ ನಾನು ಹಿಂದಕ್ಕೆ ತೆಗೆದುಕೊಳ್ಳಲು ಇಷ್ಟ ಪಡುವುದಿಲ್ಲ ಇದನ್ನು ಓಟಿಗೆ ಹಾಕಬೇಕೆಂದು ಒತ್ತಾಯ ಮಾಡುತ್ತೇನೆ.

MR. DEPUTY SPEAKER.— I will put the resolution to the vote of the House.

The question is:

"This Assembly recommends to Government to take steps to abolish conduting of the horse races in Bangalore and Mysore Cities in order to protect the people from the evil effects of the race and betting."

The motion was negatived.

(IV) Re: NON-AVAILABILITY OF FERTILIZERS IN BIJAPUR DISTRICT

MR. DEPUTY SPEAKER.— We shall take up the next resolution and this is of Sri P.M. Bangi.

Sri P.M.BANGI(Jamakhandi).–"That this Assembly views with greater concern the non-availability of fertilizers in the irrigated areas of Bijapur District viz., Jamkhandi, Mudhol and Bilagi Taluks and urges upon the Government to take immediate steps to alleviate the suffering of farmers by rushing adequate fertilizers to these areas."

MR. DEPUTY SPEAKER.— Resolution moved.

"This Assembly views with great concern the non-availability of fertilizers in the irrigated areas of Bijapur District viz., Jamkhandi, Mudhol and Bilagi Taluks and urges upon the Government to take immediate steps to alleviate the suffering of farmers by rushing adequate fertilizers to these areas."

MR.DEPUTY SPEAKER.–The House now stands adjourned to meet again on Monday the 24th September 1973 at 1 p.m.

[The House adjourned at Ten Minutes past One of the Clock to meet again at One of the Clock on Monday the 24th September 1973.]